Editor: NITYANANDASWAMI Publisher: U. BASAVARAJA RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

ದುಡಿಯುವ ಜನರ ಪ್ರಾಣಮಿತ್ರ

JANASHAKTHI KANNADA VARA PATRIKE

ಸಂಪುಟ–18 | ಸಂಚಿಕೆ–48 | ನವೆಂಬರ್ 25–ಡಿಸೆಂಬರ್ 1, 2024 | ಪುಟ 16 | ರೂ.10/–
Volume-18 | Issue-48 | November 25-December 1, 2024 | Pages:16 | Price: 10/-



ನಿರುದ್ಯೋಗ: ಯುವ ಬದುಕಿಗೆ ಬರೆ ದೇಶಕ್ಕೆ ಹೊರೆ

ರೇಷನ್ ಕಾರ್ಡ್ ಕಡಿತ ಗೊಂದಲ

ಅದಾನಿ ಲಂಚ ಹಗರಣ ಅಮೇರಿಕಾದಲ್ಲಿ ಬಯಲು

370 ನೇ ವಿಧಿ ಮೋ-ಶಾ ತಂತ್ರಗಳು



ಬ್ರಿಟಿಷರು ಗೆದ್ದ ಟಿಪ್ಪು ಸುಲ್ತಾನನ ಖಡ್ಗ ಕಲಕತ್ತಾದ ಮಾರ್ವಾಡಿಗಳ ವಶಕ್ಕೆ ಹೇಗೆ ಬಂತು?

ಈ ವ್ಯಾಪಾರಿ ಗಣ ಮೊಘಲರ ಮತ್ತು ನವಾಬರ ಸೇವೆಯಲ್ಲಿ ತಮ್ಮ ಸಂಪತ್ತನ್ನು ಹಲವು ಪಟ್ಟು ವೃದ್ಧಿಸಿಕೊಂಡಿದ್ದವರು ತಮ್ಮ ಹಣದ ಸಂಪತ್ತು, ರಾಜಕೀಯ ಸ್ಥಾನ, ತಂತ್ರಗಾರಿಕೆ, ಬುದ್ಧಿವಂತಿಕೆಯನ್ನು ಬ್ರಿಟಿಷರಿಗೆ ಒತ್ತೆಯಿಟ್ಟು, ಅವರು ಭಾರತವನ್ನು ಆಕ್ರಮಿಸಿಕೊಳ್ಳಲು ಸಹಾಯ ಮಾಡಿದರು. ಬಂಡವಾಳಕ್ಕೆ, ಬಂಡವಾಳಗರಿಗೆ ಲಾಭ, ದುರ್ಲಾಭಗಳನ್ನು ಬಿಟ್ಟರೆ ಬೇರೇನೂ ಲೆಕ್ಕಕ್ಕಿಲ್ಲ ಎಂಬುದಕ್ಕೆ ಮಾರವಾಡಿ, ಪಾರ್ಸಿ ವರ್ತಕರ ಈ ವರ್ತನೆ ಐತಿಹಾಸಿಕ ಸಾಕ್ಷಿಯಾಗಿದೆ.

ಜಿ.ಎನ್. ನಾಗರಾಜ್

ಭಾಗ 6

ಟಿಪ್ಪು ಸುಲ್ತಾನನ ಖಡ್ಗಕ್ಕೂ ಕಲಕತ್ತಾದ ಮಾರವಾಡಿಗಳಿಗೂ ಏನು ಸಂಬಂಧ! ಬೆಟ್ಟದ ಮೇಲಿನ ಮಾವಿನಕಾಯಿ, ಸಮುದ್ರದೊಳಗಣ ಉಪ್ಪು ಎತ್ತಣಿಂದೆತ್ತ ಸಂಬಂಧವಯ್ಯಾ? ಎನ್ನುತ್ತಾಳೆ ಅಕ್ಕ.

ಇದು ಎರಡು ಶತಮಾನಗಳ ಕಾಲದ ಕತೆ. ಅಕ್ಬರನ 16ನೇ ಶತಮಾನದ ಕಾಲದಿಂದ ಆರಂಭಿಸಿ, ಬ್ರಿಟಿಷರು ಭಾರತವನ್ನು ಆಕ್ರಮಿಸುವವರೆಗಿನ 19ನೇ ಶತಮಾನದವರೆಗಿನ ದೀರ್ಘ ಕಾಲದ ಕತೆ.

ಗುಜರಾತ್ ನ ಬಂದರುಗಳು ಮತ್ತು ಆಗ್ರಾ, ದೆಹಲಿ, ಲಕ್ನೋ, ಪಾಟ್ನಾ, ಲಾಹೋರ್ ಮೊದಲಾದ ನಗರಗಳ ನಡುವಣ ವ್ಯಾಣಿಜ್ಯ ಮಾರ್ಗದ ಮೇಲೆ ಇದ್ದುದರಿಂದ ವ್ಯಾಪಾರ ವೃದ್ಧಿಸಿತು. ಈ ಪ್ರದೇಶದಲ್ಲಿ ವಿವಿಧ ರಜಪೂತ ಸಂಸ್ಥಾನಗಳು ಬೆಳೆದವು. ಮಹಾರಾಷ್ಟ್ರ, ಮಧ್ಯ ಭಾರತದ ಮರಾಠ ಸಂಸ್ಥಾನಗಳು, ಭಾರತದ ಮೊಘಲ ಚಕ್ರವರ್ತಿಗಳು ಈ ಪ್ರದೇಶವನ್ನು ವಶಪಡಿಸಿಕೊಳ್ಳಲು ಮಾಡಿದ ಯುದ್ಧಗಳು ಹಾಗೂ ರಾಜಿಯ ಸಂದರ್ಭಗಳಲ್ಲಿ ಗುಜರಾತ್ ನ ಪಾರ್ಸಿಗಳು, ಜೈನ ಬನಿಯಾಗಳು, ವಲ್ಲಭಾಚಾರ್ಯರ ವೈಷ್ಣವ ಪಂಥಕ್ಕೆ ಸೇರಿದ ಗುಜರಾತ್ ಮತ್ತು ರಾಜಸ್ಥಾನದ ಬನಿಯಾಗಳು, ಪಂಜಾಬಿನಲ್ಲಿ ಸಿಖ್ ಧರ್ಮದ ಹುಟ್ಟಿಗೆ ಕಾರಣರಾದ ಖತ್ರಿಗಳ ವ್ಯಾಪಾರ, ಸಾಲ ನೀಡಿಕೆ, ಸಂಪತ್ತು ಅಪಾರವಾಗಿ ವೃದ್ಧಿಸಿತು.



ಟಿಪ್ಪು ಸುಲ್ತಾನ

ವ್ಯಾಪಾರ, ಬಡ್ಡಿ ಸಾಲದ ಮತ್ತು ತೆರಿಗೆ ವಸೂಲಿ ಏಕತ್ರವಾಗಿ ಬಲಶಾಲಿಯಾಯಿತು

ಮಾರವಾಡಿಗಳ ವೈಷ್ಣವ ಪಂಥ ಅವರಿಗೆ ಉತ್ತರ ಭಾರತದಾದ್ಯಂತ ಮಾನ್ಯತೆ ಒದಗಿಸಿದರೆ, ಮೊಘಲರ ವಿಶಾಲ ಸಾಮ್ರಾಜ್ಯದಲ್ಲಿ ನಾಣ್ಯ, ಅಳತೆ, ತೂಕಗಳ ಸಾಮಾನ್ಯ ಮಾನದಂಡಗಳು ಪಶ್ಚಿಮದಿಂದ ಪೂರ್ವದವರೆಗೆ ವ್ಯಾಪಿಸಿತು. ಈ ವ್ಯಾಪಾರ ವಿಸ್ತರಣೆ ಮೊಘಲ ಆಡಳಿತಗಾರರಿಂದ ಹಾಗೂ ಅದರ ಪ್ರಭಾವದಿಂದ ಇತರ ರಾಜ, ಸುಲ್ತಾನರುಗಳಿಂದ ಹಣ ರೂಪದಲ್ಲಿ ತೆರಿಗೆ, ಕಂದಾಯ ವಸೂಲಿ ಆರಂಭವಾಯಿತು. ಇದರ ಫಲವಾಗಿ ಅಲ್ಲಿಯವರೆಗೆ ತಮ್ಮ ಧಾನ್ಯಗಳು, ಬಟ್ಟೆ, ಕಬ್ಬಿಣದ ವಸ್ತುಗಳು ಮೊದಲಾದ ಕುಶಲ ಉತ್ಪಾದನೆಗಳನ್ನೇ ತೆರಿಗೆ, ಕಂದಾಯವಾಗಿ ಕೊಡುತ್ತಿದ್ದ ರೈತರು, ಕುಶಲ ಕೆಲಸಗಾರರು ತಮ್ಮ ಬೆಳೆ, ಉತ್ಪಾದನೆಗಳನ್ನು ವ್ಯಾಪಾರಿಗಳಿಗೆ ಮಾರಿ, ಅವರಿಂದ ಹಣ ಪಡೆದು ತೆರಿಗೆ, ಕಂದಾಯಗಳನ್ನು ಪಾವತಿಸುವ ಅನಿವಾರ್ಯತೆ ಉಂಟಾಯಿತು. ಈ ಎಲ್ಲ ಧಾನ್ಯಗಳು, ವಸ್ತುಗಳು ಸರಕುಗಳಾಗಿ ಮಾರುಕಟ್ಟೆಯನ್ನು ಪ್ರವೇಶಿಸಿದ್ದರಿಂದ, ಒಂದು ಕಡೆ ವ್ಯಾಪಾರದ ಜಾಲ ಹಲ ಹಲವು ಪಟ್ಟು ವೃದ್ಧಿಸಿತು. ಅವರು ದೊಡ್ಡ ಪ್ರಮಾಣದಲ್ಲಿ ರೈತರು ಬೆಳೆದ ಆಹಾರಧಾನ್ಯಗಳನ್ನು ಅತ್ಯಂತ ಕಡಿಮೆ ಬೆಲೆಯಲ್ಲಿ ಕೊಂಡು ದಾಸ್ತಾನು ಮಾಡುವುದು, ಅವುಗಳ ಬೆಲೆಯನ್ನು ವಿಪರೀತ ಏರಿಸಿ ನಂತರ ಕಾಳಸಂತೆಯಲ್ಲಿ ಮಾರುವುದು ಇಂತಹ ದುರ್ವ್ಯವಹಾರಗಳಿಗೆ ಅಪರಿಮಿತ ಅವಕಾಶ ಸಿಕ್ಕಿತು. ಇಲ್ಲಿಯವರೆಗೆ ಕಂದಾಯ ವಸೂಲಿಗಾರರು ರೈತರಿಗೆ ಸರಿಯಾಗಿ ಬೆಳೆ ಬಾರದಿರುವ ಸಮಯದಲ್ಲಿಯೂ ಒತ್ತಾಯ, ದೌರ್ಜನ್ಯ ನಡೆಸಿ ಆಹಾರ ಧಾನ್ಯಗಳನ್ನು ವಸೂಲಿ ಮಾಡುತ್ತಿದ್ದರು. ಆದರೆ ಕೇವಲ ಕಂದಾಯ ನಿಗದಿಯಾಗಿರುವ ಭಾಗದಷ್ಟು ಮಾತ್ರ, ಅದನ್ನು ಸಾಮ್ರಾಟನ ಅಧಿಕಾರಿಗಳ ಮೂಲಕ ನಗರಗಳ ಜನರಿಗೆ ಧಾನ್ಯ ರೂಪದಲ್ಲಿ ಅವರ ಸಂಬಳ ನೀಡುತ್ತಿದ್ದರು. ಆದರೆ ಈಗ ಕಡಿಮೆ ಬೆಲೆಯಲ್ಲಿ ಕೊಳ್ಳುವ ಕಾರಣ ಅವರು ಕಂದಾಯ ನೀಡಲು ಹಿಂದಿಗಿಂತ ಹೆಚ್ಚು ಧಾನ್ಯಗಳನ್ನು ಮಾರಬೇಕಾಗಿತ್ತು. ನಗರಗಳ ಜನರಿಗೆ ಇವು ದುಬಾರಿ ಬೆಲೆಗಳಲ್ಲಿ ಮಾತ್ರ ಲಭ್ಯವಾಗುತ್ತಿದ್ದವು. ತೆರಿಗೆ, ಕಂದಾಯಗಳನ್ನು ಆಡಳಿತಗಾರರಿಗೆ ತೆರಲು ವ್ಯಾಪಾರಗಾರರೇ ಸಾಧನಗಳಾದ್ದರಿಂದ, ಅವರು ಹಲವು ಪ್ರದೇಶಗಳ ತೆರಿಗೆ ಕಂದಾಯ ವಸೂಲಿ ಮತ್ತು ಪಾವತಿಯನ್ನು ತಾವೇ ವಹಿಸಿಕೊಂಡರು. ಇಲ್ಲಿಯವರೆಗೆ ಈ ಕರ್ತವ್ಯ ಮೊಘಲ ಆಡಳಿತದ ಪಾಳೆಯಗಾರಿ ಸುಬೇದಾರ್ ಮೊದಲಾದ ಪ್ರತಿಷ್ಠಿತರ ವಶದಲ್ಲಿದ್ದದ್ದು ವ್ಯಾಪಾರಿಗಳ ಕೈಗೆ ಬಂತು. ರೈತರು ಕುಶಲ ಕೆಲಸಗಾರರು ಜೀವನಕ್ಕೆ ಆದಾಯ ಸಾಲದೆ ತೆರಿಗೆ, ಕಂದಾಯ ಬಾಕಿ ಉಳಿಸಿಕೊಳ್ಳುವುದು ಮಾಮೂಲಿ ತಾನೇ. ಅವರುಗಳು ಈ ಪಾವತಿಗಳಿಗೆ ವ್ಯಾಪಾರಗಾರರಿಂದ ಸಾಲ ಪಡೆಯಲಾರಂಭಿಸಿದರು. ಸಾಮಾನ್ಯ ರೈತರು ಮಾತ್ರವಲ್ಲ, ದೊಡ್ಡ ಜಹಗೀರುದಾರರು, ಜಮೀನುದಾರರು ಕೂಡಾ ವ್ಯಾಪಾರಿಗಳಿಂದ ಸಾಲ ಪಡೆಯುವುದು ಅನಿವಾರ್ಯವಾಯಿತು. ಕಂದಾಯ ವಸೂಲಿ ಇನ್ನೂ ಸುಬೇದಾರ ಮೊದಲಾದವರ ವಶದಲ್ಲಿದ್ದ ಪ್ರದೇಶಗಳಲ್ಲಿ ಕೂಡಾ ಅವರು ತೆರಿಗೆ, ಕಂದಾಯವನ್ನು ತಮ್ಮ ವೈಭವದ ಜೀವನಕ್ಕೆ ಬಳಸಿಕೊಂಡು ವ್ಯಾಪಾರಿಗಳಿಂದ ಸಾಲ ಪಡೆದರು.

ರಾಜ, ಸುಲ್ತಾನರುಗಳ ವಿಜಯ, ಸೋಲನ್ನು ನಿರ್ಧರಿಸಿತು ಮಾರ್ವಾಡಿಗಳ ವ್ಯವಹಾರ



ಇದರ ಪರಿಣಾಮವಾಗಿ ಅತ್ಯಂತ ದುಬಾರಿ ಬಡ್ಡಿ ದರ ವಿಧಿಸಲಾರಂಭಿಸಿದರು. ಈ ಎಲ್ಲ ವ್ಯಾಪಾರ ವಿಸ್ತರಣೆ ಹಾಗೂ ಸಾಲದ ವ್ಯವಹಾರಗಳ ಫಲವಾಗಿ ಅವರ ಸಂಪತ್ತು ಮತ್ತಷ್ಟು ವೃದ್ಧಿಸಿತು. ಮತ್ತಷ್ಟು ದೊಡ್ಡ ಪ್ರಮಾಣದಲ್ಲಿ ಸಾಲ ನೀಡಿಕೆ, ವಿವಿಧ ಪ್ರದೇಶಗಳ ಕಂದಾಯ ವಸೂಲಿ ಗುತ್ತಿಗೆ ಹಿಡಿಯಲಾರಂಭಿಸಿದರು. ಹೀಗೆ ಅವರು ಆಡಳಿತದ ಕಾರ್ಯಗಳನ್ನು ವಹಿಸಿಕೊಳ್ಳಲಾರಂಭಿಸಿದರು. ಈ ಎಲ್ಲ ವ್ಯವಹಾರಗಳಲ್ಲಿ ಮಾರವಾಡಿ ವ್ಯಾಪಾರಿಗಳದು ಬಹು ದೊಡ್ಡ ಭಾಗ. ಅವರು ರಾಜಸ್ಥಾನದ ಗಡಿಯಿಂದ ಬಂಗಾಲದ ಸುಲ್ತಾನರ ರಾಜಧಾನಿಗಳಾದ ಢಾಕಾ ಮೊದಲಾದ ನಗರಗಳವರೆಗೆ ಇವರ ವ್ಯವಹಾರ ವ್ಯಾಪಿಸಿತು. ಉದಾಹರಣೆಗೆ ಮಹಾರಾಷ್ಟ್ರದ ಮುಖ್ಯ ನಗರವಾದ ನಾಗಪುರದಲ್ಲಿ ಇದ್ದ ಹದಿನೇಳು ವ್ಯಾಪಾರಿ ವಂಶಗಳಲ್ಲಿ 15 ಮಾರವಾಡಿಗಳು. ಹೀಗೆ ಗುಜರಾತ್ ನ ನೆರೆಯ ಮಹಾರಾಷ್ಟ್ರದಲ್ಲಿಯೂ ಮಾರವಾಡಿ ವ್ಯಾಪಾರಿ ಮತ್ತು ಬಡ್ಡಿ ಸಾಹುಕಾರರದೇ ಪ್ರಾಧಾನ್ಯವಾಗಿತ್ತು. ಹೀಗೆ ಅವರು ಬನಾರಸ್, ಪಾಟ್ನಾ ಮೊದಲಾದ ನಗರಗಳಲ್ಲಿ ಮುಖ್ಯ ಸ್ಥಾನದಲ್ಲಿದ್ದರು. ವ್ಯಾಪಾರಿಗಳಲ್ಲಿ ಮರಾಠ ಆಕ್ರಮಣದ ಜೊತೆಗೆ ದಕ್ಷಿಣ ಭಾರತದ ಹಲವು ನಗರಗಳಿಗೆ ಪ್ರವೇಶ ಪಡೆದರು. ಹಲವು ಮಾರವಾಡಿ ಕುಟುಂಬಗಳು ಬಂಗಾಲದಲ್ಲಿಯೇ ನೆಲೆಯೂರಿದವು. ದೇಶದ, ಮುಖ್ಯವಾಗಿ ಮಧ್ಯ ಭಾರತ, ಉತ್ತರ ಭಾರತ, ಬಂಗಾಲಗಳ ಹಲವು ನಗರಗಳಲ್ಲಿ ನಗರ ಶ್ರೇಷ್ಠಿ (ನಗರ ಸೇಠ್) ಆದರು.



ಅಕ್ಬರ್

ಈ ವ್ಯಾಪಾರಿಗಳ ಪ್ರಾಮುಖ್ಯತೆ ಎಷ್ಟಿತ್ತೆಂದರೆ, ಅಂದಿನ ಮರಾಠ ಪೇಶ್ವೆಗಳ ಸರ್ಕಾರ ವ್ಯಾಪಾರಿಗಳ ವಿಷಯವಾಗಿಯೇ ಒಂದು ಆಜ್ಞಾಪತ್ರ (ರಾಜಾಜ್ಞೆ) ಹೊರಡಿಸಿತ್ತು. "ಸಾಹುಕಾರರು ರಾಜ್ಯಕ್ಕೆ ಆಭರಣವಿದ್ದಂತೆ. ಅವರು ಸಂಸ್ಥಾನ ಸಂಪದ್ಯುಕ್ತವಾಗುವಂತೆ ಮಾಡುತ್ತಾರೆ. ಅವರಿಗೆ ಗೌರವ ಮತ್ತು ರಕ್ಷಣೆ ಕೊಡಬೇಕು. ವ್ಯಾಪಾರಿಗಳಲ್ಲಿ ಪ್ರಮುಖರಾದವರಿಗೆ ರಾಜಾಸ್ಥಾನದ ಪ್ರಮುಖರು ವಾಸ ಮಾಡುವ ಪ್ರದೇಶದಲ್ಲಿ ವಾಸ ಮಾಡಲು ಅವಕಾಶ ನೀಡಬೇಕು."

ರಜಪೂತ–ಮೊಘಲ ಮೈತ್ರಿ ಮತ್ತು ಅವರ ವೈಷ್ಣವ ಪಂಥದ ಅಂಗೀಕಾರ ಮಾರವಾಡಿಗಳು ಉತ್ತರ ಭಾರತವನ್ನೆಲ್ಲ ವ್ಯಾಪಿಸುವುದಕ್ಕೆ ಸಹಾಯಕವಾಯಿತು. ಇರಾನ್, ಮಧ್ಯ ಏಷಿಯಾಕ್ಕೂ ವಿಸ್ತರಿಸಿತು. ಅದೇ ಸಮಯದಲ್ಲಿ ಪಂಜಾಬಿನ ಸಿಖ್ ಗುರುಗಳು ಮತ್ತು ಮೊಘಲರ ನಡುವಣ ತೀವ್ರ ಸಂಘರ್ಷ ಅವರು ಇಂತಹ ದೇಶ ವ್ಯಾಪ್ತಿಯನ್ನು ಪಡೆದುಕೊಳ್ಳಲು ಸಹಾಯಕವಾಗಲಿಲ್ಲ. ಆದರೂ ಕೈಬೆರಳಿನಲ್ಲಿ ಎಣಿಸುವಷ್ಟು ಮಾತ್ರ ಸಿಖ್ ವ್ಯಾಪಾರಿ ಕುಟುಂಬಗಳನ್ನು ಉತ್ತರ ಭಾರತ ಮತ್ತು ಬಂಗಾಲಗಳಲ್ಲಿ ಕಾಣಬಹುದು. ನಂತರದ ಕಾಲದಲ್ಲಿ ರಣಜಿತ್ ಸಿಂಗ್ ಸ್ಥಾಪಿಸಿದ ಸಿಖ್ ಸಂಸ್ಥಾನ ಲಾಹೋರ್, ಪೇಶಾವರ್, ರಾವಲ್ಪಿಂಡಿ ಮೊದಲಾದ ನಗರಗಳನ್ನು ಒಳಗೊಂಡ ಪಾಕಿಸ್ತಾನದ ಬಹುಭಾಗ, ಜಮ್ಮು ಮತ್ತು ಕಾಶ್ಮೀರ, ಅಫಘಾನಿಸ್ತಾನಗಳಿಗೆ ವ್ಯಾಪಿಸಿದಾಗ, ಆ ಪ್ರದೇಶಗಳಲ್ಲಿ ಮತ್ತು ಅಲ್ಲಿಂದ ಮಧ್ಯ ಏಷಿಯಾ ಮೊದಲಾದ ಕಡೆಗಳಲ್ಲಿ ಹೆಚ್ಚು ವ್ಯಾಪಿಸಿದರು. ಜೈನರು ಕೂಡಾ ಅಲ್ಲಲ್ಲಿ ತಮ್ಮ ನೆಲೆಗಳನ್ನು ಸ್ಥಾಪಿಸಿದರೂ ಅದು ಸೀಮಿತವಾಗಿತ್ತು.

ಹುಂಡಿ ಬ್ಯಾಂಕುಗಳ ಸ್ಥಾಪನೆ

ಇಡೀ ಉತ್ತರ ಭಾರತ ವ್ಯಾಪ್ತಿಯಲ್ಲಿ ವ್ಯಾಪಾರ, ವಹಿವಾಟು ಅಪಾರ ಹೆಚ್ಚಳವಾಗಿದ್ದು ಒಂದು ಕಡೆ ಮತ್ತು ತೆರಿಗೆ, ಕಂದಾಯಗಳ ವಸೂಲಿ ಮತ್ತು ಪಾವತಿ ಮತ್ತೊಂದು ಕಡೆ, ಜೊತೆಗೆ ಯುದ್ಧಗಳಿಗೆ ಸಾಲ ನೀಡಿಕೆ ಇತ್ಯಾದಿಗಳು ಅಪಾರ ಪ್ರಮಾಣದ ಹಣವನ್ನು ಒಂದೆಡೆಯಿಂದ ಮತ್ತೊಂದೆಡೆಗೆ ಸಾಗಿಸುವ ಅವಶ್ಯಕತೆ ಉಂಟು ಮಾಡಿದವು. ಇದು ಕಳ್ಳತನ, ಲೂಟಿ ದರೋಡೆಗಳಿಗೆ ಅವಕಾಶ ಮಾಡಿಕೊಡುವುದು ಸಾಮಾನ್ಯ. ಆದ್ದರಿಂದ ಒಂದು ಹೊಸ ಹಣ ವಿನಿಮಯ ಪದ್ಧತಿ ಅತ್ಯವಶ್ಯವಾಯಿತು. ಇದರಿಂದ ಹುಂಡಿ ಪದ್ಧತಿ ಎಂಬುದು ವ್ಯಾಪಾರಿಗಳ ನಡುವೆ ಬೆಳೆದು ಬಂದಿತು. ಇದು ಬ್ಯಾಂಕಿಂಗ್ ವ್ಯವಸ್ಥೆಯ ಒಂದು ಮುಖ್ಯ ಆಯಾಮ. ಇಲ್ಲಿ ನಾವು ಬ್ಯಾಂಕಿಗೆ ಹಣ ಕಟ್ಟಿ ಅದನ್ನು ದೂರದಲ್ಲಿರುವವರಿಗೆ ಚೆಕ್ ಕಳಿಸಿ ಅಲ್ಲಿಯ ಬ್ಯಾಂಕ್ ಶಾಖೆಯಲ್ಲಿ ಪಾವತಿ ಪಡೆಯುವಂತೆ. ಇಂತಹ ದೇಶವ್ಯಾಪಿ ಪಾವತಿ ಜಾಲ ಹೊಂದಿದ ಹುಂಡಿ ಬ್ಯಾಂಕುಗಳನ್ನು ಮಾರವಾಡಿ ವ್ಯಾಪಾರಿಗಳು ಸ್ಥಾಪಿಸಿದರು.

ಒಟ್ಟಾರೆಯಾಗಿ ವ್ಯಾಪಾರಿಗಳ ಜಾಲ ದೇಶೋವಿಶಾಲವಾಗಿ ವಿಸ್ತರಿಸಿತು. ಅವರು ಬಡ್ಡಿ ಸಾಹುಕಾರರೂ ಆದರು. ತೆರಿಗೆ ವಸೂಲಿ ಮಾಡತೊಡಗಿದರು. ಯುದ್ಧಗಳಲ್ಲಿ ಹಣ ತೊಡಗಿಸಿದರು. ಆಡಳಿತಗಾರರಿಗೇ ಸಾಲ ಕೊಡತೊಡಗಿದರು. ಆಡಳಿತದಲ್ಲಿ, ಮುಖ್ಯವಾಗಿ ತೆರಿಗೆ ಸಂಗ್ರಹದಲ್ಲಿ ಪಾತ್ರ ವಹಿಸಿದರು. ಬ್ಯಾಂಕಿಂಗ್ ವ್ಯವಹಾರಗಳಲ್ಲಿ ತೊಡಗಿದರು. ಹೀಗೆ ಬೆಳೆದು ಕೆಲವರು ಜಗತ್ ಶೇಟ್ ಗಳಾದರು.

ಜಗತ್ ಶೇಟ್

ನಗರ ಶೇಟ್‌ಗಳ ಬಗ್ಗೆ ಮೇಲೆ ಓದಿದ್ದೀರಿ. ಇದು ಭಾರತಾದ್ಯಂತ ವಾಣಿಜ್ಯ ನಗರಗಳಲ್ಲಿ ಇದ್ದಂತಹ ಒಂದು ಗಣ್ಯ ಸ್ಥಾನ. ಕರ್ನಾಟಕದಲ್ಲಿಯೂ ಇಲ್ಲಿಯ ಬಣಜಿಗರು ನಗರ ಶ್ರೇಷ್ಠಿ ಎಂಬ ಸ್ಥಾನವನ್ನು ಆಳುವವರ ಮಾನ್ಯತೆಯನ್ನು ಪಡೆದಿದ್ದರು. ಆದರೆ ಜಗತ್ ಸೇಠ್‌ನ್ನಾಗಿ ಬೆಳೆದ ಒಬ್ಬನ ಪ್ರಸಂಗವನ್ನು ಇಂತಹ ದೊಡ್ಡ ಸೇಠ್‌ಗಳ ಟಿಪಿಕಲ್ ಮಾದರಿಯಾಗಿ ತಿಳಿದುಕೊಳ್ಳೋಣ.

ಅಲ್ಲಿಯ ಸಂಸ್ಥಾನ ಜೈಪುರದ ಮಹಾರಾಜನಾಗಿದ್ದ ಮಾನ್ ಸಿಂಗ್ ಮೊಘಲ್ ಸಾಮ್ರಾಜ್ಯದ ಸೈನ್ಯದ ಒಬ್ಬ ಪ್ರಸಿದ್ಧ ಸರದಾರನಾಗಿ, ಭಾರತದ ಹಲವೆಡೆಗಳಲ್ಲಿ ಮೊಘಲರ ಸಾಮ್ರಾಜ್ಯ ವಿಸ್ತರಣೆ, ಸಂರಕ್ಷಣೆಯಲ್ಲಿ ತೊಡಗಿದ್ದವನು. ಅವನ ಸಂಸ್ಥಾನದ ದೊಡ್ಡ ಮಾರವಾಡಿ, ಓಸ್ವಾಲ್ ವಂಶಕ್ಕೆ ಸೇರಿದ ಹೀರಾನಂದ್ ಸಾಹೂ ಮಾನ್ ಸಿಂಗನ ಸೈನ್ಯಕ್ಕೆ ಸರಬರಾಜುದಾರ, ಬಡ್ಡಿ ಸಾಹುಕಾರನಾಗಿದ್ದವನು. ಕೊನೆಗೆ ಬಿಹಾರದಲ್ಲಿ ನೆಲೆಯೂರಿದ. ಅವನ ಮಗ ಮಾಣಿಕ್ ಚಂದ್ ಬಿಹಾರ, ಬಂಗಾಲ, ಒರಿಸ್ಸಾಗಳನ್ನು ವ್ಯಾಪಿಸಿದ್ದ ಬಂಗಾಲ ಸಂಸ್ಥಾನದ ಪುಟ 12 ಕ್ಕೆ

ರೇಷನ್ ಕಾರ್ಡ್ ಗೊಂದಲ ನಿವಾರಿಸಿ

ಸಂಪಾದಕೀಯ

ಕರ್ನಾಟಕ ರಾಜ್ಯದಲ್ಲಿ ಮತ್ತು ಕೇಂದ್ರದಲ್ಲಿ ಯಾವ ಸರಕಾರಗಳು ಅಧಿಕಾರದಲ್ಲಿದ್ದರೂ ರೇಷನ್ ಕಾರ್ಡ್‌ಗಳ ವಿಷಯದಲ್ಲಿ ಸದಾ ಕಾಲ ಜನರನ್ನು ಒಂದಲ್ಲ ಒಂದು ಬಗೆಯ ಆತಂಕಕ್ಕೆ ದೂಡುವುದು ಮಾತ್ರ ಎಗ್ಗಿಲ್ಲದಂತೆ ನಡೆದುಕೊಂಡೇ ಬರುತ್ತಿದೆ.

ಇದೀಗ ಕೇಂದ್ರ ಸರಕಾರ 5.8 ಕೋಟಿ ರೇಷನ್ ಕಾರ್ಡುಗಳನ್ನು ರದ್ದು ಮಾಡಿದ್ದು, ರಾಜ್ಯ ಸರಕಾರವೂ ಅದೇ ದಾರಿಯಲ್ಲಿ ಹೆಜ್ಜೆ ಹಾಕಿರುವುದು ಖಂಡನಾರ್ಹ. ರಾಜ್ಯದ ಆಹಾರ ಸಚಿವ ಮುನಿಯಪ್ಪನವರ ಹೇಳಿಕೆಯಂತೆ 8647 ಕಾರ್ಡುಗಳನ್ನು ಅಮಾನತು ಮಾಡಲಾಹಿದೆ. 59,379 ಕಾರ್ಡುಗಳನ್ನು ಬಿ.ಪಿ.ಎಲ್. ಕಾರ್ಡುಗಳನ್ನು ಎ.ಪಿ.ಎಲ್. ಕಾರ್ಡುಗಳಾಗಿ ಪರಿವರ್ತಿಸಲಾಗಿದೆ. ಅದರಲ್ಲಿ 16,806 ಕಾರ್ಡ್ ಗಳನ್ನು ಬಿ.ಪಿ.ಎಲ್ ಆಗಿಯೇ ಮುಂದುವರಿಸಲಾಗುವುದು ಎಂದು ವಿವರಿಸಿದ್ದಾರೆ. ಆಹಾರ ಭದ್ರತಾ ಕಾಯ್ದೆಯಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಶೇ.75 ರಷ್ಟು ಹಾಗೂ ನಗರ ಪ್ರದೇಶಗಳಲ್ಲಿ ಶೇ.50 ರಷ್ಟು ಕುಟುಂಬಗಳಿಗೆ ಮಾತ್ರವೇ ಬಿ.ಪಿ.ಎಲ್. ಕಾರ್ಡುಗಳನ್ನು ನೀಡುವ ಅವಕಾಶ ಇದ್ದು 'ಅನರ್ಹ'ರಿಗೆ ನೀಡಲಾಗಿರುವ ರೇಷನ್ ಕಾರ್ಡುಗಳನ್ನು ರದ್ದು ಮಾಡಬೇಕೆಂದು ಕೇಂದ್ರ ಸರಕಾರ ನೀಡಿದ ನಿರ್ದೇಶನದಂತೆ ಅನರ್ಹರನ್ನು ಗುರುತಿಸಿ ಕಾರ್ಡುಗಳನ್ನು ರದ್ದು ಮಾಡಲಾಗಿದೆ ಎಂದು ರಾಜ್ಯದ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ಸಚಿವರು ಹೇಳಿದ್ದಾರೆ.

ಮಾಧ್ಯಮಗಳ ವರದಿ ಪ್ರಕಾರ ರಾಜ್ಯದಲ್ಲಿ 13.87 ಲಕ್ಷ ಕುಟುಂಬಗಳನ್ನು ಬಿ.ಪಿ.ಎಲ್. ಕಾರ್ಡು ಪಡೆಯಲು ಅನರ್ಹ ಎಂದು ಗುರುತಿಸಿದ್ದು 3.64 ಲಕ್ಷ ಕಾರ್ಡುಗಳನ್ನುರದ್ದುಪಡಿಸಲಾಗಿದೆ. ಆದರೆ ಸಚಿವರ ಪ್ರಕಾರ ಸರಕಾರಿ ನೌಕರರು ಮತ್ತು ಆದಾಯ ತೆರಿಗೆ ಪಾವತಿಸುವ 1.2 ಲಕ್ಷ ಕುಟಂಬಗಳ ಬಿ.ಪಿ.ಎಲ್. ಕಾರ್ಡುಗಳನ್ನು ಮಾತ್ರ ರದ್ದುಪಡಿಸಲಾಗಿದೆ.

ರೇಷನ್ ಕಾರ್ಡುಗಳಿಗೆ ಪ್ಯಾನ್ ಕಾರ್ಡ್ ಜೋಡಿಸುವ ಸಂಬಂಧ ವಿಳಂಬ ದಂಡ ಪಾವತಿಸಿರುವ ಕುಟುಂಬಗಳನ್ನೂ ಆದಾಯ ತೆರಿಗೆ ಪಾವತಿಸುತ್ತಿರುವವರ ಪಟ್ಟಿಗೆ ಸೇರಿಸಿ ಅವರ ಬಿಪಿಎಲ್ ಕಾರ್ಡನ್ನು ರದ್ದು ಪಡಿಸಲಾಗಿದೆ. ಬಿ.ಪಿ.ಎಲ್. ಕಾರ್ಡುಗಳನ್ನು ಪಡೆಯಲು ಕುಟುಂಬದ ವಾರ್ಷಿಕ ಆದಾಯದ ಮಿತಿಯು 1.2 ಲಕ್ಷ ಇದ್ದು ಅದರಂತೆ ಕುಟುಂಬಗಳು ತಮ್ಮ ಆದಾಯ ಪ್ರಮಾಣ ಪತ್ರವನ್ನು ಸಲ್ಲಿಸಿವೆ. ಆದರೆ ಅವೇ ಕುಟುಂಬಗಳು ಬ್ಯಾಂಕುಗಳಲ್ಲಿ ಅಗತ್ಯ ಪ್ರಮಾಣದ ಸಾಲ ಪಡೆಯಲು ಅಥವಾ ಸಾಲ ಮರುಪಾವತಿ ಸಾಮರ್ಥ್ಯವನ್ನು ಖಾತ್ರಿಪಡಿಸಲು ತಮ್ಮ ಕುಟುಂಬದ ವಾರ್ಷಿಕ ಆದಾಯವನ್ನು ಸ್ವಲ್ಪ ಹೆಚ್ಚಾಗಿ ತೋರಿಸಿ ಆದಾಯ ಪ್ರಮಾಣ ಪತ್ರ ಸಲ್ಲಿಸಿದ್ದು ಅಂತಹವರ ಬಿ.ಪಿ.ಎಲ್. ಕಾರ್ಡುಗಳನ್ನು ರದ್ದುಪಡಿಸಿರುವುದಾಗಿಯೂ ವರದಿಯಾಗಿದೆ. ಮತ್ತೊಂದೆಡೆ ಕಳೆದ ಆರು ತಿಂಗಳಿನಿಂದಲೂ ಬಿ.ಪಿ.ಎಲ್. ಕಾರ್ಡುಗಳಲ್ಲಿ ಆಹಾರ ಧಾನ್ಯಗಳನ್ನು ಪಡೆದುಕೊಳ್ಳದ 1.37 ಲಕ್ಷ ಕುಟುಂಬಗಳ ಬಿ.ಪಿ.ಎಲ್. ಕಾರ್ಡುಗಳನ್ನು ರದ್ದು ಪಡಿಸಲು ಗುರುತು ಮಾಡಲಾಗಿದೆ.

ಈ ಮೇಲಿನ ವರದಿಗಳನ್ನು ನೋಡಿದಾಗ ಜನರು ಸುಳ್ಳು ಆದಾಯ ಪ್ರಮಾಣ ಪತ್ರಗಳನ್ನು ಕೊಟ್ಟಿದ್ದಾರೆಂದೂ, ಬೇಕಿಲ್ಲದವರೂ ಬಿ.ಪಿ.ಎಲ್. ಕಾರ್ಡುಗಳನ್ನು ಪಡೆದಿದ್ದಾರೆಂದು ಮೇಲ್ನೋಟಕ್ಕೆ ಕಾಣುತ್ತದೆ. ಆದರೆ ವಾಸ್ತವ ಅಷ್ಟು ಸರಳವಲ್ಲ.

ಮೊದಲನೆಯದಾಗಿ ಜನರು ಬೇರೆ ಬೇರೆ ಬಗೆಯ ಆದಾಯ ಪ್ರಮಾಣ ಪತ್ರಗಳನ್ನು ಕೊಟ್ಟಿದ್ದಲ್ಲಿ ಅದಕ್ಕೆ ಸರಕಾರಗಳ ಅವೈಜ್ಞಾನಿಕ ನೀತಿಗಳೇ ಕಾರಣ. ದುಬಾರಿ ಬದುಕಿನ ಈ ಕಾಲದಲ್ಲಿ, ಬಿ.ಪಿ.ಎಲ್. ಕಾರ್ಡುಗಳನ್ನು ಪಡೆಯಲು ಕುಟುಂಬದ ತಿಂಗಳ ಆದಾಯ 10 ಸಾವಿರ ಮೀರಬಾರದೆಂಬ ಮಾನದಂಡವೇ ಕ್ರೂರ. ಸರಕಾರಿ ಆಸ್ಪತ್ರೆಗಳಲ್ಲಿ 'ಆಯುಷ್ಮಾನ್ ಭಾರತ ಯೋಜನೆ'ಗೆ ಬಿ.ಪಿ.ಎಲ್. ಕಾರ್ಡ್ ಮಾನದಂಡವಾಗಿದೆ. ಮತ್ತೊಂದೆಡೆ ವೈದ್ಯಕೀಯ ವೆಚ್ಚ ವಿಪರೀತವಾಗಿ ಏರುತ್ತಿದೆ.

ಬಿ.ಪಿ.ಎಲ್. ಎ.ಪಿ.ಎಲ್. ಎಂಬ ಬೇಧಭಾವ ಇಲ್ಲದೇ ಅಗತ್ಯ ಇರುವ ಎಲ್ಲರಿಗೂ ಉತ್ತಮ ಗುಣಮಟ್ಟದ ಆಹಾರ ಧಾನ್ಯ ಇತ್ಯಾದಿಗಳನ್ನು ಅಗತ್ಯ ಪ್ರಮಾಣದಲ್ಲಿ ನೀಡಿದರೆ, ಸರಕಾರಿ ಆಸ್ಪತ್ರೆಗಳಲ್ಲಿ ಎಲ್ಲರಿಗೂ ಉತ್ತಮ ಉಚಿತ ಆರೋಗ್ಯ ಸೌಕರ್ಯ ದೊರೆತರೆ ಬಡ ಜನರು ಬಿ.ಪಿ.ಎಲ್. ರೇಷನ್ ಕಾರ್ಡುಗಳಿಗೆ ಬಡಿದಾಡಬೇಕಾದ ಅಗತ್ಯ ಇರುವುದಿಲ್ಲ. ವರ್ಷದ ಎಲ್ಲ ದಿನಗಳಲ್ಲಿಯೂ ಪಡಿತರ ಚೀಟಿಗೆ ಅರ್ಜಿ ಹಾಕುವ ಮುಕ್ತ ಅವಕಾಶ ಕೇರಳದ ಎಡ ಪ್ರಜಾಸತ್ತಾತ್ಮಕ ರಂಗದ ಸರ್ಕಾರ ಕಲ್ಪಿಸಿದೆ. ಅದನ?ನು ಈ ಸರ್ಕಾರ ಅನುಸರಿಸಬೇಕಿದೆ.

'ಆಹಾರ ಭದ್ರತಾ ಕಾಯ್ದೆ'ಯ ಮಾನದಂಡವೂ ಪ್ರಶ್ನಾರ್ಹವೇ. ನಗರ ಪ್ರದೇಶಗಳಲ್ಲಿ ಶೇ. 50 ಕ್ಕಿಂತಲೂ ಹೆಚ್ಚು ಬಡವರು, ಹಾಗೆ ಗ್ರಾಮಾಂತರ ಪ್ರದೇಶಗಳಲ್ಲಿ ಶೇ. 75 ಕ್ಕಿಂತಲೂ ಹೆಚ್ಚು ಜನರು ಬಡವರಾಗಿರುವ ಸಾಧ್ಯತೆ ಇದ್ದೇ ಇದೆ.

ಹೀಗಾಗಿ ಅವೈಜ್ಞಾನಿಕ ಮಾನದಂಡಗಳನ್ನು ನಿಗದಿ ಮಾಡಿ ಜನರನ್ನೇ ಅಪರಾಧಿಗಳನ್ನಾಗಿ ಬಿಂಬಿಸುವುದು ಆಳುವ ಸರಕಾರಗಳ ಮಾಹಾಪರಾಧ. ಈ ದೋಷ ಮೊದಲು ನಿವಾರಣೆಯಾಗಬೇಕು. ಈಗ ಸದ್ಯಕ್ಕೆ ರೇಷನ್ ಕಾರ್ಡುಗಳ ಸಂಬಂಧ ಸಮಸ್ಯೆಗಳನ್ನು ಸರಕಾರ ತುರ್ತಾಗಿ ಬಗೆಹರಿಸಬೇಕು. ಕಾರ್ಡು ರದ್ದಾಗಿರುವ ಎಲ್ಲ ಅರ್ಹರಿಗೆ ಬಿ.ಪಿ.ಎಲ್. ಕಾರ್ಡುಗಳು ಸಿಗಬೇಕು. ಹೊಸದಾಗಿ ಅರ್ಜಿ ಹಾಕಲು ಸರಿಯಾದ ಅವಕಾಶ ನೀಡಿ, ಎಲ್ಲ ಅರ್ಹರಿಗೆ ಬಿ.ಪಿ.ಎಲ್. ಕಾರ್ಡುಗಳನ್ನು ನೀಡಬೇಕು.

ರಾಜ್ಯ ಹಣಕಾಸು ಇಲಾಖೆಯ ಪ್ರಕಾರ ರಾಜ್ಯದಲ್ಲಿ 1.47 ಕೋಟಿ ಕುಟುಂಬಗಳಿದ್ದು ಶೇ.85 ರಷ್ಟು ಕುಟುಂಬಗಳು ಬಿ.ಪಿ.ಎಲ್. ಕಾರ್ಡುಗಳನ್ನು ಪಡೆದಿವೆ. ಸಚಿವರ ಪ್ರಕಾರ ರಾಜ್ಯದಲ್ಲಿ ಶೇ. 65.96 ರಷ್ಟು ಕುಟುಂಬಗಳು ಬಿ.ಪಿ.ಎಲ್. ಕಾರ್ಡುಗಳನ್ನು ಪಡೆದುಕೊಂಡಿವೆ. ಈ ವ್ಯತ್ಯಾಸಗಳೇ ಸರಕಾರದ ಮಾನದಂಡಗಳು ಅಂಕಿ–ಅಂಶಗಳು ಸಮರ್ಪಕವಲ್ಲ ಎಂದು ಸಾರುತ್ತವೆ. ದೇಶದ ಆಹಾರ ಭದ್ರತೆ ಎಂದರೆ ಕೇವಲ ಅಂಕಿ–ಸಂಖ್ಯೆಗಳ ಕಸರತ್ತಲ್ಲ ಎಂಬುದನ್ನು ಸರಕಾರಗಳು ಅರಿಯಬೇಕು.

ಬೆಂಗಳೂರು ನಿವಾಸಿ, ಉತ್ತರ ಕನ್ನಡ ಜಿಲ್ಲೆಯ ಶಿರಸಿ ಮೂಲದ ಶ್ರೀಪಾದ ಹೆಗ್ಡೆಯವರ ಕುಟುಂಬ ಇತ್ತೀಚೆಗೆ ಯೂರೋಪ್ ಪ್ರವಾಸವನ್ನು ಮಾಡಿ ಬಂದಿದೆ. ಅವರು ಪ್ರಸಿದ್ಧ ಪ್ರವಾಸಿ ಕೇಂದ್ರ ಹಾಗೂ ಜಾಗತಿಕ ಕ್ರಿಶ್ಚಿಯನ್ ಧಾರ್ಮಿಕ ಶ್ರದ್ಧಾಕೇಂದ್ರವಾದ ವ್ಯಾಟಿಕನ್ ನಗರಕ್ಕೆ ಭೇಟಿ ಕೊಟ್ಟಾಗಿನ ಸಂದರ್ಭದ ಅನುಭವ ಹಾಗೂ ಈ ಅನುಭವವು ನೆನಪಿನ ಮುನ್ನೆಲೆಗೆ ತಂದ ಬಾಲ್ಯಕಾಲದ ಹಾಗೂ ವರ್ತಮಾನದ ಹಲವು ಸ್ವಾರಸ್ಯಕರ ವಿಚಾರಗಳನ್ನು ಇಲ್ಲಿ ಹಂಚಿಕೊಂಡಿದ್ದಾರೆ.

ನಮ್ಮ ದೇಶಕ್ಕೆ ದರಿದ್ರತನ–ರೋಗ ರುಜಿನಗಳು ಬಂದದ್ದು ಹೀಗಂತೆ!!

'ಇಲ್ಲೆಲ್ಲೋ ಒಂದು ಕೃಷ್ಣನ ಮೂರ್ತಿ..'

ನಾವು ವ್ಯಾಟಿಕನ್ ಸಿಟಿಗೆ ಹೋಗಿ ನಿಂತು ಅದರ ಸೊಬಗನ್ನು ಸವಿಯುತ್ತಿದ್ದಾಗ ನನ್ನ ಹೆಂಡತಿ ಅಲ್ಲಿ ನಿಲ್ಲಿಸಿರುವ ಕ್ರಿಶ್ಚಿಯನ್ ಮೈಥೊಲೊಜಿ(ಪುರಾಣ)ಗೆ ಸಂಬಂಧಿಸಿದ ನೂರಾರು ವಿಗ್ರಹಗಳನ್ನು ನೋಡಿಯೋ ಏನೋ ಇಲ್ಲೆಲ್ಲೋ ಒಂದು ಕೃಷ್ಣನ ಮೂರ್ತಿ ಇದೆಯಂತೆ, ಅದನ್ನು ಅವರು ಮರೆಮಾಡಿ ಇಟ್ಟಿದ್ದಾರಂತೆ ಎಂದೂ, ಹಾಗೂ ಸಾಧ್ಯವಾದರೆ ಅದನ್ನು ಹುಡುಕಿ ನೋಡಿ ಬನ್ನಿ ಎಂದೂ, ಬೆಂಗಳೂರಿನ ನಮ್ಮ ಮೊಹಲ್ಲಾದ ಅವಳ ಪರಿಚಿತಳೊಬ್ಬಳು ಹೇಳಿದ್ದನ್ನು ನೆನಪು ಮಾಡಿಕೊಂಡಳು.

ಅಲ್ಲಿ ನೆಲ ಮಾಳಿಗೆಯಲ್ಲಿ ವಿಷ್ಣು ಪಾದ!!

ಮೆಕ್ಕಾದ ನೆಲ ಮಾಳಿಗೆಯೊಂದರಲ್ಲಿ ವಿಷ್ಣು ಪಾದವಿದೆ. ಅದು "ಓ ಬ್ರಾಹ್ಮಣ, ನನಗೆ ಇಲ್ಲಿ ಒಂದು ತೊಟ್ಟು ನೀರು ಸಹ ಬಿಡುವವರಿಲ್ಲ. ನನ್ನನ್ನು ಇಲ್ಲಿಂದ ಬಿಡಿಸಿ ಕರೆದೊಯ್ಯೋ" ಎಂದು ಹಗಲು ರಾತ್ರಿ ಕೂಗುತ್ತಿದೆಯಂತೆ. ಅಲ್ಲಿನ ಮಂತ್ರವಾದಿಗಳು ಅದನ್ನು ಬಂಧಿಸಿಟ್ಟಿದ್ದಾರಂತೆ. ಅದನ್ನು ಅಲ್ಲಿಂದ ಬಿಡಿಸಿ ತರುವುದು ಸುಲಭದ ಮಾತಲ್ಲ, ಅಂತಹ ತಪಃಶಕ್ತಿ ಇದ್ದವರಿಗೆ ಮಾತ್ರ ಸಾಧ್ಯವಂತೆ ಎಂಬ ಕತೆಯನ್ನು ನಮ್ಮೂರಿನಲ್ಲಿ ಹಲವರಿಂದ ಹಲವು ಬಾರಿ ಕೇಳಿದ್ದ ನನಗೆ ಇದನ್ನು ಕೇಳಿ ಅಚ್ಚರಿಯೇನೂ ಆಗಲಿಲ್ಲ.

ಹಿಕ್ಮತ್ತು

ನನ್ನ ಬಾಲ್ಯದಲ್ಲಿ ಮೆಕ್ಕಾದಲ್ಲಿರುವ ವಿಷ್ಣು ಪಾದದ ಕಟ್ಟು ಕತೆಯನ್ನು ಕೇಳಿದಾಗೆಲ್ಲ ಅವರೇಕೆ ಹಿಂದು ಧರ್ಮದ ದೇವರ ಪಾದವನ್ನು ಅಲ್ಲಿಗೆ ಒಯ್ದರು ಎನ್ನುವ ಪ್ರಶ್ನೆ ಪ್ರತಿ ಬಾರಿಯೂ ಉದ್ಭವಿಸಿ ಅದಕ್ಕೆ ಸಮಾಧಾನಕರ ಉತ್ತರ ಸಿಕ್ಕದೆ ತೊಳಲಾಡಿದ್ದೇನೆ. ಆ ಮುಗ್ಧ ವಯಸ್ಸಿನಲ್ಲಿ ನಾನೇ ತಪಸ್ಸು ಮಾಡಿ ಅಂತಹ ಶಕ್ತಿಯನ್ನು ಗಳಿಸಿಕೊಳ್ಳಬೇಕು ಎಂದು ಮನಸಿನಲ್ಲಿ ಹಲವು ಬಾರಿ ನಿರ್ಧರಿಸಿಕೊಂಡಿದ್ದೂ ಇದೆ. ಮುಗ್ಧತನ ಕಳೆದು ಹದಿಹರೆಯಕ್ಕೆ ಕಾಲಿಟ್ಟ ಮೇಲೆ ಈ ಕತೆಯನ್ನು ಕೇಳಿದಾಗ ಇದೊಂದು ನಿಮ್ಮ ಮೂಢನಂಬಿಕೆಯೆಂದು ಮೂದಲಿಸುತ್ತಿದ್ದೆ. ಆದರೂ ಇಂತಹ ಕತೆಗಳು ಯಾಕೆ ಹುಟ್ಟಿಕೊಳ್ಳಬೇಕು ಎನ್ನುವುದು ಅರ್ಥವಾಗಿರಲಿಲ್ಲ. ನಂತರ ನಾನು ಬೆಳೆದಂತೆ ಇದರ ಹಿಂದಿರುವ ಹಿಂದೂ ಮೂಲಭೂತವಾದಿಗಳ ಹಿಕ್ಮತ್ತು ಅರಿವಾಗುತ್ತಾ ಹೋಯಿತು. ಆ ಸಂದರ್ಭದಲ್ಲಿ ಈ ಕತೆಯನ್ನು ಸಮರ್ಥಿಸಿಕೊಳ್ಳುವವರನ್ನು ನಮ್ಮೂರಿನಲ್ಲಿ ನಾನು ಹಲವು ಬಾರಿ ಎದುರಾಗಿದ್ದೇನೆ.

ತಿರುಗಿ ದೇಶಕ್ಕೆ ತರುವುದರಿಂದ...

ನಮ್ಮ ಪವಿತ್ರ ದೇವರುಗಳನ್ನು ಹೀಗೆ ಅಪಹರಿಸಿ ದೇಶದ ಹೊರಗೆ ಒಯ್ದಿದ್ದರಿಂದ ನಮ್ಮ ದೇಶಕ್ಕೆ ದರಿದ್ರತನ ಬಂದು ಬಡತನದಿಂದ ಮತ್ತು ರೋಗ ರುಜಿನಿಗಳಿಂದ ಸಂಕಟ ಪಡುವಂತಾಗಿದೆ ಮತ್ತು ಮೆಕ್ಕಾಕ್ಕೆ ವಿಷ್ಣು ಪಾದವನ್ನು (ಮುಸ್ಲಿಮ್ ಆಡಳಿತದ ಅವಧಿಯಲ್ಲಿ) ಒಯ್ದಿದ್ದರಿಂದಲೇ ಅರಬ್ ಪ್ರಾಂತ್ಯದ ಮುಸ್ಲಿಮ್ ದೇಶಗಳು ಶ್ರೀಮಂತ ದೇಶಗಳಾಗಿ ಹೊರಹೊಮ್ಮಲು ಸಾಧ್ಯವಾಗಿದೆ. ಅದನ್ನು ತಿರುಗಿ ದೇಶಕ್ಕೆ ತರುವುದರಿಂದ ದೇಶ ಪುನಃ ಎಲ್ಲ ಕ್ಷೇತ್ರಗಳಲ್ಲಿಯೂ ಸಂಪದ್ಭರಿತವಾಗುತ್ತದೆ ಎನ್ನುವುದು ಅವರ ಎಲ್ಲ ವಾದಗಳ ತಿರುಳಾಗಿತ್ತು. ಹಾಗಾದರೆ ನಮ್ಮ ದೇವರು ಅನ್ಯ ದೇಶಗಳ ಅನ್ಯ ಧರ್ಮೀಯರ ಕೈಗೆ ಸೆರೆ ಸಿಗುವಷ್ಟು ಮತ್ತು ಅಲ್ಲಿಂದ ತಪ್ಪಿಸಿಕೊಂಡು ಬರಲಾಗದಷ್ಟು ದುರ್ಬಲನೇ? ಎನ್ನುವ ನನ್ನ ಪ್ರಶ್ನೆಗೆ ಯಾರೂ ಉತ್ತರಿಸಿರಲಿಲ್ಲ. ಬದಲಾಗಿ ನಾನೊಬ್ಬ ಅಧಿಕ ಪ್ರಸಂಗಿ ಎಂದು ನನ್ನ ಮೇಲೆ ಹರಿಹಾಯುತ್ತಿದ್ದರು.

ಕಾಳ್ಗಿಚ್ಚಿನಂತಹ ಸುದ್ದಿ

ಅಂದು ಎಪ್ರಿಲ್ 19, 1973. ವರದಹಳ್ಳಿಯ ಅವಧೂತ, ಶ್ರೀಧರ ಸ್ವಾಮಿಗಳು ನಿಧನರಾದ ದಿನ. ಆಗ ನಾನು ಕಾಲೇಜಿನಲ್ಲಿ ಓದುತ್ತಿದ್ದೆ. ಕಾಳ್ಗಿಚ್ಚಿನಂತೆ ನಮ್ಮೂರ ಕಡೆಯ ಹಳ್ಳಿಗಳಲ್ಲಿ ಶ್ರೀಧರ ಸ್ವಾಮಿಗಳ ನಿಧನದ ಸುದ್ದಿ ಹರಡಿತು. ತಂಡೋಪತಂಡವಾಗಿ ಜನ ವರದಹಳ್ಳಿಗೆ ಧಾವಿಸಿದ್ದರು. ಅವರ ಸಮಾಧಿ ಕಾರ್ಯವನ್ನು ಮುಗಿಸಿ ಬಂದವರಲ್ಲಿ ಅನೇಕರು ಹೇಳಿದ್ದೆಂದರೆ, 'ಶ್ರೀಧರ ಸ್ವಾಮಿಗಳು ತಾವು ಗಳಿಸಿದ ತಪಃಶಕ್ತಿಯಿಂದ ತಾತ್ಕಾಲಿಕವಾಗಿ ಶರೀರವನ್ನು ತ್ಯಜಿಸಿ ಅಶರೀರರಾಗಿ ವಿಷ್ಣು ಪಾದವನ್ನು ತರುವುದಕ್ಕೋಸ್ಕರ ಮೆಕ್ಕಾಕ್ಕೆ ಹೋಗಿದ್ದರು. ಅದನ್ನು ಅರಿಯದ ಪಾಮರರು ಅವರ ಶರೀರವನ್ನು ಹುಗಿದು ಸಮಾಧಿ ಮಾಡಿ ಅವರು ಮತ್ತೆ ಶರೀರ ಪ್ರವೇಶಿಸದಂತೆ ಪ್ರಮಾದ ಎಸಗಿಬಿಟ್ಟರು' ಎನ್ನುವುದಾಗಿತ್ತು. ಶ್ರೀಧರ ಸ್ವಾಮಿಗಳ ಶರೀರವನ್ನು ಕೆಲವು ದಿನಗಳ ವರೆಗೆ ಕಾದಿಡಬೇಕು. ಅವರು ವಾಪಸ್ಸು ಬಂದೇ ಬರುತ್ತಾರೆ ಎಂದು ಆ ಸಂದರ್ಭದಲ್ಲಿ ವರದಹಳ್ಳಿಯಲ್ಲಿ ಸೇರಿದ್ದ ಒಂದು ಗುಂಪು ಬಲವಾಗಿ ವಾದಿಸಿದ್ದರು ಎನ್ನುವುದಾಗಿಯೂ ವದಂತಿ ಹಬ್ಬಿಸಿದ್ದರು. ವ್ಯಾಟಿಕನ್ನಿನಲ್ಲಿದ್ದಾಗ ಕೃಷ್ಣನ ಮೂರ್ತಿಯನ್ನು ಅಲ್ಲಿ ಅಡಗಿಸಿಟ್ಟಿದ್ದಾರೆ ಎನ್ನುವ ಮಾತು ಕಿವಿಗೆ ಬಿದ್ದಾಗ ನನಗೆ ನನ್ನ ಬಾಲ್ಯದ ಕಾಲದಲ್ಲಿ ಮೆಕ್ಕಾದ ವಿಷ್ಣು ಪಾದದ ಕತೆ ಕೇಳಿದ್ದು ಸಾದೃಶ್ಯವಾಗಿ ನೆನಪಿಗೆ ಬಂತು.

ವಿದ್ಯಾವಂತರೇ!!

ವ್ಯಾಟಿಕನ್ ನ ಸೇಂಟ್ ಪೀಟರ್ ಬಾಸಿಲಿಕಾದ ಪ್ರೆಮೈಸಿನಲ್ಲಿ ಕೃಷ್ಣನ ಮೂರ್ತಿಯನ್ನು ಬಚ್ಚಿಟ್ಟಿದ್ದಾರಂತೆ ಎಂದು ನನ್ನ ಹೆಂಡತಿಗೆ ಹೇಳಿದವಳು ಒಬ್ಬ ಎಮ್‌ಎಸ್‌ಸಿ ಪದವಿಧರೆ ಮತ್ತು ಒಂದು ಕಾಲೇಜಿನಲ್ಲಿ ಅಧ್ಯಾಪಕಿ. ಧರ್ಮದ ವಿಚಾರ ಬಂದಾಗ ಅದು ಹೇಗೆ ಸುಶಿಕ್ಷಿತರೂ ಸಹ ಮೂಢನಂಬಿಕೆಗಳಿಗೆ ಸುಲಭವಾಗಿ ಬಲಿಯಾಗುತ್ತಾರೆ ಎಂದು ನನಗೆ ಅಚ್ಚರಿಯೇನೂ ಆಗಲಿಲ್ಲ. ಏಕೆಂದರೆ ಶಿಕ್ಷಣಕ್ಕೂ ಮೂಢನಂಬಿಕೆಗೂ ಸಂಬಂಧವೇ ಇಲ್ಲದ ಕಾಲದಲ್ಲಿ ನಾವು ಬದುಕುತ್ತಿದ್ದೇವೆ. ಹೆಚ್ಚು ಶಿಕ್ಷಣ ಪಡೆಯದ ಮುಗ್ದನೊಬ್ಬನಿಗಿರುವ ತಾರ್ಕಿಕ ವಿಚಾರ ಶಕ್ತಿಯನ್ನೂ ಶಿಕ್ಷಿತರು, ಪದವಿಧರರು ಎಂದು ಹೇಳಿಕೊಳ್ಳುವ ಹಲವರಲ್ಲಿ ಇಲ್ಲದಿರುವುದು ಇಂದಿನ ವಾಸ್ತವವಾಗಿದೆ. ಬಹುಶಃ ನಮ್ಮ ಶಿಕ್ಷಣದ ಪಠ್ಯ(ಕರಿಕ್ಯುಲಮ್) ದಲ್ಲಿ ವೈಚಾರಿಕತೆ (Rationality)ಯನ್ನು ಬೆಳೆಸಿಕೊಳ್ಳುವದರತ್ತ ಯಾವ ಪುಟ 4 ಕ್ಕೆ

ಕನ್ನಡ ಕಾವ್ಯ ಪರಂಪರೆಯಲ್ಲಿ ದಿಟ್ಟ ಪ್ರತಿಭಟನೆಯ ಸ್ವರೂಪ

ಪ್ರೊ. ಪುರುಷೋತ್ತಮ ಬಿಳಿಮಲೆ
ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ

ಧೈರ್ಯ–ಪ್ರಭುತ್ವದ ಕುರಿತ ವ್ಯಂಗ್ಯ

ಭರತ ಬಾಹುಬಲಿಯರ ಪ್ರಸಂಗ ಪಂಪನ ಪ್ರಭುತ್ವ ವಿರೋಧಿ ಧೋರಣೆಯನ್ನು ಸೊಗಸಾಗಿ ಮುನ್ನೆಲೆಗೆ ತರುತ್ತದೆ. ಅಧಿಕಾರದ ದಾಹವು ರಕ್ತ ಸಂಬಂಧ ಮತ್ತು ಮಾನವೀಯ ಮೌಲ್ಯಗಳನ್ನು ಹೇಗೆ ಗೌಣಗೊಳಿಸುತ್ತದೆ ಎಂಬುದನ್ನು ಪಂಪ ಇಲ್ಲಿ ತಣ್ಣಗೆ ನಿರೂಪಿಸುತ್ತಾನೆ. ವೃಷಭಾಚಲದಲ್ಲಿ ತನ್ನ ಹೆಸರು ಕೆತ್ತಿಸಲು ತಯಾರಾಗುವ ಭರತನ ಗರ್ವಭಂಗದ ಭಾಗವೂ ಪಂಪನಿಗೆ ಇಷ್ಟವೇ. ಭರತ–ಬಾಹುಬಲಿಯರ ನಡುವಣ ರಕ್ತರಹಿತ ಯುದ್ಧ ಕೂಡಾ ಪ್ರಭುತ್ವದ ಅಹಂಕಾರ, ಏಕಚಕ್ರಾಧಿಪತ್ಯದ ನಿರಂಕುಶತೆ, ಅಧಿಕಾರ ಕೇಂದ್ರೀಕರಣ, ಶ್ರೇಣೀಕರಣಗಳನ್ನೆಲ್ಲ ಪ್ರಶ್ನಿಸುವ ಮಹೋನ್ನತ ಚಿತ್ರಗಳಾಗಿವೆ. ಅನ್ನ ನೀಡುವ ಅರಿಕೇಸರಿಯ ಗೆಳೆಯನಾಗಿಯೂ ಕೂಡಾ ಪ್ರಭುತ್ವದ ಗುಣಗಳನ್ನು ಹೀಗೆ ವ್ಯಂಗ್ಯವಾಗಿ ವರ್ಣಿಸಬೇಕಾದರೆ ಕವಿಯೊಬ್ಬನಿಗೆ ಬಹಳ ಧೈರ್ಯಬೇಕು. ಪಂಪನಲ್ಲಿ ಅಂಥ ಧೈರ್ಯವಿತ್ತು. ಬಹುಶಃ ಕರ್ನಾಟಕ ಈಗ ಅಂಥ ದಿಟ್ಟತನವನ್ನು ಕಳಕೊಂಡಂತಿದೆ.

ಆದಿಕವಿ ಪಂಪ ಹಾಕಿಕೊಟ್ಟ ಮಾರ್ಗದಲ್ಲಿಯೇ ಮುಂದಿನ ಕನ್ನಡ ಕಾವ್ಯ ಹೆಜ್ಜೆಯಿಟ್ಟಿತು. ರನ್ನನು ದುರ್ಯೋಧನನ್ನೇ ಕಾವ್ಯದ ನಾಯಕನನ್ನಾಗಿಸಿ, 'ನೆಲಕ್ಕಿರಿವೆನೆಂದು ಬಗೆವಿರೆ ಚಲಕ್ಕಿರೆವೆಂ' ಎಂದು ಅವನ ಬಾಯಿಯಲ್ಲಿ ಹೇಳಿಸಿದ.

ನಾಗಚಂದ್ರನ 'ದುರಂತ ರಾವಣ'

ಮುಂದೆ ನಾಗಚಂದ್ರನು ತನ್ನ 'ರಾಮಚಂದ್ರಚರಿತ ಪುರಾಣ' ಎಂಬ ಕಾವ್ಯದ ಮೂಲಕ ಕನ್ನಡಕ್ಕೆ ಮೊದಲ ರಾಮಾಯಣವನ್ನು ಕೊಟ್ಟದ್ದಲ್ಲದೆ, ದುರಂತ ರಾವಣನ ಕಲ್ಪನೆಯನ್ನು ಒದಗಿಸಿಕೊಟ್ಟ. ನಾಗಚಂದ್ರನ ರಾವಣನು ದುಷ್ಟನಲ್ಲ. ಒಲಿದು ಬಂದ ನಳಕೂಬರನ ಪತ್ನಿಗೆ ಬುದ್ಧಿ ಹೇಳಿ ಹಿಂದೆ ಕಳಿಸಿದ ಮಹಾನುಭಾವ. ಆದರೂ ಕೂಡಾ 'ಕಡಲು ಕಾಲವಶದಿಂದ ಯಾವತ್ತೋ ಒಮ್ಮೆ ಮರ್ಯಾದೆಯನ್ನು ದಾಟುವ ಹಾಗೆ, ರಾವಣನು ಸೀತೆಯ ಮೋಹಕ್ಕೊಳಗಾಗುತ್ತಾನೆ. ಅಪಹರಿಸಿ ತಂದ ಮೇಲೆ ಅವನಿಗೆ ತನ್ನ ತಪ್ಪಿನ ಅರಿವಾಗುತ್ತದೆ. ಹಾಗೆಯೇ ಕೊಂಡೊಯ್ದು ಕೊಟ್ಟರೆ ತನ್ನ ಮರ್ಯಾದೆಗೆ ಕುಂದುಂಟಾಗುವುದರಿಂದ' ರಾಮನನ್ನು ಯುದ್ಧದಲ್ಲಿ ಸೋಲಿಸಿ, ಹಿಡಿದು ತಂದು ಆಕೆಯನ್ನು ಒಪ್ಪಿಸುತ್ತೇನೆ' ಎಂದು ನಿಶ್ಚಯಿಸಿ ಯುದ್ಧಕ್ಕೆ ಹೋಗಿ ಸಾವನ್ನಪ್ಪುತ್ತಾನೆ. ನಾಗಚಂದ್ರ ತಂದಿತ್ತ 'ದುರಂತ ರಾವಣ'ನ ಕಲ್ಪನೆಯು ಕನ್ನಡ ಪ್ರಜ್ಞೆಯಲ್ಲಿ ಇವತ್ತಿಗೂ ಗಾಢವಾಗಿ ಬೇರೂರಿದ್ದು, ಯಕ್ಷಗಾನ, ಹರಿಕತೆ, ನಾಟಕಗಳಲ್ಲಿ ಕಾಣಿಸಿಕೊಳ್ಳುವುದುಂಟು.

1170 ರಲ್ಲಿದ್ದ ನೇಮಿಚಂದ್ರನು ಕನ್ನಡ ವಿಮರ್ಶೆಗೆ ನಾಂದಿ ಹಾಡಿದ ಪ್ರಮುಖ ಕವಿ. ಆತನು ತನ್ನ 'ಲೀಲಾವತಿ ಮಹಾ ಪ್ರಬಂಧಂ'ನಲ್ಲಿ ಕವಿಗಳ ಸೃಷ್ಟಿಕ್ರಿಯೆಯ ಬಗ್ಗೆ ಎಲ್ಲ ಕಾಲಕ್ಕೂ ಸಲ್ಲುವ ಮಹತ್ವದ ಮಾತೊಂದನ್ನು ಹೇಳುತ್ತಾನೆ–

ಕಟ್ಟುಗೆ ಕಟ್ಟದಿರ್ಕೆ ಕಡಲಂ ಕಪಿಸಂತತಿ ವಾಮನ ಕ್ರಮಂ।
ಮುಟ್ಟುಗೆ ಮುಟ್ಟದಿರ್ಕೆ ಮುಗಿಲಂ ಹರನಂ ನರನೊತ್ತಿ ಗಂಟಲಂ।
ಮೆಟ್ಟುಗೆ ಮೆಟ್ಟದಿರ್ಕೆ ಕವಿಗಳ್ ಕೃತಿಬಂಧದೊಳಲ್ತೆ ಕಟ್ಟಿದರ್।
ಮುಟ್ಟಿದರೊತ್ತಿ ಮೆಟ್ಟಿದರದೇನಳ ವಗ್ಗಳಮೋ ಕವೀಂದ್ರರಾ॥


(ವಾನರ ಸೈನ್ಯವು ಸಮುದ್ರಕ್ಕೆ ಸೇತುವೆಯನ್ನು ಕಟ್ಟಲಿ ಕಟ್ಟದಿರಲಿ. ವಾಮನಾವತಾರದಲ್ಲಿ ವಾಮನನು ಆಕಾಶವನ್ನು ತನ್ನ ಕಾಲಿನಿಂದ ಮುಟ್ಟಲಿ ಮುಟ್ಟದಿರಲಿ. ಅರ್ಜುನನು ಶಿವನ ಗಂಟಲನ್ನು ಒತ್ತಿ ಮೆಟ್ಟಲಿ ಮೆಟ್ಟದಿರಲಿ. ಆದರೆ ಕವಿಗಳು ತಮ್ಮ ಕೃತಿಗಳಲ್ಲಿ ವಾನರ ಸೈನ್ಯದಿಂದ ಸಮುದ್ರಕ್ಕೆ ಸೇತುವೆಯನ್ನು ಕಟ್ಟಿದರು; ವಾಮನನ ಕಾಲಿನಿಂದ ಆಕಾಶವನ್ನು ಮುಟ್ಟಿದರು; ಅರ್ಜುನನ ಕಾಲಿನಿಂದ ಶಿವನ ಗಂಟಲನ್ನು ಒತ್ತಿ ಮೆಟ್ಟಿದರು; ಇದು ಕವಿಗಳ ಅಗ್ಗಳಿಕೆ). ಪುರಾಣ, ಕಾವ್ಯ, ಇತಿಹಾಸಗಳನ್ನೆಲ್ಲ ಮಿಶ್ರ ಮಾಡಿ ರಾಜಕೀಯ ಮಾಡುವವರು ನೇಮಿಚಂದ್ರನ ಮೇಲಿನ ಮಾತುಗಳನ್ನೊಮ್ಮೆ ಓದಬೇಕು.

ಎಣ್ಣೆ–ತುಪ್ಪಗಳನ್ನು ಬೆರೆಸಬಹುದೇ? – ನಯಸೇನ

ನೇಮಿಚಂದ್ರನ ಕಾಲದವನೇ ಆದ ನಯಸೇನನ ಕಾಲಕ್ಕೆ ಪುರೋಹಿತಶಾಹಿಯು ಕನ್ನಡದ ಮೇಲೆ ಸಂಸ್ಕೃತವನ್ನು ಹೇರುವ ಪ್ರಯತ್ನ ಮಾಡುತ್ತಿದ್ದಿರಬೇಕು. ಅದನ್ನು ಗಮನಿಸಿದ ಆತನು ತನ್ನ 'ಧರ್ಮಾಮೃತ' ಕಾವ್ಯದಲ್ಲಿ–

ಸಕ್ಕದಮಂ ಪೇೞ್ವೊಡೆ ನೆಱೆ
ಸಕ್ಕದಮಂ ಪೇೞ್ಗೆ ಶುದ್ಧ ಕನ್ನಡದೊಳ್ ತಂ।
ದಿಕ್ಕುವುದೇ ಸಕ್ಕದಮಂ
ತಕ್ಕುದೆ ಬೆರೆಸಲ್ಕೆ ಘೃತಮುಮಂ ತೈಲಮುಮಂ

(ಸಂಸ್ಕೃತವನ್ನು ಹೇಳುವುದಾದರೆ, ಸಂಸ್ಕೃತದಲ್ಲಿಯೇ ಪೂರ್ತಿಯಾಗಿ ಹೇಳಿ. ಶುದ್ಧವಾದ ಕನ್ನಡದಲ್ಲಿ ಸಂಸ್ಕೃತವನ್ನು ತಂದು ತುರುಕುವುದು ಸರಿಯೇ? ಇವೆರಡನ್ನು ಬೆರೆಸಿ ಕಾವ್ಯ ರಚನೆ ಮಾಡಿದರೆ ಅದು ಎಣ್ಣೆ–ತುಪ್ಪಗಳ ಮಿಶ್ರಣವಾಗದೇ?) ಎಂದು ಗದರಿಸುತ್ತಾನೆ.



ವಚನಕಾರರು–
ದೇವರಿಗೇ ಕನ್ನಡ ಕಲಿಸಿದ ಕ್ರಾಂತಿಕಾರಿಗಳು

ಮೇಲೆ ಹೇಳಿದಂತೆ ಬೇರೆ ಭಾಷೆಗಳೊಡನೆ ಗುದ್ದಾಡುತ್ತಾ ಕನ್ನಡವನ್ನು ಬೆಳೆಸುತ್ತಿದ್ದ ಕವಿಗಳ ನಡುವೆ ಜನ ಭಾಷೆಗೆ ಮಹತ್ವ ತಂದು ಕೊಟ್ಟವರು ನಿರ್ವಿವಾದವಾಗಿ ವಚನಕಾರರು. ಅವರು ದೇವರಿಗೇ ಕನ್ನಡ ಕಲಿಸಿದ ಕ್ರಾಂತಿಕಾರಿಗಳು. ಕರ್ನಾಟಕದ ಚರಿತ್ರೆಯಲ್ಲಿ ವಚನಕಾರರು ಮೊದಲ ಬಾರಿಗೆ ಭಾಷೆಯಲ್ಲಿ ಕಂಡು ಬರುವ ಶ್ರೇಣೀಕರಣ ಮತ್ತು ಮಡಿ ಮೈಲಿಗೆಯ ಪರಿಕಲ್ಪನೆಯನ್ನು ಗ್ರಹಿಸಿದರು. ವಿಪ್ರ ಮತ್ತು ಅಸ್ಪೃಶ್ಯನನ್ನು ಒಂದೇ ನೆಲೆಗಟ್ಟಿನ ಮೇಲೆ ನಿಲ್ಲಿಸಿದರು ಅವರು. ದೇವರ ಹತ್ತಿರ ಮಾತಾಡುವಾಗ ಸಂಸ್ಕೃತವನ್ನೂ ಜನರ ಹತ್ತಿರ ಮಾತಾಡುವಾಗ ಕನ್ನಡವನ್ನೂ ಬಳಸುವವರ ಬಗ್ಗೆ ವಚನಕಾರರು ಎಚ್ಚರ ವಹಿಸಿ, ದೇವರಿಗೇ ಕನ್ನಡ ಕಲಿಸಲು ಮುಂದಾಗಿ ಅದರಲ್ಲಿ ಅಪಾರ ಯಶಸ್ಸನ್ನು ಕಂಡರು. ನಂಬಿ ಕರೆದರೆ ಶಿವನು ಕನ್ನಡದಲ್ಲಿಯೇ ಓ ಎನ್ನುತ್ತಾನೆ ಎಂದು ನಂಬಿದವರು ಅವರು. ಅಲ್ಲಮ, ದಾಸಿಮಯ್ಯ, ಅಕ್ಕಮಹಾದೇವಿ, ಚೆನ್ನಬಸವನೇ ಮೊದಲಾದ ಎಲ್ಲ ವಚನಕಾರರೂ ದೇವರೊಡನೆ ಮಾತಾಡಿದ್ದು ಕನ್ನಡದಲ್ಲಿಯೇ. ವಚನಕಾರರು ತಮ್ಮ ನಡುವೆ ಪ್ರಚಲಿತದಲ್ಲಿದ್ದ ಕಾಯಕ ಸಂಬಂಧೀ ದೇಸೀ ಪದಗಳನ್ನು ವಚನಗಳಲ್ಲಿ ಬಳಸಲು ನಾಚಿಕೊಳ್ಳಲಿಲ್ಲ. ಈ ಬಗೆಯ ಪ್ರತಿಭಟನೆಯು ಅಸಾಮಾನ್ಯವಾದುದು.

ಭಕ್ತಿಗೆ ಆವೇಶದ ಲಯವನ್ನು ಸೇರಿಸಿದ ಹರಿಹರ

ವಚನಕಾರರ ಹಸನಾದ ಭಕ್ತಿಗೆ ಉತ್ಸಾಹ ಮತ್ತು ಆವೇಶದ ಲಯವನ್ನು ಸೇರಿಸಿದವ ಹರಿಹರ. ಸುಮಾರು 106 ರಗಳೆಗಳನ್ನು ಬರೆದ ಆತ ಮೊದಲ ಬಾರಿಗೆ ಸಂಸ್ಕೃತ ಮತ್ತು ಪ್ರಾಕೃತ ಮೂಲಗಳ ಕಡೆಗೆ ಮುಖ ಮಾಡದೆ, ಪಕ್ಕದ ತಮಿಳಿನ ಕಡೆಗೆ ನೋಡಿ, ಅಲ್ಲಿಂದ ಪ್ರೇರಣೆ ಪಡೆದು ಕನ್ನಡವನ್ನು ಬೆಳೆಸಿದ. ವಚನಕಾರರ ಹಾಗೆ, ಹರಿಹರನೂ ಕುಂಬಾರ, ಕೃಷಿಕ, ಬೇಟೆಗಾರ, ಚಮ್ಮಾರ, ಅಗಸ, ಬೆಸ್ತ ಮತ್ತಿತರರನ್ನು ಕನ್ನಡ ಸಾಹಿತ್ಯದ ಕೇಂದ್ರಕ್ಕೆ ತಂದ.

ಅರಸು ರಾಕ್ಷಸ, ಮಂತ್ರಿಯೆಂಬುವ ಮೊರೆವ ಹುಲಿ

ರಾಮಾಯಣದ ಮೇಲೆ ಕಾವ್ಯ ಬರೆಯುವುದಿಲ್ಲ ಎಂದ ಜನಪ್ರಿಯ ಕವಿ ಕುಮಾರವ್ಯಾಸನು ಅರಸೊತ್ತಿಗೆಯ ಅನಾಹುತಗಳನ್ನು ಈ ಕೆಳಗಿನಂತೆ ವರ್ಣಿಸುತ್ತಾನೆ–

ಅರಸು ರಾಕ್ಷಸ, ಮಂತ್ರಿಯೆಂಬುವ
ಮೊರೆವ ಹುಲಿ ಪರಿವಾರ ಹದ್ದಿನ
ನೆರವಿ ಬಡವರ ಬಿನ್ನಪವನಿನ್ನಾರು ಕೇಳುವರು
ಉರಿಉರಿವುತಿದೆ ದೇಶ ನಾವಿ
ನ್ನಿರಲು ಬಾರದೆನುತ್ತ ಜನ ಬೇ
ಸರದ ಬೇಗೆಯಲಿರದಲೇ ಭೂಪಾಲ ಕೇಳೆಂದ.

(ರಾಜನೋ ರಾಕ್ಷಸ, ಇವನ ಮಂತ್ರಿಗಳೋ ಗರ್ಜಿಸುವ ಹುಲಿಗಳು, ಇವನ ಪರಿವಾರದವರು ಹದ್ದಿನ ಗುಂಪುಗಳು, ಹೀಗಿರುವಾಗ ಬಡವರ ನೋವನ್ನು ಆಲಿಸುವವರಾದರು ಯಾರು, ಅವರ ನೋವಿನ ಉರಿಜ್ವಾಲೆಯಾಗಿ ಉರಿಯುತ್ತಿರಲು ಅವರು ಈ ದೇಶದಲ್ಲಿರಬಾರದೆಂದು ಪ್ರಜೆಗಳು ಬೇಸರದ ಬೇಗೆಯಲ್ಲಿ ಬೇಯುತ್ತಿಲ್ಲ ತಾನೆ? ಎಂದು ನಾರದರು ಯುಧಿಷ್ಠಿರನನ್ನು ಕೇಳಿದರು.)

ಸಂಸ್ಕೃತದಲಿನ್ನೇನು? – ಮಹಲಿಂಗ ರಂಗ ಕವಿ

ಕ್ರಿ.ಶ. 1675ರಲ್ಲಿದ್ದ ಮಹಲಿಂಗ ರಂಗ ಕವಿಯ ಅನುಭವಾಮೃತ ಎಂಬ ಗ್ರಂಥದಲ್ಲಿ ತೋರಿದ ಕನ್ನಡ ಪ್ರೇಮವು ಕರ್ನಾಟಕದ ಚರಿತ್ರೆಯಲ್ಲಿ ಅವನಿಗೊಂದು ಶಾಶ್ವತವಾದ ಸ್ಥಾನವನ್ನು ಒದಗಿಸಿ ಕೊಟ್ಟಿತು–

ಸುಲಿದ ಬಾಳೆಯ ಹಣ್ಣಿನಂದದಿ
ಕಳಿದ ಸಿಗುರಿನ ಕಬ್ಬಿನಂದದಿ
ಅಳಿದ ಉಷ್ಣದ ಹಾಲಿನಂದದಿ ಸುಲಭವಾಗಿರ್ಪ
ಲಲಿತವಹ ಕನ್ನಡದ ನುಡಿಯಲಿ
ತಿಳಿದು ತನ್ನೊಳು ತನ್ನ ಮೋಕ್ಷವ
ಗಳಿಸಿ ಕೊಂಡರೆ ಸಾಲದೇ ಸಂಸ್ಕೃತದಲಿನ್ನೇನು?

ಉತ್ತಮ ಪ್ರಭುತ್ವ ಲೊಳಲೊಟ್ಟೆ–ಪುರಂದರ ದಾಸರು

ವಿಜಯನಗರ ಸಾಮ್ರಾಜ್ಯದ ಬಗ್ಗೆ ಎಲ್ಲರೂ ಮೈಮರೆತು ಹಾಡಿ ಹೊಗಳುತ್ತಿರುವಾಗ ಪುರಂದರದಾಸರು (1500) ಧೈರ್ಯವಾಗಿ ಅದರ ವೈಭವವನ್ನು ನಿರಾಕರಿಸಿ, ಅವೆಲ್ಲವೂ

'ಲೊಳಲೊಟ್ಟೆ ಎಲ್ಲ ಲೊಳಲೊಟ್ಟೆ
ಆನೆ ಕುದುರೆ ಒಂಟೆ ಲೊಳಲೊಟ್ಟೆ ಬಹು
ಸೇನೆ ಭಂಡಾರವು ಲೊಳಲೊಟ್ಟೆ'
ಮುತ್ತು ಮಾಣಿಕ್ಯ ಲೊಳಲೊಟ್ಟೆ
ಛತ್ರ ಚಾಮರ ಧ್ವಜ ಲೊಳಲೊಟ್ಟೆ,
ಸುತ್ತಗಲ ಕೋಟೆ ಲೊಳಲೊಟ್ಟೆ,
ಮತ್ತೆ ಉತ್ತಮ ಪ್ರಭುತ್ವ ಲೊಳಲೊಟ್ಟೆ
ಎಂದು ಧೈರ್ಯವಾಗಿ ಬರೆದರು.

ರತ್ನಾಕರ ವರ್ಣಿಯು ಕನ್ನಡ, ತುಳು ಮತ್ತು ತೆಲುಗು ಭಾಷೆಗಳನ್ನು ಸ್ಮರಿಸಿ ಕರ್ನಾಟಕದ ಬಹು ಭಾಷಾನೆಲೆಗಳನ್ನು ಗೌರವಿಸಿದ.

ಹೀಗೆ ಕನ್ನಡ ಸಾಹಿತ್ಯವು ಪ್ರತಿಭಟನೆಯನ್ನೇ ತನ್ನ ಪ್ರಮುಖ ನೆಲೆಯನ್ನಾಗಿ ಮಾಡಿಕೊಂಡು ಬೆಳೆದಿದೆ. ಇದನ್ನು ಅರ್ಥ ಮಾಡಿಕೊಂಡಷ್ಟೂ ಈ ಕಾವ್ಯಗಳು ನಮಗೆ ಹತ್ತಿರವಾಗುತ್ತವೆ.

(ಸಂಚಿಕೆ–46, ನವೆಂಬರ್ 11–17, 2024 ರ ಸಂಚಿಕೆಯಲ್ಲಿ ಪ್ರಕಟವಾದ ಲೇಖನದ ಮುಂದುವರಿದ ಭಾಗ)

ನಮ್ಮ ದೇಶಕ್ಕೆ ದರಿದ್ರತನ–ರೋಗ ರುಜಿನಗಳು ಬಂದದ್ದು ಹೀಗಂತೆ......

ಪುಟ 3 ರಿಂದ

ಒತ್ತೂ ಇಲ್ಲವೇನೋ ಎಂದು ಹಲವು ಬಾರಿ ನನಗನ್ನಿಸಿದೆ. ಅಲ್ಲದೆ ವೈಚಾರಿಕ ಆಲೋಚನೆ (Rational Thinking)ಯನ್ನು ಬೆಳೆಸಲು ಬಯಸಿದ ಕೆಲವು ಶಿಕ್ಷಕರು ಮತ್ತು ಶಿಕ್ಷಣ ತಜ್ಞರು ತೊಂದರೆಗೀಡಾಗುತ್ತಿರುವುದು ವಿರಳ ವಿದ್ಯಮಾನವಾಗಿ ಉಳಿದಿಲ್ಲ. ಇತ್ತೀಚೆಗಷ್ಟೆ ನಮ್ಮ ರಾಜ್ಯದ ಒಂದು ಶಾಲೆಯಲ್ಲಿ 'ಧೈರ್ಯದಿಂದ ಪ್ರಶ್ನಿಸು' ಎನ್ನುವ ಬರಹವನ್ನು ಶಾಲೆಯ ಪ್ರವೇಶ ದ್ವಾರದಲ್ಲಿ ಪ್ರದರ್ಶಿಸಿದ್ದರ ಬಗ್ಗೆ ಸಂಪ್ರದಾಯವಾದಿಗಳು ಗುಲ್ಲೆಬ್ಬಿಸಿ, ಅದು ವಿಧಾನ ಸಭೆಯಲ್ಲಿಯೂ ವಾದ ವಿವಾದದ ವಿಷಯವಾಗಿ, ನಂತರ ಸಂಪ್ರದಾಯವಾದಿಗಳ ಕೈ ಮೇಲಾಗಿ ಆ ಬರಹವನ್ನು ತೆಗೆಸಲಾಯಿತು ಎನ್ನುವ ಸಂಗತಿ ತಾರ್ಕಿಕ ಶಕ್ತಿಯ ಬೆಳವಣಿಗೆಯನ್ನು ಹೇಗೆ ಎಳೆಯ ವಯಸ್ಸಿನಿಂದಲೇ ತಡೆಹಿಡಿಯಲಾಗುತ್ತಿದೆ ಎನ್ನುವುದಕ್ಕೆ ಮಾದರಿಯ ಉದಾಹರಣೆಯಾಗಿದೆ.

ಈ ವಿಷಯವಾಗಿ ನಾನು ಅಥವಾ ನನ್ನ ಓರಿಗೆಯವರು ಅದೃಷ್ಟವಂತರು. ಮೂಢನಂಬಿಕೆ ಸಾರ್ವಕಾಲಿಕವಾದರೂ, ಅವುಗಳಿಗೆ ಬಲಿಯಾಗದಂತೆ ಮತ್ತು ಹಲವೊಮ್ಮೆ ಅದನ್ನು ವಿರೋಧಿಸುವುದಕ್ಕೆ ತಕ್ಕ ತಿಳುವಳಿಕೆಯನ್ನು ನಮ್ಮಲ್ಲಿ ಹುಟ್ಟುಹಾಕಿದ ಶಿಕ್ಷಕರು ಶಾಲೆ ಮತ್ತು ಹೈಸ್ಕೂಲ್ ಮಟ್ಟದಲ್ಲಿ ಹಲವರಿದ್ದರು. ನನಗಂತೂ ಇಂತಹ ಶಿಕ್ಷಕರು ಎಳೆವೆಯಿಂದಲೇ ದೊರಕಿದ್ದರು. ಹಾಗಂತ ನನ್ನ ಓರಿಗೆಯವರೆಲ್ಲರೂ ವೈಚಾರಿಕ ಚಿಂತನೆಗಳನ್ನು ಬೆಳೆಸಿಕೊಂಡಿದ್ದಾರೆ ಎಂದು ನಾನು ಹೇಳಲಾರೆ. ಆ ವಿಷಯ ಬೇರೆ. ಅದು ನಾವು ನಮ್ಮ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳುವ ರೀತಿಗೆ ಸಂಬಂಧಿಸಿದ್ದು. ಆದರೆ ಎಳೆವೆಯಲ್ಲಿಯೇ ಉತ್ತೇಜನ ಸಿಗದಿದ್ದರೆ ಈಗ ನಾವು ಕಾಣುತ್ತಿರುವ ಸಮಾಜದ ಸೃಷ್ಟಿಯಾಗುತ್ತದೆ.





ಕೃಷಿ ಆಧಾರಿತ ಕೈಗಾರಿಕೆಗಳ ಸ್ಥಾಪನೆಗೆ ಹಾಸನ ಸಿಪಿಐ(ಎಂ) ಜಿಲ್ಲಾ ಸಮ್ಮೇಳನ ಒತ್ತಾಯ

ಕಮ್ಯೂನಿಸ್ಟ್ ಪಕ್ಷಗಳಿಗೆ ಸಮ್ಮೇಳನಗಳು ಬಹಳ ಮಹತ್ತರವಾದ ಘಟ್ಟಗಳು. ಪ್ರತಿ ಮೂರು ವರ್ಷಗಳಿಗೊಮ್ಮೆ ನಡೆಯುವ ಈ ಸಮ್ಮೇಳನಗಳಿಗೆ ಆಯಾಯ ಹಂತಗಳಲ್ಲಿ ರಾಜಕೀಯವಾಗಿ, ಸಂಘಟನಾತ್ಮಕವಾಗಿ ಬಹಳ ಮಹತ್ತರವಾದ ಪಾತ್ರವಿದೆ. ಒಮ್ಮೆ ಅಖಿಲ ಭಾರತ ಮಹಾಧಿವೇಶನ ನಿಗದಿಯಾದರೆ, ಅದಕ್ಕೆ ಪೂರಕವಾಗಿ ರಾಜ್ಯ ಸಮ್ಮೇಳನಗಳು, ಜಿಲ್ಲಾ ಸಮ್ಮೇಳನಗಳು, ತಾಲ್ಲೂಕು, ವಲಯ ಮತ್ತು ಶಾಖಾ ಸಮ್ಮೇಳನಗಳವರೆಗೆ ಇಡೀ ದೇಶಾದ್ಯಂತ ಆಯಾಯ ಹಂತಗಳಲ್ಲಿ ಹಿಂದಿನ ಸಮ್ಮೇಳನದಿಂದ ಈ ಸಮ್ಮೇಳನದವರೆಗೆ ಅಂದರೆ, ಕಳೆದ ಮೂರು ವರ್ಷಗಳಲ್ಲಿ ನಡೆದ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಸಂಘಟನಾತ್ಮಕ ಬೆಳವಣಿಗೆಗಳನ್ನು ಸೂಕ್ಷ್ಮವಾಗಿ ವರ್ಗದೃಷ್ಟಿಕೋನದಲ್ಲಿ ವಿಶ್ಲೇಷಿಸಿದ ಲಿಖಿತ ಕರಡು ವರದಿಯನ್ನು ಸಮ್ಮೇಳನಗಳಲ್ಲಿ ಮಂಡಿಸಿ, ವಿವರವಾಗಿ ಚರ್ಚೆಗಳನ್ನು ನಡೆಸಿ, ತಳಮಟ್ಟದ ಅನುಭವಗಳ ಆಧಾರದಲ್ಲಿ ಆ ಕರಡು ವರದಿಯನ್ನು ಅಂತಿಮಗೊಳಿಸಲಾಗುತ್ತದೆ. ಮಾತ್ರವಲ್ಲದೆ, ಈ ಅನುಭವ ಮತ್ತು ಪ್ರಸ್ತುತ ಪರಿಸ್ಥಿತಿಗೆ ಅನುಗುಣವಾಗಿ ಮುಂದಿನ ಮೂರು ವರ್ಷಗಳಲ್ಲಿ ಆ ಪ್ರದೇಶದಲ್ಲಿ ಕೈಗೊಳ್ಳಬೇಕಾದ ರಾಜಕೀಯ ಸಂಘಟನಾತ್ಮಕ ಗುರಿಗಳನ್ನು ನಿಗದಿಗೊಳಿಸಿಕೊಳ್ಳುತ್ತದೆ. ಅತ್ಯಂತ ಪ್ರಜಾಸತ್ತಾತ್ಮಕ ರೀತಿಯಲ್ಲಿ ನಡೆಯುವ ಸಿಪಿಐಎಂನ ಸಮ್ಮೇಳನಗಳಿಗೆ ಅಷ್ಟೊಂದು ಮಹತ್ವವಿದೆ.

ಸಿಪಿಐಎಂನ 24ನೇ ಅಖಿಲ ಭಾರತ ಮಹಾಧಿವೇಶನ ತಮಿಳುನಾಡಿನ ಮದುರೈನಲ್ಲಿ 2–6 ಏಪ್ರಿಲ್ 2025 ಕ್ಕೆ ನಿಗದಿಯಾಗಿದೆ. 24ನೇ ರಾಜ್ಯ ಸಮ್ಮೇಳನ 2024 ಡಿಸೆಂಬರ್ 28–30 ವರೆಗೆ ತುಮಕೂರಿನಲ್ಲಿ ನಡೆಯಲಿದೆ. ಪಕ್ಷದ ಹಾಸನ ಜಿಲ್ಲಾ 12ನೇ ಸಮ್ಮೇಳನವು ನವೆಂಬರ್ 17–18 ರಂದು ಎರಡು ದಿನಗಳ ಕಾಲ ಹಾಸನ ನಗರದ ಶ್ರೀ ನೀಲಕಂಠೇಶ್ವರ ಸಮುದಾಯ ಭವನದಲ್ಲಿ ಯಶಸ್ವಿಯಾಗಿ ನಡೆಯಿತು.

ಮೊದಲ ದಿನ ಕೆಂಬಾವುಟಗಳನ್ನು ಹಿಡಿದ್ದಿದ್ದ ಸಾವಿರಾರು ಜನ ಪಕ್ಷದ ಕಾರ್ಯಕರ್ತರು, ಹಿತೈಷಿಗಳು ನಗರದ ಹೇಮಾವತಿ ಪ್ರತಿಮೆಯ ಬಳಿಯಿಂದ ಮೆರವಣಿಗೆ ಹೊರಟು ನಗರದ ವಿವಿಧ ಬೀದಿಗಳಲ್ಲಿ ಸಂಚರಿಸಿ ಸಮುದಾಯ ಭವನದಲ್ಲಿ ಸಮಾವೇಶಗೊಂಡರು. ಈ ಬಹಿರಂಗ ಅಧಿವೇಶನವನ್ನು ಉಧ್ಘಾಟಿಸಿ ಸಿಪಿಐಎಂ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಮ್ರೇಡ್ ಎಸ್.ವರಲಕ್ಷ್ಮಿಯವರು ಮಾತನಾಡಿದರು. ನಂತರದಲ್ಲಿ ಆಯ್ಕೆಯಾಗಿದ್ದ ಪ್ರತಿನಿಧಿಗಳನ್ನು ಒಳಗೊಂಡ ಅಧಿವೇಶನ ಪ್ರಾರಂಭವಾಯಿತು. ಪಕ್ಷದ ಹಾಸನ ಜಿಲ್ಲಾ ಕಾರ್ಯದರ್ಶಿ ಕಾಮ್ರೇಡ್ ಧರ್ಮೇಶ್ ಜಿಲ್ಲಾ ಸಮಿತಿ ಸಿದ್ಧಪಡಿಸಿದ್ದ ಲಿಖಿತ ಕರಡುವರದಿಯನ್ನು ಸಮ್ಮೇಳನದಲ್ಲಿ ಮಂಡಿಸಿದರು. ಈ ವರದಿಯಲ್ಲಿ ಗುರುತಿಸಿರುವ ಹಾಸನ ಜಿಲ್ಲೆಯ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಬೆಳವಣಿಗೆಗಳ ಕೆಲವು ಅಂಶಗಳನ್ನು ಗಮನಿಸೋಣ.

2021ರಲ್ಲಿ ನಡೆದಿದ್ದ ಪಕ್ಷದ 11ನೇ ಜಿಲ್ಲಾ ಸಮ್ಮೇಳನದ ನಂತರ ಹಾಸನ ಜಿಲ್ಲೆಯ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ವಲಯಗಳಲ್ಲಿ ಹಲವು ಬದಲಾವಣೆಗಳನ್ನು ಕಾಣಬಹುದಾಗಿದೆ. ಅವುಗಳಲ್ಲಿ ಪ್ರಮುಖವಾದವೆಂದರೆ...

1. ಜಿಲ್ಲೆಯ ರಾಜಕೀಯದಲ್ಲಿ ಗುರುತರ ಬದಲಾವಣೆಯಾಗಿದ್ದು, ಇದುವರೆಗೂ ಜಿಲ್ಲೆಯಲ್ಲಿ ಬಲಿಷ್ಟವಾಗಿದ್ದ ಜೆಡಿಎಸ್ ಪಕ್ಷಕ್ಕೆ ಹಿನ್ನೆಡೆಯಾಗಿದೆ. ಹಾಗೂ ಅದರ ರಾಜಕೀಯ ಶಕ್ತಿ ಕಡಿಮೆಯಾಗಿದೆ.
2. ಬಿಜೆಪಿ ಮತ್ತು ಕೋಮುವಾದಿ ಶಕ್ತಿಗಳ ಬೆಳವಣಿಗೆ ಗಮನಾರ್ಹವಾಗಿ ಹೆಚ್ಚಳವಾಗಿದೆ. ಅದು ರಾಜಕೀಯವಾಗಿ ತನ್ನ ಬಲವನ್ನು ಹೆಚ್ಚಿಸಿಕೊಂಡಿದೆ.
3. ಜಿಲ್ಲೆಯ ಕೃಷಿ ವಲಯ ಬಿಕ್ಕಟ್ಟಿಗೆ ಸಿಲುಕಿದ್ದು, ಗ್ರಾಮೀಣ ಜನರು ಬದುಕುವ ಅವಕಾಶಗಳಿಗಾಗಿ ನಗರ ಪ್ರದೇಶಗಳಿಗೆ ವಲಸೆ ಹೋಗುವುದು ಹೆಚ್ಚಾಗುತ್ತಿದೆ.
4. ಜಿಲ್ಲೆಯಲ್ಲಿ ಅಗತ್ಯವಾದ ಕೈಗಾರಿಕೆ ಮತ್ತು ವಾಣಿಜ್ಯಾಭಿವೃದ್ಧಿ ನಡೆಯದೆ, ಜಿಲ್ಲೆಯಲ್ಲಿ ಉದ್ಯೋಗದ ಅವಕಾಶಗಳು ಬಹಳ ಕಡಿಮೆಯಾಗುತ್ತಿವೆ.
5. ಜಿಲ್ಲೆಯಲ್ಲಿ ಅಪರಾಧ ಪ್ರಕರಣಗಳು ಹೆಚ್ಚಾಗುತ್ತಿದ್ದು ಕೊಲೆ, ಸುಲಿಗೆ, ದರೋಡೆ ಮತ್ತು ಅತ್ಯಾಚಾರದಂತಹ ಪ್ರಕರಣಗಳು ಸಾಮಾನ್ಯವಾಗುತ್ತಿವೆ.
6. ಜಿಲ್ಲೆಯಲ್ಲಿ ಸಾಮಾಜಿಕ ಮತ್ತು ಆರ್ಥಿಕ ಅಂತರ ಹೆಚ್ಚಾಗಿದ್ದು, ಜನರು ಮೂಲಭೂತ ಅಗತ್ಯಗಳು, ಸೌಲಭ್ಯಗಳು ಮತ್ತು ಸೇವೆಗಳನ್ನು ಪಡೆದುಕೊಳ್ಳಲು ಪರಿತಪಿಸುತ್ತಿದ್ದಾರೆ.
7. ಜಿಲ್ಲೆಯ ಪಶ್ಚಿಮಘಟ್ಟಗಳಲ್ಲಿ ಪರಿಸರದ ಬಿಕ್ಕಟ್ಟು ಎದುರಾಗಿದ್ದು, ಮಲೆನಾಡಿನಲ್ಲಿ ಆನೆ–ಕಾಡು ಪ್ರಾಣಿಗಳು ಮತ್ತು ಮಾನವ ಸಂಘರ್ಷ ತೀವ್ರವಾಗಿ ಏರಿದ್ದು ಹಲವು ಜೀವಗಳು ಬಲಿಯಾಗಿವೆ ಮತ್ತು ಅಪಾರ ಪ್ರಮಾಣದ ನಷ್ಟವಾಗಿದೆ.
8. ಜಿಲ್ಲೆಯಲ್ಲಿ ದಲಿತರ ಮೇಲಿನ ದೌರ್ಜನ್ಯ ಪ್ರಕರಣಗಳು ಹೆಚ್ಚಾಗುತ್ತಿವೆ.

ಜಿಲ್ಲೆಯ ರಾಜಕೀಯ ಆರ್ಥಿಕ ಪರಿಸ್ಥಿತಿ

ಇದು ರಾಜಕೀಯವಾಗಿ ಸದಾ ಚಟುವಟಿಕೆಯಿಂದಿರುವ ಜಿಲ್ಲೆ. ಈ ಜಿಲ್ಲೆಯವರು ದೇಶದ ಪ್ರಧಾನಮಂತ್ರಿ, ರಾಜ್ಯದ ಮುಖ್ಯಮಂತ್ರಿ ಮತ್ತು ರಾಜ್ಯದ ಪ್ರಭಾವಿ ಸಚಿವರಾಗಿದ್ದರು. ಜಾತ್ಯಾತೀತ ಜನತಾದಳಕ್ಕೆ ಮಹತ್ವದ ಜಿಲ್ಲೆಯೂ ಇದೇ ಆಗಿದೆ. ಹಲವು ವರ್ಷಗಳಿಂದಲೂ ಹಾಸನ ಜಿಲ್ಲೆಯು ಜಾತ್ಯಾತೀತ ಜನತಾದಳದ ಭದ್ರಕೋಟೆ ಕೂಡ. ಒಂದಿಲ್ಲೊಂದು ಕಾರಣಕ್ಕೆ ಹಾಸನ ಜಿಲ್ಲೆ ರಾಷ್ಟ್ರ ಮತ್ತು ರಾಜ್ಯ ರಾಜಕಾರಣದಲ್ಲಿ ಸುದ್ದಿಯಲ್ಲಿದ್ದರೂ ಸಾಮಾಜಿಕ ಮತ್ತು ಆರ್ಥಿಕ ಪ್ರಗತಿಯಲ್ಲಿ ಗಣನೀಯವಾಗಿ ಹಿಂದುಳಿದಿದೆ.

ಭೌಗೋಳಿಕವಾಗಿ ಮಲೆನಾಡು, ಅರೆ ಮಲೆನಾಡು ಮತ್ತು ಬಯಲು ಸೀಮೆಯ ಪ್ರದೇಶಗಳನ್ನು ಹೊಂದಿದ್ದು, ಕೃಷಿಯೇ ಜಿಲ್ಲೆಯ ಆರ್ಥಿಕ ಮತ್ತು ವಾಣಿಜ್ಯದ ಮೂಲವಾಗಿದೆ. ಪ್ರಮುಖ ವಾಣಿಜ್ಯ ಬೆಳೆಗಳಾದ ಕಾಫಿ, ತೆಂಗು, ಭತ್ತ, ಕಬ್ಬು, ಶುಂಠಿ ಮತ್ತಿತರೆ ಬೆಳೆಗಳ ಕೃಷಿಯು ಆಳುವ ಸರ್ಕಾರಗಳ ಕೃಷಿ ವಿರೋಧಿ ನೀತಿಗಳ ಕಾರಣಗಳಿಂದ ಉಂಟಾಗಿರುವ ಸಾಗುವಳಿ, ನಿರ್ವಹಣೆ ಮತ್ತು ಮಾರುಕಟ್ಟೆಯ ವ್ಯವಸ್ಥೆಯಲ್ಲಿನ ದೋಷಗಳಿಂದಾಗಿ ಬಿಕ್ಕಟ್ಟಿನಲ್ಲಿದೆ. ಹಾಗಾಗಿ ಜಿಲ್ಲೆಯ ಆರ್ಥಿಕತೆಗೆ ಬಹುದೊಡ್ಡ ಪಾಲು ನೀಡುತ್ತಿದ್ದ ರೈತರಲ್ಲಿ ಆದಾಯದ ಕೊರತೆಯುಂಟಾಗಿದೆ. ಇದು ಜಿಲ್ಲೆಯ ವಾಣಿಜ್ಯ ವಹಿವಾಟಿನ ಮೇಲೆ ಅತಿ ಕೆಟ್ಟ ಪರಿಣಾಮ ಬೀರಿದೆ. ಕೃಷಿ ಬಿಕ್ಕಟ್ಟು, ಆದಾಯದ ಕೊರತೆ ಮತ್ತು ನಿರುದ್ಯೋಗದ ಕಾರಣಗಳಿಂದಾಗಿ ಜಿಲ್ಲೆಯ ಗ್ರಾಮಾಂತರ ಪ್ರದೇಶಗಳ ಜನರು ಬದುಕುವ ಅವಕಾಶಕ್ಕಾಗಿ ನಗರ ಪ್ರದೇಶಗಳಿಗೆ ವಲಸೆ ಹೋಗುವುದು ಹೆಚ್ಚಾಗುತ್ತಿದೆ.

ಜಿಲ್ಲೆಯಲ್ಲಿ ಕೈಗಾರಿಕಾಭಿವೃದ್ಧಿಗೆ ಅತ್ಯಂತ ಪೂರಕ ವಾತಾವರಣವಿದೆ. ಹಾಸನ ನಗರದ ಸುತ್ತಲಿನ ಪ್ರದೇಶವೂ ಸೇರಿದಂತೆ ಜಿಲ್ಲೆಯ ವಿವಿಧ ನಗರ ಪ್ರದೇಶಗಳಲ್ಲಿ ಸುಮಾರು 3,000ಕ್ಕೂ ಹೆಚ್ಚು ಎಕರೆ ಕೃಷಿ ಭೂಮಿಯನ್ನು ರೈತರಿಂದ ಕೈಗಾರಿಕೆಗಳ ಸ್ಥಾಪನೆಯ ಹೆಸರಿನಲ್ಲಿ ವಶಪಡಿಸಿಕೊಳ್ಳಲಾಗಿದೆ. ಆದರೆ ಇಲ್ಲಿಯವರೆಗೆ ಜಿಲ್ಲೆಯ ಜನರಿಗೆ ಉದ್ಯೋಗ ನೀಡಿ, ಇಲ್ಲಿನ ವಾಣಿಜ್ಯ ಮತ್ತು ಆರ್ಥಿಕತೆ ಬೆಳೆಸುವಂತಹ ಯಾವುದೇ ಕೈಗಾರಿಕೆಗಳು ಸ್ಥಾನೆಯಾಗಲಿಲ್ಲ. ಜಿಲ್ಲೆಯಲ್ಲಿ ಕಾಫಿ, ಸಾಂಬಾರ ಪದಾರ್ಥಗಳು ಮತ್ತು ತೆಂಗು ಬೆಳೆಗಳನ್ನು ಹೆಚ್ಚಾಗಿ ಬೆಳೆಯುತ್ತಿದ್ದರೂ ಈ ಬೆಳೆಗಳ ಕೃಷಿ ಆಧಾರಿತ ಕೈಗಾರಿಕೆಗಳ ಸ್ಥಾಪನೆ ಮಾಡಲು ಜಿಲ್ಲೆಯಲ್ಲಿ ರಾಜಕೀಯ ಅಧಿಕಾರ ಹಿಡಿದವರಿಗೆ ಸಾಧ್ಯವಾಗಿಲ್ಲ. ಇದು ಜಿಲ್ಲೆಯ ರಾಜಕೀಯ ಪರಿಸ್ಥಿತಿಗೆ ಹಿಡಿದ ಕನ್ನಡಿಯಾಗಿದೆ.

ಜಿಲ್ಲೆಯು 7 ವಿಧಾನಸಭಾ ಕ್ಷೇತ್ರ ಮತ್ತು ಒಂದು ಲೋಕಸಭಾ ಕ್ಷೇತ್ರವನ್ನು ಹೊಂದಿದೆ. ಹಾಸನ, ಚನ್ನರಾಯಪಟ್ಟಣ, ಹೊಳೆನರಸಿಪುರ ಮತ್ತು ಅರಕಲಗೂಡು ಈ 4 ವಿಧಾನಸಭಾ ಕ್ಷೇತ್ರಗಳಲ್ಲಿ ಜೆಡಿಎಸ್ ಗೆಲುವು ಸಾಧಿಸಿದ್ದರೆ, ಬೇಲೂರು ಮತ್ತು ಸಕಲೇಶಪುರ ವಿಧಾನಸಭಾ ಕ್ಷೇತ್ರಗಳಲ್ಲಿ ಬಿಜೆಪಿ, ಅರಸೀಕೆರೆ ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಗೆಲುವು ಸಾಧಿಸಿದೆ. ಜೊತೆಗೆ ಹಾಸನ ಲೋಕಸಭಾ ಕ್ಷೇತ್ರವನ್ನು ಕಾಂಗ್ರೆಸ್ ಗೆದ್ದುಕೊಂಡಿದೆ. ಜಿಲ್ಲೆಯಲ್ಲಿ ಎರಡು ನಗರಸಭೆಗಳಿದ್ದು ಹಾಸನದಲ್ಲಿ ಜೆಡಿಎಸ್ ಮತ್ತು ಅರಸೀಕೆರೆಯಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿವೆ.

ಹಾಸನ ಜಿಲ್ಲೆಯ ಸಾಮಾಜಿಕ–ಆರ್ಥಿಕ ಸ್ಥಿತಿಗಳ ವಿವರಗಳು

ಕೃಷಿ: ಹಾಸನ ಜಿಲ್ಲೆಯ ಮುಖ್ಯ ಆರ್ಥಿಕ ಚಟುವಟಿಕೆ ಕೃಷಿಯಾಗಿದೆ. ಇಲ್ಲಿ ಒಟ್ಟು ಕೃಷಿ ಪ್ರದೇಶ 4.21 ಲಕ್ಷ ಹೆಕ್ಟೇರ್‌ಗಳಿದ್ದರೆ, ಒಟ್ಟು ಸಾಗುವಳಿ ಪ್ರದೇಶ 3.46 ಲಕ್ಷ ಹೆಕ್ಟೇರ್‌ಗಳಷ್ಟಿದೆ. ಪ್ರಮುಖ ಆಹಾರ ಬೆಳೆಗಳಲ್ಲಿ ಅಕ್ಕಿ, ರಾಗಿ ಮತ್ತು ಜೋಳ ಸೇರಿವೆ. ಪ್ರಮುಖ ಹಣ್ಣು ಬೆಳೆಗಳಲ್ಲಿ ಮಾವು, ಬಾಳೆ, ಸೀಬೆ, ಸಪೋಟಾ ಮತ್ತು ಕಿತ್ತಳೆ ಹಣ್ಣುಗಳು ಸೇರಿವೆ. ವಾಣಿಜ್ಯ ಬೆಳೆಗಳಲ್ಲಿ ಕಾಫಿ, ತೆಂಗು, ಕಬ್ಬು, ಸಾಂಬಾರ ಪದಾರ್ಥಗಳು ಮತ್ತು ಶುಂಠಿ.

ಕೈಗಾರಿಕೆ: ಜಿಲ್ಲೆಯಲ್ಲಿ ನಾಲ್ಕು ದೊಡ್ಡ ತಾತ್ಕಾಲಿಕ ಕೈಗಾರಿಕೆಗಳು ಮತ್ತು ಏಳು ಮಧ್ಯಮ ಮಟ್ಟದ ಕೈಗಾರಿಕೆಗಳಿವೆ.

ಸಾಕ್ಷರತೆ: ಜಿಲ್ಲೆಯ ಸಾಕ್ಷರತಾ ದರ ಶೇ. 76.07 ಇದೆ.

ಶಿಕ್ಷಣ: ಜಿಲ್ಲೆಯಲ್ಲಿ ಅನೇಕ ಪ್ರಾಥಮಿಕ, ಪ್ರೌಢ, ಹೈಸ್ಕೂಲ್ ಮತ್ತು ಪದವಿ, ಸ್ನಾತಕೋತ್ತರ ಕಾಲೇಜುಗಳಿವೆ.

ತಲಾ ಆದಾಯ: ಜಿಲ್ಲೆಯ ತಲಾ ಆದಾಯವು 2019–20ರಲ್ಲಿ ರೂ. 1,71,699 ಆಗಿತ್ತು.

ಜಿಲ್ಲೆಯು ಮಲೆನಾಡು, ಅರೆಮಲೆನಾಡು ಮತ್ತು ಬಯಲುಸೀಮೆ ಪ್ರದೇಶಗಳನ್ನು ಹೊಂದಿದೆ. 8 ತಾಲ್ಲೂಕುಗಳು, 38 ಹೋಬಳಿಗಳು, 267 ಗ್ರಾಮಪಂಚಾಯಿತಿಗಳು, 2,418 ಜನವಸತಿ ಗ್ರಾಮಗಳು, 2 ನಗರ ಸಭೆ (ಹಾಸನ, ಅರಸೀಕೆರೆ), 4 ಪುರಸಭೆ (ಬೇಲೂರು, ಚನ್ನರಾಯಪಟ್ಟಣ, ಹೊಳೆನರಸೀಪುರ, ಸಕಲೇಶಪುರ) ಮತ್ತು 2 ಪಟ್ಟಣ ಪಂಚಾಯಿತಿಗಳನ್ನು (ಅರಕಲಗೂಡು, ಆಲೂರು) ಹೊಂದಿದೆ. ಜಿಲ್ಲೆಯಲ್ಲಿ ಒಟ್ಟು 17,76,421 ಜನಸಂಖ್ಯೆ ಇದ್ದು, ಅದರಲ್ಲಿ ಪುರುಷರು 8,83,667, ಮಹಿಳೆಯರು 8,92,754 ಇದ್ದಾರೆ. ಕೃಷಿ ಪ್ರಧಾನವಾದ ಜಿಲ್ಲೆಯಲ್ಲಿ 4,37,034 ರೈತರಿದ್ದು, 1,65,910 ಕೃಷಿ ಕೂಲಿಕಾರರಿದ್ದಾರೆ. ಜಿಲ್ಲೆಯಲ್ಲಿ 2,48,474 ಜನ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಉದ್ಯೋಗ ಚೀಟಿಗಳನ್ನು ಹೊಂದಿದ್ದಾರೆ. ಇದರಲ್ಲಿ 97,553 ಕುಟುಂಬಗಳು ಉದ್ಯೋಗ ಕೇಳಿ ಅರ್ಜಿ ಸಲ್ಲಿಸಿದ್ದರೆ, 88,103 ಕುಟುಂಬಗಳಿಗೆ ಉದ್ಯೋಗ ದೊರಕಿದೆ. ಅದರಲ್ಲಿ ಕೇವಲ 5,692 ಕುಟುಂಬಗಳು ಮಾತ್ರ 100 ದಿನದ ಉದ್ಯೋಗವನ್ನು ಪೂರೈಸಿವೆ.

1,03,184 ಜನರು 1 ರಿಂದ 2 ಹೆಕ್ಟೇರ್ ಕೃಷಿ ಭೂಮಿಯನ್ನು ಹಿಡುವಳಿ ಮಾಡುತ್ತಿದ್ದಾರೆ. 10 ಹೆಕ್ಟೇರ್‌ಗಿಂತ ಹೆಚ್ಚು ಕೃಷಿ ಭೂಮಿಯ ಹಿಡುವಳಿ ಹೊಂದಿರುವವರಲ್ಲಿ 17 ಜನ ಪರಿಶಿಷ್ಟ ಜಾತಿಗೆ, 3 ಜನ ಪರಿಶಿಷ್ಟ ಪಂಗಡಕ್ಕೆ ಮತ್ತು 902 ಜನ ಇತರ ಗುಂಪಿಗೆ ಸೇರಿದವರಾಗಿದ್ದಾರೆ. ಜಿಲ್ಲೆಯಲ್ಲಿ ಸಣ್ಣ ಹಿಡುವಳಿದಾರರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ.

ಜಿಲ್ಲೆಯಲ್ಲಿ 138 ಕಾರ್ಖಾನೆಗಳಿದ್ದು 16,036 ಪುರುಷ ಕಾರ್ಮಿಕರು ಮತ್ತು 15,499 ಮಹಿಳಾ ಕಾರ್ಮಿಕರು ಸೇರಿ ಒಟ್ಟು 31,535 ಕಾರ್ಮಿಕರು ದುಡಿಯುತ್ತಿದ್ದಾರೆ. ಜಿಲ್ಲೆಯಲ್ಲಿ 8 ಸಿದ್ಧ ಉಡುಪು ಕಾರ್ಖಾನೆಗಳಿದ್ದು, ಅದರಲ್ಲಿ 1,650 ಪುರುಷ ಕಾರ್ಮಿಕರು ಮತ್ತು 6,140 ಮಹಿಳಾ ಕಾರ್ಮಿಕರು ದುಡಿಯುತ್ತಿದ್ದಾರೆ. ಅದೇ ರೀತಿ 2 ಬಟ್ಟೆ ಕಾರ್ಖಾನೆಗಳಿದ್ದು ಅದರಲ್ಲಿ 464 ಪುರುಷ ಕಾರ್ಮಿಕರು ಮತ್ತು 131 ಮಹಿಳಾ ಕಾರ್ಮಿಕರಿದ್ದಾರೆ. ಅದೇ ರೀತಿ 7 ರಾಸಾಯನಿಕ ಘಟಕಗಳಿದ್ದು ಇದರಲ್ಲಿ 399 ಪುರುಷ ಕಾರ್ಮಿಕರು, 214 ಮಹಿಳಾ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ.

ಜಿಲ್ಲೆಯಲ್ಲಿ 450 ಹಾಸಿಗೆ ಸಾಮರ್ಥ್ಯದ 15 ಸಮುದಾಯ ಆರೋಗ್ಯ ಕೇಂದ್ರಗಳು, 946 ಹಾಸಿಗೆ ಸಾಮರ್ಥ್ಯದ 136 ಪ್ರಾಥಮಿಕ ಆರೋಗ್ಯ ಕೇಂದ್ರಗಳು, 980 ಹಾಸಿಗೆ ಸಾಮರ್ಥ್ಯದ 7 ತಾಲ್ಲೂಕು ಆಸ್ಪತ್ರೆಗಳು, 750 ಹಾಸಿಗೆ ಸಾಮರ್ಥ್ಯದ ಒಂದು ಸ್ವಾಯತ್ತ ಶೈಕ್ಷಣಿಕ ಆಸ್ಪತ್ರೆ ಸೇರಿ ಜಿಲ್ಲೆಯಲ್ಲಿ ಒಟ್ಟು 3,126 ಹಾಸಿಗೆ

ಪುಟ 14 ಕ್ಕೆ

370ನೇ ವಿಧಿಯನ್ನು ಮರುಸ್ಥಾಪಿಸಲು ಕೋರಿ ಜಮ್ಮು-ಕಾಶ್ಮೀರ ವಿಧಾನಸಭೆ ನಿರ್ಣಯ

ಮೋದಿ–ಶಾ ರ ಮತ್ತದೇ ತಂತ್ರಗಳು

ಆರ್ಟಿಕಲ್ 370ರ ಮೂಲಕ ಜಮ್ಮು ಮತ್ತು ಕಾಶ್ಮೀರಕ್ಕೆ ನೀಡಲಾದ ವಿಶೇಷ ಸ್ಥಾನಮಾನವನ್ನು ಮರುಸ್ಥಾಪಿಸಲು ಕೋರಿ ಜಮ್ಮು ಮತ್ತು ಕಾಶ್ಮೀರ ವಿಧಾನಸಭೆಯಲ್ಲಿ ನಿರ್ಣಯ ತೆಗೆದುಕೊಳ್ಳಲಾಗಿದೆ. ಆ ದಿನ ಮತ್ತು ನಂತರದ ದಿನಗಳಲ್ಲಿಯೂ ನಿರ್ಣಯವನ್ನು ಹಿಂಪಡೆಯುವಂತೆ ಒತ್ತಾಯಿಸಿ ಸದನದಲ್ಲಿ ಬಿಜೆಪಿ ಶಾಸಕರು ಮಾಡುತ್ತಿರುವ ಗದ್ದಲಗಳು ಇಡೀ ದೇಶವೇ ಬೆರಗಾಗಿ ನೋಡುವಂತೆ ಮಾಡಿದೆ. ''ಜೀವಂತವಾಗಿರುವವರೆಗೆ 370ನೇ ವಿಧಿ ತಿದ್ದುಪಡಿ ಆಗುವುದಿಲ್ಲ'' ಎಂದು ಪ್ರಧಾನಿ ಮೋದಿ ಹೇಳುತ್ತಾರೆ. ''ದಿವಂಗತ ಪ್ರಧಾನಿ ಇಂದಿರಾ ಗಾಂಧಿ ಅವರು ಸ್ವರ್ಗದಿಂದ ಕೆಳಗಿಳದಿದ್ದರೂ 370ನೇ ವಿಧಿಯನ್ನು ಮರುಸ್ಥಾಪಿಸಲು ಸಾಧ್ಯವಿಲ್ಲ'' ಎಂದು ಅಮಿತ್ ಶಾ ಹೇಳದ್ದಾರೆ. ಇವರ ಮಾತುಗಳನ್ನು ಕೇಳದರೆ ಇದೇನು ಪ್ರಜಾಪ್ರಭುತ್ವವೋ ಅಥವಾ ಸರ್ವಾಧಿಕಾರಿ ಆಡಳತವೊ ಎಂಬ ಪ್ರಶ್ನೆ ಮೂಡುತ್ತದೆ.

ಆರ್ಟಿಕಲ್ 370ರ ಮೂಲಕ ಜಮ್ಮು ಮತ್ತು ಕಾಶ್ಮೀರಕ್ಕೆ ನೀಡಲಾದ ವಿಶೇಷ ಸ್ಥಾನಮಾನವನ್ನು ಮರುಸ್ಥಾಪಿಸಲು ಕೋರಿ ಜಮ್ಮು ಮತ್ತು ಕಾಶ್ಮೀರ ವಿಧಾನಸಭೆಯಲ್ಲಿ ನವೆಂಬರ್ 6ರಂದು ನಿರ್ಣಯ ತೆಗೆದುಕೊಳ್ಳಲಾಗಿದೆ. ನಿರ್ಣಯದ ಪರವಾಗಿ ಆಡಳಿತ ಪಕ್ಷದ ಸದಸ್ಯರು ಫಲಕಗಳನ್ನು ಪ್ರದರ್ಶಿಸಿದ್ದು ಬಿಜೆಪಿ ಶಾಸಕರನ್ನು ಕೆರಳಿಸಿದೆ. ನಿರ್ಣಯವನ್ನು ಹಿಂಪಡೆಯುವಂತೆ ಒತ್ತಾಯಿಸಿ ಬಿಜೆಪಿ ಶಾಸಕರು ಸದನದಲ್ಲಿ ಗದ್ದಲ ನಡೆಸಿದರು. ಮೂರನೇ ದಿನವೂ ಬಿಜೆಪಿ ಶಾಸಕರು ಪಿಡಿಪಿ ಶಾಸಕರ ಜತೆಗೆ ಗುದ್ದಾಟ ನಡೆಸಿದರು. ಟೇಬಲ್ ಮೇಲೆ ನೆಗೆದಾಡುತ್ತಾ ಕೋಲಾಹಲ ಎಬ್ಬಿಸಿದರು. ವಿಧಾನಸಭೆ ಅಂಗೀಕರಿಸಿದ ನಿರ್ಣಯವನ್ನು "ಪಾಕಿಸ್ತಾನ ಅಜೆಂಡಾ" ಎಂದು ಕರೆದರು.



ಪ್ರಜಾಪ್ರಭುತ್ವವೋ ಅಥವಾ ಸರ್ವಾಧಿಕಾರಿ ಆಡಳಿತವೊ?

"ಜೀವಂತವಾಗಿರುವವರೆಗೆ 370ನೇ ವಿಧಿ ತಿದ್ದುಪಡಿ ಆಗುವುದಿಲ್ಲ" ಎಂದು ಪ್ರಧಾನಿ ನರೇಂದ್ರ ಮೋದಿ ಹೇಳುತ್ತಾರೆ. "370ನೇ ವಿಧಿ ಅದೊಂದು ಇತಿಹಾಸ", "ಜಮ್ಮು ಮತ್ತು ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ನೀಡಿದ 370ನೇ ವಿಧಿಯನ್ನು ಕಾಂಗ್ರೆಸ್ ಧೀಮಂತ ಮತ್ತು ದಿವಂಗತ ಪ್ರಧಾನಿ ಇಂದಿರಾ ಗಾಂಧಿ ಅವರು ಸ್ವರ್ಗದಿಂದ ಕೆಳಗಿಳಿದಿದ್ದರೂ ಮರುಸ್ಥಾಪಿಸಲು ಸಾಧ್ಯವಿಲ್ಲ" ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ. ಇದು ಎಷ್ಟರ ಮಟ್ಟಿಗೆ ಸರಿ? ಪ್ರಧಾನಿ ಮತ್ತು ಗೃಹ ಸಚಿವರ ಇಂತಹ ಮಾತುಗಳನ್ನು ಕೇಳಿದವರಿಗೆ ಇದೇನು ಪ್ರಜಾಪ್ರಭುತ್ವವೋ ಅಥವಾ ಸರ್ವಾಧಿಕಾರಿ ಆಡಳಿತವೊ ಎಂಬ ಪ್ರಶ್ನೆ ಮೂಡುತ್ತದೆ. 'ನೀವು ಕಸಿದುಕೊಂಡಿರುವ ನಮ್ಮ ರಾಜ್ಯದ ಹಕ್ಕು ಮತ್ತು ಸವಲತ್ತುಗಳನ್ನು ವಾಪಸ್ ಕೊಡಿ' ಎಂಬ ಫಲಕಗಳನ್ನು ಪ್ರದರ್ಶಿಸಿದರೆ ತಪ್ಪೇನಿದೆ? ಸದನದ ಸದಸ್ಯನಿಗೆ ಅಂತಹ ಹಕ್ಕೂ ಕೂಡಾ ಇಲ್ಲವೇ? ಎಂಬ ಪ್ರಶ್ನೆಗಳು ಹುಟ್ಟಿಕೊಳ್ಳುತ್ತಿವೆ. ಜನರಿಂದ ಆಯ್ಕೆಯಾದ ಸರ್ಕಾರ ಜನರಿಗೆ ಅವಶ್ಯಕವಾದ ವಿಷಯದಲ್ಲಿ ನಿರ್ಣಯವನ್ನು ಅಂಗೀಕರಿಸದಂತೆ ತಡೆಯಲು ಮುಂದಾಗುವ ಬಿಜೆಪಿಗೆ ತಾವು ಶಾಸಕಾಂಗ ಮತ್ತು ಪ್ರಜಾಪ್ರಭುತ್ವವನ್ನು ಕೊಲ್ಲುತ್ತಿದ್ದೇವೆ ಎನಿಸುತ್ತಿಲ್ಲವೇ? ಆರ್ಟಿಕಲ್ 370ರ ಮೂಲಕ ಜಮ್ಮು ಮತ್ತು ಕಾಶ್ಮೀರಕ್ಕೆ ನೀಡಲಾದ ವಿಶೇಷ ಸ್ಥಾನಮಾನವನ್ನು ಮರುಸ್ಥಾಪಿಸಲು ರಾಜ್ಯದ ಎಲ್ಲಾ ಸಾರ್ವಜನಿಕ ಪ್ರತಿನಿಧಿಗಳೊಂದಿಗೆ ಸಮಾಲೋಚಿಸಲು ವಿಧಾನಸಭೆಯ ಮೂಲಕ ಕೇಂದ್ರವನ್ನು ಕೇಳುವುದೇ ಒಂದು ದೊಡ್ಡ ಅಪರಾಧ ಎಂದು ಬಿಜೆಪಿ ಪರಿಗಣಿಸಿದೆ.

ಚುನಾವಣೆಗಳಲ್ಲಿಯೂ ಬಳಸಿಕೊಳ್ಳತೊಡಗಿದ್ದಾರೆ

ಎಲ್ಲಿ ಚುನಾವಣೆ ಶುರುವಾಗುತ್ತದೆಯೊ, ಅವರ ಆಡಳಿತಕ್ಕೆ ಎಲ್ಲಿ ವಿರೋಧವಿರುತ್ತದೆಯೋ ಅಲ್ಲೆಲ್ಲಾ ಬಿಜೆಪಿಯಿಂದ ಧಾರ್ಮಿಕ ದ್ವೇಷದ ಅಸ್ತ್ರ ಬಳಕೆ ಖಂಡಿತ ಇರುತ್ತದೆ. ಅಲ್ಲೆಲ್ಲಾ ಧಾರ್ಮಿಕ ಉನ್ಮಾದವನ್ನು ಹೆಚ್ಚಿಸುವ ಪ್ರಯತ್ನ ಮಾಡಲಾಗುತ್ತದೆ. ಇದನ್ನು ಅಕ್ಷರಶಃ ಕೇಸರಿ ಪರಿವಾರದವರು ಪ್ರಯೋಗ ಮಾಡುತ್ತಾರೆ. ಹಲವು ದಶಕಗಳಿಂದ ಆರೆಸ್ಸೆಸ್ ಮತ್ತು ಬಿಜೆಪಿ ರಾಜಕೀಯವಾಗಿ ಬಳಸುತ್ತಿರುವ 370ನೇ ವಿಧಿಯನ್ನು ಇತ್ತೀಚಿನ ಮಹಾರಾಷ್ಟ್ರ ಮತ್ತು ಜಾರ್ಖಂಡ್ ಚುನಾವಣೆಗಳಲ್ಲಿಯೂ ಬಳಸಿಕೊಳ್ಳತೊಡಗಿದೆ. ಮೋದಿ, ಅಮಿತ್ ಶಾ ಆದಿಯಾಗಿ ಸಂಘಪರಿವಾರದ ಎಲ್ಲರೂ ಜಮ್ಮು–ಕಾಶ್ಮೀರ ವಿಧಾನಸಭೆ ತೆಗೆದುಕೊಂಡಿರುವ ಈ ನಿರ್ಣಯವನ್ನೇ ಈ ಚುನಾವಣೆಗಳಲ್ಲಿಯೂ ಬಳಸಿಕೊಳ್ಳತೊಡಗಿದ್ದಾರೆ. ಮಹಾರಾಷ್ಟ್ರದಲ್ಲಿ ಸುತ್ತಾಡುತ್ತಿರುವ ಪ್ರಧಾನಿ ಅವರು ಭಾಗವಹಿಸಿದ ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿಯೂ 370ನೇ ವಿಧಿಯ ಬಗ್ಗೆ ಬಹಳಷ್ಟು ಮಾತನಾಡುತ್ತಿದ್ದಾರೆ ಮತ್ತು ಕಾಂಗ್ರೆಸ್ ಪಕ್ಷದ ಮೇಲೆ ಕೆಸರು ಎರಚುತ್ತಿದ್ದಾರೆ. ಕೇಂದ್ರ ಗೃಹ ಸಚಿವ ಅಮಿತ್ ಶಾ ಕೂಡ ಜಾರ್ಖಂಡ್ ವಿಧಾನಸಭಾ ಚುನಾವಣಾ ಪ್ರಚಾರದಲ್ಲಿ ಇದನ್ನೇ ಪ್ರಮುಖ ಅಸ್ತ್ರವಾಗಿ ಬಳಸಿಕೊಂಡಿದ್ದಾರೆ.

ಏಕಪಕ್ಷೀಯವಾಗಿ ಅಳಿಸಿ ಹಾಕಿತು

ಕಾಶ್ಮೀರ ರಾಜ್ಯವು ಭಾರತೀಯ ಒಕ್ಕೂಟಕ್ಕೆ ಸೇರ್ಪಡೆಯಾದ ಐತಿಹಾಸಿಕ ಸಂದರ್ಭದಲ್ಲಿ ಜಮ್ಮು ಮತ್ತು ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ಕಲ್ಪಿಸಿ ಸಂವಿಧಾನದಲ್ಲಿ 370ನೇ ವಿಧಿಯನ್ನು ಸೇರಿಸಲಾಯಿತು. ಪರಸ್ಪರ ಒಪ್ಪಿಗೆಯಿಂದ ಅಲ್ಲಿನ ಜನರಿಗೆ ಸಾಂವಿಧಾನಿಕ ಖಾತರಿ ನೀಡಲಾಯಿತು. ಕೇಂದ್ರದಲ್ಲಿ ಬಿಜೆಪಿ 2ನೇ ಬಾರಿಗೆ ಅಧಿಕಾರಕ್ಕೆ ಬಂದ ನಂತರ, ಅದು ಏಕಪಕ್ಷೀಯವಾಗಿ 370ನೇ ವಿಧಿ ಮತ್ತು ಅದಕ್ಕೆ ಅನುಗುಣವಾಗಿ 35(ಎ) ಅನ್ನು ಅಳಿಸಿ ಹಾಕಿತು. ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಜಮ್ಮು ಮತ್ತು ಕಾಶ್ಮೀರ ಹಾಗೂ ಲಡಾಖ್ ಎಂಬ ಎರಡು ಕೇಂದ್ರಾಡಳಿತ ಪ್ರದೇಶಗಳಾಗಿ ವಿಂಗಡಿಸಲಾಗಿದೆ. ಯಾವುದೇ ರಾಜ್ಯ ವಿಭಜನೆಗೆ ಮುನ್ನ ಆ ರಾಜ್ಯದ ವಿಧಾನಸಭೆಯ ಅಭಿಪ್ರಾಯವನ್ನು ತೆಗೆದುಕೊಳ್ಳಬೇಕು ಎಂದು ಸಂವಿಧಾನ ಹೇಳುತ್ತದೆ. ಆದರೆ, ಸಂವಿಧಾನವನ್ನೇ ನಾಶ ಮಾಡಲು ಬಯಸುವ ಕೇಸರಿ ಪಕ್ಷ ಆ ಮೌಲ್ಯಗಳನ್ನು ಗೌರವಿಸುತ್ತದೆ ಎಂದು ಭಾವಿಸುವುದು ಮೂರ್ಖತನ.

370ನೇ ವಿಧಿಯ ಹಿನ್ನೆಲೆ

ಸ್ವಾತಂತ್ರ್ಯ ಪೂರ್ವದ ರಾಜರ ಆಡಳಿತದ ಜಮ್ಮು ಮತ್ತು ಕಾಶ್ಮೀರವು ಭಾರತದ ಭಾಗವಾದ ಪ್ರಸಕ್ತ ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಮತ್ತು ಪಾಕಿಸ್ತಾನ ಆಕ್ರಮಿತ ಕಾಶ್ಮೀರದ ಭಾಗವನ್ನು ಒಳಗೊಂಡಿತ್ತು. ಅಂದಿನ ಮಹಾರಾಜ ಹರಿಸಿಂಗ್‌ಗೆ ಭಾರತಕ್ಕೆ ಅಥವಾ ಪಾಕಿಸ್ತಾನಕ್ಕೆ ಸೇರುವ ಮನಸ್ಸಿರಲಿಲ್ಲ. ಜಮ್ಮು ಮತ್ತು ಕಾಶ್ಮೀರವನ್ನು ಒಂದು ಪ್ರತ್ಯೇಕ ರಾಷ್ಟ್ರವನ್ನಾಗಿ ಇರಿಸುವುದು ಅವರ ಬಯಕೆಯಾಗಿತ್ತು. ಈ ಕಾರಣದಿಂದ ಹರಿಸಿಂಗ್ 1947 ಆಗಸ್ಟ್ 15ರ ವೇಳೆಗೆ ಯಾವುದೇ ನಿರ್ಧಾರವನ್ನು ತೆಗೆದುಕೊಂಡಿರಲಿಲ್ಲ.

ಷೇಕ್ ಅಬ್ದುಲ್ಲಾ ನೇತೃತ್ವದ ನ್ಯಾಷನಲ್ ಕಾನ್ಫರೆನ್ಸ್ ಪಕ್ಷ ಅಲ್ಲಿನ ಪಾಳೇಗಾರಿ ಆಳ್ವಿಕೆಯ ವಿರುದ್ಧ ಹೋರಾಡುತ್ತಿತ್ತು. ಇದು ರಾಜರ ಸಂಸ್ಥಾನಗಳಲ್ಲಿ ಪಾಳೇಗಾರಿ–ವಿರೋಧಿ, ಸಾಮ್ರಾಜ್ಯಶಾಹಿ–ವಿರೋಧಿ ಚಳವಳಿಯ ಭಾಗವಾಗಿತ್ತು.

ವಾಯುವ್ಯ ಪ್ರಾಂತ್ಯದ ಪಠಾಣರನ್ನೊಳಗೊಂಡ ಪಾಕಿಸ್ತಾನದ ದಾಳಿಕೋರರು ಆಕ್ರಮಣ ನಡೆಸಿ, ಶ್ರೀನಗರದ ಹೊರವಲಯವನ್ನು ತಲುಪಿದಾಗಲಷ್ಟೆ ಭಾರತಕ್ಕೆ ಸೇರ್ಪಡೆಯ ಒಡಂಬಡಿಕೆಗೆ ಸಹಿ ಹಾಕಲು ಮಹಾರಾಜ ಹರಿಸಿಂಗ್ ಒಪ್ಪಿದರು. 1947 ಅಕ್ಟೋಬರ್ 26ರಂದು ಅದಕ್ಕೆ ಸಹಿ ಹಾಕಲಾಯಿತು. ನ್ಯಾಷನಲ್ ಕಾನ್ಫರೆನ್ಸ್ ಜೊತೆಗಿದ್ದ ಕಾಶ್ಮೀರ ಕಣಿವೆಯ ಜನರು ಪಾಕಿಸ್ತಾನಿ ಆಕ್ರಮಣಕಾರರ ವಿರುದ್ಧ ಹೋರಾಡಿದರು. ಭಾರತ ಸರ್ಕಾರ ತನ್ನ ಸೇನೆಯನ್ನು ವಿಮಾನದ ಮೂಲಕ ಶ್ರೀನಗರಕ್ಕೆ ಕಳುಹಿಸಿತು. ಈ ಸೈನ್ಯ ಆಕ್ರಮಣಕಾರರನ್ನು ಹಿಮ್ಮೆಟ್ಟಿಸಿತು.

ಈ ಸನ್ನಿವೇಶದಲ್ಲಿ ಸಂವಿಧಾನವನ್ನು ರಚಿಸುತ್ತಿದ್ದ ಸಂವಿಧಾನ ರಚನಾ ಸಭೆಯು ಸಂವಿಧಾನದಲ್ಲಿ 370ನೇ ವಿಧಿಯನ್ನು ಸೇರಿಸಿತು. ಭಾರತದ ಪ್ರಭುತ್ವ ಮತ್ತು ಕಾಶ್ಮೀರಿ ಜನರ ಪ್ರತಿನಿಧಿಗಳ ನಡುವೆ ಆದ ಒಪ್ಪಂದವನ್ನು 370ನೇ ವಿಧಿ ಪ್ರತಿನಿಧಿಸುತ್ತದೆ. ತಮ್ಮ ಅಸ್ಮಿತೆ ಮತ್ತು 'ಕಶ್ಮೀರಿಯತ್' ಎಂದು ಹೇಳಲಾಗುವ ಅವರದೇ ಆದ ಜೀವನಶೈಲಿಯನ್ನು ಉಳಿಸಿಕೊಳ್ಳುವ ಕಾಶ್ಮೀರಿ ಜನತೆಯ ಆಶೋತ್ತರಗಳನ್ನು ಅದು ಒಳಗೊಂಡಿತ್ತು.

ದೇಶವು ಧರ್ಮಗಳ ಆಧಾರದಲ್ಲಿ ಒಡೆಯುತ್ತಿದ್ದಾಗ ಹಾಗೂ ದ್ವಿರಾಷ್ಟ್ರ ಸಿದ್ಧಾಂತ ಅಸ್ತಿತ್ವದಲ್ಲಿದ್ದಾಗ, ಮುಸ್ಲಿಂ ಬಹುಸಂಖ್ಯಾಕರಾಗಿರುವ ರಾಜ್ಯವೊಂದರ ಜನರು ಜಾತ್ಯತೀತವಾದ ಭಾರತೀಯ ಪ್ರಭುತ್ವಕ್ಕೆ ಬೆಂಬಲ ನೀಡಿದ್ದು ಭಾರತದ ಪ್ರಭುತ್ವಕ್ಕೆ ಮಹತ್ವದ ವಿಚಾರವಾಗಿತ್ತು. ದೇಶ ವಿಭಜನೆಯ ಸಂದರ್ಭದಲ್ಲಿ ವಾಯವ್ಯ ಭಾರತವನ್ನು ದೊಂಬಿಗಳ ಕೆನ್ನಾಲಗೆ ಆವರಿಸಿಕೊಂಡಿದ್ದಾಗ ಕಾಶ್ಮೀರ ಕಣಿವೆಯು ಶಾಂತಿ ಮತ್ತು ಕೋಮು ಸೌಹಾರ್ದದ ಸ್ವರ್ಗವಾಗಿತ್ತು.

ಅದ್ಭುತ ಅವಕಾಶಗಳನ್ನು ತೆರೆದಿದೆಯೇ?

370ನೇ ವಿಧಿಯನ್ನು ರದ್ದುಗೊಳಿಸಿದ ದಿನಗಳಲ್ಲಿ ನಾಗರಿಕ ಹಕ್ಕುಗಳ ಉಲ್ಲಂಘನೆ ಮಾಡಲಾಯಿತು. ವಿರೋಧ ಪಕ್ಷಗಳ ನಾಯಕರನ್ನು ಭದ್ರತಾ ಪಡೆಗಳ ಕಣ್ಗಾವಲಿನಲ್ಲಿ ಅಕ್ರಮ ಬಂಧನದಲ್ಲಿರಿಸಲಾಯಿತು. ಪತ್ರಿಕಾ ಸ್ವಾತಂತ್ರ್ಯ ಮೃಗವಾಗಿ ಪರಿಣಮಿಸಿತು. ರಾಜ್ಯಾದ್ಯಂತ ಇಂಟರ್ನೆಟ್ ಸ್ಥಗಿತಗೊಳಿಸಲಾಯಿತು. ಈ ಅವಧಿಯಲ್ಲಿ ಬಿಜೆಪಿ ದೇಶದೆಲ್ಲೆಡೆಯೂ ಕೋಮುದ್ವೇಷ ಮತ್ತು ಉದ್ವಿಗ್ನತೆ ಹುಟ್ಟುಹಾಕಿತು. 370ನೇ ವಿಧಿಯನ್ನು ರದ್ದುಗೊಳಸಿದರೆ ಜಮ್ಮು–ಕಾಶ್ಮೀರಕ್ಕೆ ಅದ್ಭುತ ಅವಕಾಶಗಳು ತೆರೆಯುತ್ತವೆ, ಅಲ್ಲಿ ಉದ್ಯಮಗಳ ಸ್ಥಾಪನೆಯಾಗುತ್ತವೆ, ಜನರಿಗೆ ಉದ್ಯೋಗ ದೊರಕುತ್ತದೆ, ಭಯೋತ್ಪಾಧನೆ ಇಲ್ಲದಂತಾಗುತ್ತದೆ ಎಂದೆಲ್ಲಾ ಹೇಳಿದರು.

ಆದರೆ, 5 ವರ್ಷಗಳ ನಂತರವೂ ಆ ರಾಜ್ಯದಲ್ಲಿ ಅಂತಹ ಅವಕಾಶಗಳು ಕಾಣುತ್ತಿಲ್ಲ. ಆದರೂ, ಅಲ್ಲಿ ಅದ್ಭುತ ಅವಕಾಶಗಳನ್ನು ತೆರೆದಿದೆ ಎಂದು ಬಿಜೆಪಿಯವರು ಬಿಂಬಿಸುತ್ತಿದ್ದಾರೆ. ಆದರೆ, ಅಲ್ಲಿನ ಪರಿಸ್ಥಿತಿಗಳು ವೇಗವಾಗಿ ಹದಗೆಡತೊಡಗಿದವು. ಆರ್ಥಿಕ, ಸಾಮಾಜಿಕ, ರಾಜಕೀಯ ಕ್ಷೇತ್ರಗಳ ಬಿಕ್ಕಟ್ಟು ಮಾತ್ರವಲ್ಲದೆ ಮಾನವ ಹಕ್ಕುಗಳೂ ಬಿಗಡಾಯಿಸುವ ಆತಂಕದಲ್ಲಿ ಪ್ರಜಾಪ್ರಭುತ್ವವಾದಿಗಳು ಆತಂಕ ವ್ಯಕ್ತಪಡಿಸಿದರು. ಇನ್ನೊಂದೆಡೆ ಭಯೋತ್ಪಾದಕ ಚಟುವಟಿಕೆಗಳು ಹೆಚ್ಚಾಗುತ್ತಿದ್ದು, ಕೇಂದ್ರ ಹಾಗೂ ಸೇನೆಯ ನಿಗ್ರಹ ಕ್ರಮಗಳು ತೀವ್ರಗೊಂಡಿದ್ದು, ಕಳೆದ ಕೆಲ ತಿಂಗಳ ಹಿಂದೆ ನರೇಂದ್ರ ಮೋದಿಯವರು ವಿಶೇಷ ಉನ್ನತ ಮಟ್ಟದ ಸಭೆ ನಡೆಸಿ ಪರಾಮರ್ಶೆ ನಡೆಸಿ ಸುಧಾರಿತ ಸೇನಾ ಪಡೆಗಳನ್ನು ಆ ರಾಜ್ಯಕ್ಕೆ ಕಳುಹಿಸಲು ನಿರ್ಧರಿಸಿದರು. ಈ ವರ್ಷದ ಆರಂಭದಲ್ಲಿ ಕಾಶ್ಮೀರಕ್ಕೆ ಭೇಟಿ ನೀಡಿ ಎಲ್ಲವೂ ಅದ್ಭುತವಾಗಿದೆ ಎಂದು ಕೂಗಿದ ಮೋದಿಯವರೇ 6 ತಿಂಗಳ ನಂತರ ತುರ್ತು ಕ್ರಮಗಳನ್ನು ಘೋಷಿಸಿದರು. ಜೊತೆಗೆ ಪರಿಸ್ಥಿತಿಯ ತೀವ್ರತೆಯನ್ನು ಘೋಷಿಸಿದರು. ಭಯೋತ್ಪಾದಕ ಚಟುವಟಿಕೆಗಳ ನೆಲೆಯಾಗಿರುವ ಸ್ಥಳಗಳಿಗೆ ಸಶಸ್ತ್ರ ಪಡೆಗಳನ್ನು ನಿಯೋಜಿಸಲು ಮತ್ತು ಕಣ್ಗಾವಲು ಕಾರ್ಯಕ್ರಮಗಳನ್ನು ತೀವ್ರಗೊಳಿಸಲು ಆದೇಶಿಸಲಾಯಿತು. ಈ ವಿಶೇಷ ಕಾರ್ಯಾಚರಣೆಯಲ್ಲಿ ಒಟ್ಟು 500 ಕಮಾಂಡೋಗಳು ಮತ್ತು 2,000 ಇತರ ಪಡೆಗಳು ಭಾಗವಹಿಸುತ್ತಿವೆ ಎಂದು ವರದಿಯಾಗಿದೆ. ರಾಜ್ಯ ಪೊಲೀಸರೊಂದಿಗೆ ಭದ್ರತಾ ಪಡೆಗಳು ದಾಳಿಯನ್ನು ಹೆಚ್ಚಿಸಿವೆ. ಹೆಚ್ಚಿನ ಸಂಖ್ಯೆಯ ಶಂಕಿತರನ್ನು ಬಂಧಿಸಲಾಗುತ್ತಿದೆ. ಕಾಶ್ಮೀರ ಕಣಿವೆಯಿಂದ ಜಮ್ಮು ಪ್ರದೇಶಕ್ಕೆ ಭಯೋತ್ಪಾದಕ ಚಟುವಟಿಕೆಗಳು ಹರಡುತ್ತಿವೆ ಎಂದು ಕೇಂದ್ರ ಹೇಳಿದೆ.

ಜನರು ಬಿಜೆಪಿಯನ್ನು ತಿರಸ್ಕರಿಸಿದರೂ. . .

ಈ ಕಾರಣದಿಂದಾಗಿಯೇ ಚುನಾವಣೆಯಲ್ಲಿ ಬಿಜೆಪಿಯನ್ನು ಜಮ್ಮು–ಕಾಶ್ಮೀರದ ತಿರಸ್ಕರಿಸಿದ್ದಾರೆ. ವಿಶೇಷ ಸ್ಥಾನಮಾನದ ಆಕಾಂಕ್ಷೆಯನ್ನು ಜಮ್ಮು–ಕಾಶ್ಮೀರದ ಜನರು ಮತದ ಮೂಲಕ ತಿಳಿಸಿದ್ದಾರೆ. ಆದರೂ ಬಿಜೆಪಿ ದ್ವೇಷದ ರಾಜಕಾರಣವನ್ನು ಮುಂದುವರಿಸುತ್ತಿದೆ. ಜಮ್ಮು–ಕಾಶ್ಮೀರ ವಿಧಾನಸಭೆಯಲ್ಲಿ ಬಿಜೆಪಿ ಸದಸ್ಯರ ಹೇಯ ವರ್ತನೆಯು ಪ್ರಧಾನಿ ಮೋದಿ, ಅಮಿತ್ ಶಾ ಮತ್ತು ಬಿಜೆಪಿಯ ಕೇಂದ್ರ ನಾಯಕತ್ವದ ನಿರ್ದೇಶನದಂತೆ ನಡೆದಿರುವುದು ಸತ್ಯ. ಸೂಕ್ಷ್ಮ ಜಮ್ಮು ಮತ್ತು ಕಾಶ್ಮೀರಕ್ಕೆ ರಾಜ್ಯ ಸ್ಥಾನಮಾನವನ್ನು ಮರುಸ್ಥಾಪಿಸುವುದು ಅಲ್ಲಿನ ಜನರ ಆಶೋತ್ತರಗಳನ್ನು ಈಡೇರಿಸುತ್ತದೆ. ಅವರಿಗೆ ಸಂವಿಧಾನದ ಮೇಲೆ ನಂಬಿಕೆ ಬರುವಂತೆ ಮಾಡುತ್ತದೆ. ಇದು ದೇಶದ ನಾಗರಿಕರಲ್ಲಿ ಆತ್ಮವಿಶ್ವಾಸವನ್ನು ಹೆಚ್ಚಿಸುತ್ತದೆ. ರಾಜಕೀಯ ಪಕ್ಷಗಳು ಮತ್ತು ಎಲ್ಲರೊಂದಿಗೆ ವಿವರವಾದ ಸಮಾಲೋಚನೆಯ ನಂತರವೇ ಜಮ್ಮು ಮತ್ತು ಕಾಶ್ಮೀರದಲ್ಲಿ ಶಾಂತಿ ಮತ್ತು ಸಾಮರಸ್ಯವನ್ನು ಸ್ಥಾಪಿಸಲು ಸಾಧ್ಯ. ಚುನಾವಣೆಯಲ್ಲಿ ತಕ್ಕ ಪಾಠ ಕಲಿಸಿದರಾದರೂ ಅದೇ ದ್ವೇಷವನ್ನು ಕೆರಳಿಸಿ ಚುನಾವಣೆಯಲ್ಲಿ ಲಾಭ ಪಡೆಯಲು ಯೋಜನೆ ರೂಪಿಸುತ್ತಿರುವ ಬಿಜೆಪಿ ನಡೆಯ ವಿರುದ್ಧ ಜನ ಎಚ್ಚೆತ್ತುಕೊಳ್ಳಬೇಕಿದೆ. ಇಲ್ಲದಿದ್ದರೆ, ಅವರ ತಂತ್ರಗಳು ಮತ್ತು ದೇಶದಲ್ಲಿ ಹರಡುವ ದ್ವೇಷದ ಜ್ವಾಲೆಯಿಂದ ಜನಾಂಗೀಯ ಏಕತೆಗೆ ಅಪಾಯವಿದೆ.

–ಸಿ.ಸಿದ್ದಯ್ಯ

ಶ್ರೀಲಂಕಾ: ಎನ್‌ಪಿಪಿಗೆ ಅಸಾಮಾನ್ಯ ವಿಜಯ

ಪ್ರಕಾಶ್ ಕಾರತ್

ಶ್ರೀಲಂಕಾದ ಸಂಸದೀಯ ಚುನಾವಣೆಗಳಲ್ಲಿ ನ್ಯಾಷನಲ್ ಪೀಪಲ್ಸ್ ಪವರ್ (ಎನ್‌ಪಿಪಿ) ಕೂಟ ಅಭೂತಪೂರ್ವವಾದ ಜಯವನ್ನು ದಾಖಲಿಸಿದೆ. ಶ್ರೀಲಂಕಾದಲ್ಲಿ ಇದೇ ಮೊದಲ ಬಾರಿಗೆ ರಾಜಕೀಯ ಪಕ್ಷವೊಂದು ಅನುಪಾತ ಪ್ರತಿನಿಧಿತ್ವ ವ್ಯವಸ್ಥೆ ಮೂಲಕ ಮೂರನೇ ಎರಡರಷ್ಟು ಬಹುಮತವನ್ನು ಗಳಿಸಿದೆ. ದಾಖಲೆಯ ಶೇಕಡ 61.6 ಮತದಾನ ನಡೆದ ಚುನಾವಣೆಯಲ್ಲಿ, ಒಟ್ಟು 225ರ ಸ್ಥಾನಗಳ ಪೈಕಿ ಎನ್‌ಪಿಪಿ 159ರಲ್ಲಿ ಗೆದ್ದಿದೆ. 2020ರಲ್ಲಿ ನಡೆದ ಹಿಂದಿನ ಚುನಾವಣೆಗಳಲ್ಲಿ ಎನ್‌ಪಿಪಿ ಕೇವಲ ಮೂರು ಸ್ಥಾನಗಳಲ್ಲಿ ಜಯಿಸಿದ್ದನ್ನು ಪರಿಗಣಿಸಿದರೆ ಇದು ನಿಜಕ್ಕೂ ಅಸಾಧಾರಣ ನಿರ್ವಹಣೆಯಾಗಿದೆ.

ಇದಕ್ಕೂ ಮುನ್ನ, ಸೆಪ್ಟೆಂಬರ್‌ನಲ್ಲಿ ಶೇಕಡ 42ರಷ್ಟು ಮತ ಗಳಿಸಿ ಹಾಗೂ ಎರಡನೇ ಪ್ರಾಶಸ್ತ್ಯದ ಮತಗಳ ಎಣಿಕೆ ನಂತರ ಎನ್‌ಪಿಪಿ ಅಭ್ಯರ್ಥಿ ಅನುರಾ ಕುಮಾರ ದಿಸ್ಸನಾಯಕೆ ಅಧ್ಯಕ್ಷೀಯ ಚುನಾವಣೆಯಲ್ಲಿ ಜಯಶಾಲಿಯಾಗಿದ್ದರು. ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ನಂತರ ದಿಸ್ಸನಾಯಕೆ ಸಂಸತ್ತನ್ನು ವಿಸರ್ಜಿಸಿ ಚುನಾವಣೆಯನ್ನು ವ್ಯವಸ್ಥೆಗೊಳಿಸಿದ್ದರು. ನವೆಂಬರ್ 14ರಂದು ಮತದಾನ ನಡೆದಿತ್ತು.

2019ರಲ್ಲಿ ಸ್ಥಾಪನೆ

2019ರಲ್ಲಿ ಎನ್‌ಪಿಪಿಯನ್ನು ರಚಿಸಲಾಗಿತ್ತು. ಮಾರ್ಕ್ಸ್‌ವಾದಿ ಪಕ್ಷವಾದ ಜನತಾ ವಿಮುಕ್ತಿ ಪೆರುಮನ (ಜೆವಿಪಿ) ಅದರ ಮುಖ್ಯ ಅಂಗಪಕ್ಷವಾಗಿದ್ದು ಇತರ 20 ರಾಜಕೀಯ ಪಕ್ಷಗಳು, ಕಾರ್ಮಿಕ ಸಂಘಟನೆಗಳು ಮತ್ತು ಸಾಮಾಜಿಕ ಗುಂಪುಗಳು ಸದಸ್ಯರಾಗಿವೆ. ಜೆವಿಪಿ ನಾಯಕ ದಿಸ್ಸನಾಯಕೆ ಎನ್‌ಪಿಪಿಯ ಮುಖಂಡರಾಗಿದ್ದಾರೆ. ದಿಸ್ಸನಾಯಕೆ ಅಧ್ಯಕ್ಷರಾಗಿ ಆಯ್ಕೆಯಾಗಿದ್ದು ಮತ್ತು ಸಂಸತ್ತಿನಲ್ಲಿ ಎನ್‌ಪಿಪಿ ಮೂರನೇ ಎರಡು ಬಹುಮತ ಗಳಿಸಿರುವುದು ಶ್ರೀಲಂಕಾ ರಾಜಕಾರಣದಲ್ಲಿ ಬೃಹತ್ ಪಲ್ಲಟವಾಗಿದೆ. ಮೇಲ್ವರ್ಗ ಮತ್ತು ಕುಟುಂಬ ಹಿತಾಸಕ್ತಿಯನ್ನು ಪ್ರತಿನಿಧಿಸುವಂಥ ರಾಜಪಕ್ಸರ ಎಸ್‌ಎಪಿಪಿ, ಎಸ್‌ಎಲ್‌ಎಫ್‌ಪಿ ಬಣ ಮತ್ತು ರಣಿಲ್ ವಿಕ್ರಮಸಿಂಘೆಯ ಹಿಂದಿನ ಯುನೈಟೆಡ್ ನ್ಯಾಷನಲ್ ಪಾರ್ಟಿ ಇವೆಲ್ಲವೂ ಸಂಸದೀಯ ಚುನಾವಣೆಯಲ್ಲಿ ಧೂಳೀಪಟವಾಗಿವೆ. ಸಜಿತ್ ಪ್ರೇಮದಾಸರ ಎಸ್‌ಜೆಬಿಗೆ ಮಾತ್ರವೇ ಕುಟುಕು ಜೀವ ಉಳಿಸಿಕೊಂಡು ಸಂಸತ್ತಿನಲ್ಲಿ 40 ಸ್ಥಾನಗಳನ್ನು ಗಳಿಸಲು ಸಾಧ್ಯವಾಗಿದೆ.

22 ಚುನಾವಣಾ ಜಿಲ್ಲೆಗಳ ಪೈಕಿ ಎನ್‌ಪಿಪಿ 21ರಲ್ಲಿ ಜಯಶಾಲಿಯಾಗಿದೆ. ತಮಿಳು ಜಿಲ್ಲೆಗಳಾದ ಜಾಫ್ನಾ ಮತ್ತು ವಣ್ಣಿಯಲ್ಲಿ ಎನ್‌ಪಿಪಿ ಗೆದ್ದಿರುವುದು ತುಂಬಾ ಗಮನಾರ್ಹವಾಗಿದೆ. ಅಲ್ಲಿ ಇಳಂಕೈ ತಮಿಳ್ ಅರಸು ಕಚ್ಚಿ (ಐಟಿಎಕೆ) ಮತ್ತಿತರ ತಮಿಳು ಪಕ್ಷಗಳನ್ನು ಎನ್‌ಪಿಪಿ ಪರಾಭವಗೊಳಿಸಿದೆ. ಗಣನೀಯ ಮುಸ್ಲಿಂ ಜನಸಂಖ್ಯೆಯಿರುವ ಅಂಪರಾ ಮತ್ತು ಟ್ರಿಂಕಾಮಲಿಯಲ್ಲಿ ಕೂಡ ಎನ್‌ಪಿಪಿ ಭಾರಿ ಜಯ ಸಾಧಿಸಿದೆ.

ಗಣನೀಯ ಪ್ರಮಾಣದಲ್ಲಿ ತಮಿಳು ಪ್ಲಾಂಟೇಶನ್ ಕಾರ್ಮಿಕರಿರುವ ದೇಶದ ಮಧ್ಯ ವಲಯದಲ್ಲಿ ಕೂಡ ಉತ್ತಮ ಸಾಧನೆ ಮಾಡಿರುವ ಎನ್‌ಪಿಪಿ, ದಕ್ಷಿಣದ ಜಿಲ್ಲೆಗಳಲ್ಲಿ ಅಭೂತಪೂರ್ವ ಗೆಲವು ಕಂಡಿದೆ. ಈ ರೀತಿಯಾಗಿ, ಜನಾಂಗೀಯ ಮತ್ತು ಧಾರ್ಮಿಕ ಅಸ್ಮಿತೆಗಳನ್ನು ಮೀರಿ ಸಮಾಜದ ಎಲ್ಲ ವಿಭಾಗಗಳ ಬೆಂಬಲ ಗಳಿಸುವಲ್ಲಿ ಎನ್‌ಪಿಪಿ ಯಶಸ್ವಿಯಾಗಿದೆ. 2022ರಲ್ಲಿ ಶ್ರೀಲಂಕಾ ಆರ್ಥಿಕ ಬಿಕ್ಕಟ್ಟಿಗೆ ಸಿಲುಕಿದಾಗಿನಿಂದ ಎನ್‌ಪಿಪಿ ಮತ್ತು ಜೆವಿಪಿಯ ಜನಪ್ರಿಯತೆಯ ಗ್ರಾಫ್ ಏರತೊಡಗಿತ್ತು. ಆ ಬಿಕ್ಕಟ್ಟು ಅರಗಾಲಯ ಎಂಬ ಸಾಮೂಹಿಕ ಉತ್ಕ್ರಾಂತಿಗೆ ಕಾರಣವಾಗಿತ್ತು. ದೇಶವನ್ನು ಲೂಟಿ ಮಾಡಲು ನಿಂತಿದ್ದ ರಾಜಪಕ್ಸ ಕುಟುಂಬದ ಭ್ರಷ್ಟ ರಾಜಕೀಯ ವ್ಯವಸ್ಥೆ ವಿರುದ್ಧ ಜನರು ಬಂಡಾಯವೆದ್ದಿದ್ದರು. ಜನರ ಬಂಡಾಯದ ಫಲವಾಗಿ ರಾಜಕೀಯ ಭ್ರಷ್ಟಾಚಾರದ ವಿರುದ್ಧದ ಹೋರಾಟದ ನೇತೃತ್ವ ವಹಿಸಿದ್ದ ಎನ್‌ಪಿಪಿ ಮುಂಚೂಣಿಗೆ ಬಂದಿತು. ಜನರ ಆರ್ಥಿಕ ಹಕ್ಕುಗಳು ಮತ್ತು ಜೀವನೋಪಾಯದ ಸಂರಕ್ಷಕನಾಗಿ ಅದು ಹೊರಹೊಮ್ಮಿತು. ಮುಖ್ಯವಾಹಿನಿ ರಾಜಕೀಯ ಪಕ್ಷಗಳ ಇತರ ಕಳಂಕಿತ ಹಾಗೂ ಭ್ರಷ್ಟ ನಾಯಕರಿಗೆ ವಿರುದ್ಧವಾಗಿ ಅನುರಾ ದಿಸ್ಸನಾಯಕೆ ಜನತೆಯ ಆಶೋತ್ತರಗಳ ಪ್ರತಿಬಿಂಬವಾಗಿ ಮೂಡಿದರು.

ಸಾಂವಿಧಾನಿಕ ಮತ್ತು ರಾಜಕೀಯ ಸುಧಾರಣೆಗಳನ್ನು ತರಲು ಹಾಗೂ ಪರ್ಯಾಯ ನೀತಿಗಳನ್ನು ಅನುಷ್ಠಾನಗೊಳಿಸಲು ಆಡಳಿತ ನಡೆಸಲಿಕ್ಕಾಗಿ ಸಂಸತ್ತಿನಲ್ಲಿ ಸ್ಪಷ್ಟ ಬಹುಮತ ಗಳಿಸುವುದು ದಿಸ್ಸನಾಯಕೆ ಮತ್ತು ಎನ್‌ಪಿಪಿಗೆ ಅಗತ್ಯವಾಗಿತ್ತು. ಸಂಸತ್ತಿನಲ್ಲಿ ಬಹುಮತ ಇಲ್ಲದಿದ್ದರೆ ಬದಲಾವಣೆಯ ನಿಟ್ಟಿನಲ್ಲಿ ಸಾಗಲು ಅಧ್ಯಕ್ಷ ದಿಸ್ಸನಾಯಕೆಯವರ ಕೈಗಳನ್ನು ಕಟ್ಟಿ ಹಾಕಿದಂತಾಗುತ್ತಿತ್ತು. ಈಗ ಎನ್‌ಪಿಪಿ ಸಂಸತ್ತಿನಲ್ಲಿ ಸೂಪರ್ ಬಹುಮತ ಗಳಿಸಿರುವುದರಿಂದ ಸರಕಾರದ ನಿಜವಾದ ಕೆಲಸಗಳನ್ನು ಆರಂಭಿಸಬಹುದಾಗಿದೆ. ಡಾ. ಹರಿಣಿ ಅಮರಸೂರ್ಯ ಪ್ರಧಾನಿಯಾಗಿರುವ 21 ಸದಸ್ಯರ ಸಚಿವ ಸಂಪುಟ ಪ್ರಮಾಣ ವಚನ ಸ್ವೀಕರಿಸಿದೆ.

ತಾನು ಅನುಸರಿಸಲಿರುವ ಸಮಗ್ರ ನೀತಿಗಳನ್ನು ಅಧ್ಯಕ್ಷ ದಿಸ್ಸನಾಯಕೆ ಸಂಸದೀಯ ಚುನಾವಣೆಗಳ ಮುನ್ನ ಪ್ರಕಟಿಸಿರಲಿಲ್ಲ. ಈಗ ಆ ನೀತಿಯನ್ನು ರೂಪಿಸಬಹುದಾಗಿದೆ. ಬೆಲೆಯೇರಿಕೆ ಮತ್ತು ಜೀವನ ವೆಚ್ಚದಿಂದ ಬವಣೆ ಪಡುತ್ತಿರುವ ಜನರಿಗೆ ಆರ್ಥಿಕ ಪರಿಹಾರ ಒದಗಿಸುವುದು, ಭ್ರಷಾಚಾರ ಮತ್ತು ವ್ಯರ್ಥ ವೆಚ್ಚದ ನಾಶ, ಕದಿಯಲಾದ ಸಾರ್ವಜನಿಕರ ಹಣವನ್ನು ವಸೂಲಿ ಮಾಡುವುದು ಮತ್ತು ನಾಗರಿಕ ಸ್ವಾತಂತ್ರ್ಯ ಹಾಗೂ ಜನತಾಂತ್ರಿಕ ಹಕ್ಕುಗಳನ್ನು ಮರುಸ್ಥಾಪಿಸುವುದು ಅವರ ಮುಖ್ಯ ಅಜೆಂಡಾ ಆಗಲಿದೆ. ಹೊಸ ಸಂವಿಧಾನ ರಚನೆ ಹಾಗೂ ಕಾರ್ಯನಿರ್ವಾಹಕ ಅಧ್ಯಕ್ಷತೆ ವ್ಯವಸ್ಥೆಯನ್ನು ರದ್ದುಪಡಿಸುವುದಾಗಿಯೂ ಎನ್‌ಪಿಪಿ ಆಶ್ವಾಸನೆ ನೀಡಿದೆ.

ತಕ್ಷಣದ ಸವಾಲುಗಳು

ಸರಕಾರದ ಮುಂದೆ ತಕ್ಷಣದ ಹಲವು ಸವಾಲುಗಳಿವೆ. ಅಂತಾರಾಷ್ಟ್ರೀಯ ಹಣಕಾಸು ನಿಧಿಯಿಂದ (ಐಎಂಎಫ್) ಶ್ರೀ ಲಂಕಾ 2.9 ಶತಕೋಟಿ ಡಾಲರ್ ಸಾಲ ಪಡೆದಿದ್ದು ಅದರ ಎರಡು ಕಂತನ್ನು ದೇಶಕ್ಕೆ ನೀಡಲಾಗಿದೆ. ಜನರ ಮೇಲೆ ಮಿತವ್ಯಯ ಹೇರಬೇಕೆಂಬ ಷರತ್ತಿನೊಂದಿಗೆ ಸಾಲದ ಕಂತುಗಳನ್ನು ಬಿಡುಗಡೆ ಮಾಡಲಾಗಿದೆ. ಜನರಿಗೆ ಪರಿಹಾರ ಸಿಗುವಂತಾಗಲು ಕೆಲವು ಷರತ್ತುಗಳನ್ನು ಸಡಿಲಿಸುವುದಾಗಿ ಸರಕಾರ ಭರವಸೆ ನೀಡಿದೆ. ಎನ್‌ಪಿಪಿ ಸರಕಾರ ಆರ್ಥಿಕ ಪುನಶ್ಚೇತನ ಮಾಡಬೇಕಿದೆ ಹಾಗೂ ನವ ಉದಾರವಾದಿ ನೀತಿಗಳ ಹೆಜ್ಜೆಯಲ್ಲಿ ಸಾಗಿದ್ದ ದೇಶದ ಆರ್ಥಿಕ ಪರಿಸ್ಥಿತಿ ಅಂತಿಮ ಘಟ್ಟವನ್ನು ತಲುಪಿದ್ದು ಜನಪರ ಅಭಿವೃದ್ಧಿ ಪಥವನ್ನು ರೂಪಿಸಬೇಕಿದೆ. ಅಂತಾರಾಷ್ಟ್ರೀಯ ಹಣಕಾಸು ಬಂಡವಾಳ ಮತ್ತು ಪಾಶ್ಚಾತ್ಯ ಸರಕಾರಗಳ ಬ್ಲ್ಯಾಕ್‌ಮೇಲ್‌ಗೆ ದೇಶ ತುತ್ತಾಗುವ ಸ್ಥಿತಿಯಲ್ಲಿದೆ. ದೊಡ್ಡ ನೆರೆ ದೇಶವಾದ ಭಾರತದೊಂದಿಗೆ ನಿಕಟ ಬಾಂಧವ್ಯ ಇಟ್ಟುಕೊಳ್ಳುವ ಜತೆಯಲ್ಲೇ ಸಂಕೀರ್ಣವಾದ ಭೌಗೋಳಿಕ ರಾಜಕೀಯ ಪರಿಸ್ಥಿಯಿಂದ ಪಾರಾಗಲು ಪ್ರಯತ್ನಿಸಬೇಕೆನ್ನುವ ಅರಿವು ಎನ್‌ಪಿಪಿ ನಾಯಕತ್ವಕ್ಕೆ ಇದೆ. ತಮಿಳು ಮತ್ತು ಮುಸ್ಲಿಂ ಅಲ್ಪಸಂಖ್ಯಾತರ ಗಣನೀಯ ಬೆಂಬಲವನ್ನು ಎನ್‌ಪಿಇಪಿ ಗಳಿಸಿರುವುದು ಅವರ ಹಕ್ಕುಗಳನ್ನು ಒದಗಿಸಲು ಮತ್ತು ಅಧಿಕಾರ ವ್ಯವಸ್ಥೆಯಲ್ಲಿ ಅವರ ನ್ಯಾಯೋಚಿತ ಪಾಲನ್ನು ನೀಡಲು ಒಂದು ಧನಾತ್ಮಕ ಆಧಾರವಾಗಬೇಕು. ಸಂವಿಧಾನ ಮತ್ತು ರಾಜಕೀಯ ವ್ಯವಸ್ಥೆಯಲ್ಲಿ ಬದಲಾವಣೆಗಳ ಮೂಲಕ ಅದನ್ನು ಹೇಗೆ ಸಾಧಿಸಬಹುದು ಎನ್ನುವುದನ್ನು ಯೋಚಿಸಬೇಕಾಗಿದೆ.

ಭಾರತದ ಎಲ್‌ಡಿಎಫ್‌ಗೆ ಸಮಾನ

ಶ್ರೀಲಂಕಾದ ಎನ್‌ಪಿಪಿ, ಭಾರತದಲ್ಲಿ ರೂಪಿಸಲು ಯತ್ನಿಸಲಾಗುತ್ತಿರುವ ಎಡ ಮತ್ತು ಪ್ರಜಾಸತ್ತಾತ್ಮಕ ರಂಗಕ್ಕೆ (ಎಲ್‌ಡಿಎಫ್) ಸಮಾನವಾಗಿದೆ. ಅಂಥದ್ದೊಂದು ಎಡ ರಾಜಕೀಯ ಕೂಟವು ಶ್ರೀಲಂಕಾದಲ್ಲಿ ಅಧ್ಯಕ್ಷ ಸ್ಥಾನ ಮತ್ತು ಸರಕಾರವನ್ನು ಹೊಂದಿರುವುದು ದಕ್ಷಿಣ ಏಷ್ಯಾದ ರಾಜಕೀಯ ಇತಿಹಾಸದಲ್ಲಿ ಒಂದು ಮೈಲಿಗಲ್ಲು ವಿದ್ಯಮಾನವಾಗಿದೆ. ಧಾರ್ಮಿಕ ಮತ್ತು ಜನಾಂಗೀಯ ಸಂಘರ್ಷಗಳಿಂದ ತತ್ತರಿಸಿರುವ ಹಾಗೂ ಹಣಕಾಸು ಬಂಡವಾಳದ ಶೋಷಣೆ ಮತ್ತು ಕಾರ್ಪೊರೇಟ್ ಲೂಟಿಗೆ ತುತ್ತಾಗಿರುವ ದಕ್ಷಿಣ ಏಷ್ಯಾ ದೇಶಗಳಿಗೆ ಶ್ರೀಲಂಕಾದ ಎಡಪಂಥೀಯರ ಅಪೂರ್ವ ಯಶಸ್ಸು ಒಂದು ಹೃದಯಸ್ಪರ್ಶಿ ಬೆಳವಣಿಗೆಯಾಗಬೇಕು.

ಅನು: ವಿಶ್ವ

ಪರಿಸರ ಮಾಲಿನ್ಯದ ನೆಪದಲ್ಲಿ ರೈತರ ಮೇಲೆ ಭಾರೀ ಪರಿಸರ ದಂಡ ಮೋದಿ ಸರಕಾರ ರೈತರಿಗೆ ವಿಶ್ವಾಸಘಾತ ಮಾಡುತ್ತಿದೆ–ಎಐಕೆಎಸ್

ನವೆಂಬರ್ 6ರಂದು ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ ಕೂಳೆ ಸುಡುವುದರಿಂದ ಆಗುವ ವಾಯು ಮಾಲಿನ್ಯವನ್ನು ತಡೆಯಲೆಂದು ರೈತರ ಮೇಲೆ ಹಾಕುತ್ತಿರುವ ದಂಡದ ಪ್ರಮಾಣವನ್ನು ದುಪ್ಪಟ್ಟು ಮಾಡುವ ಅಧಿಸೂಚನೆ ಹೊರಡಿಸಿದೆ. ಇದು ಒಂದು ಕರಾಳ ಕ್ರಮ ಎಂದು ಅಖಿಲ ಭಾರತ ಕಿಸಾನ್ ಸಭಾ(ಎಐಕೆಎಸ್) ಖಂಡಿಸಿದೆ. ರಾಷ್ಟ್ರೀಯ ರಾಜಧಾನಿ ಪ್ರದೇಶ(ಎನ್‌ಸಿಆರ್) ಮತ್ತು ಸುತ್ತಲಿನ ಪ್ರದೇಶದಲ್ಲಿ ವಾಯು ಗುಣಮಟ್ಟ ನಿರ್ವಹಣೆ (ಕೂಳೆ ಸುಡುವುದಕ್ಕೆ ಪರಿಸರ ನಷ್ಟಭರ್ತಿ ವಿಧಿಸುವುದು, ಸಂಗ್ರಹ ಮತ್ತು ಬಳಕೆ) ಎಂಬ ಹೆಸರಿನ ಅಧಿಸೂಚನೆಯ ಅಡಿಯಲ್ಲಿ ರೂ. 5,000ದಿಂದ 30,000ವರೆಗೆ ದಂಡ ಹಾಕಲು ಅವಕಾಶ ಕಲ್ಪಿಸಲಾಗಿದೆ.

ಇದಕ್ಕೆ 'ಪರಿಸರ ನಷ್ಟಭರ್ತಿ' ಎಂದು ಹೆಸರು ಕೊಟ್ಟು ಬಿಜೆಪಿ ನೇತೃತ್ವದ ಸರಕಾರ ದಿಲ್ಲಿ ಮತ್ತು ಸುತ್ತ–ಮುತ್ತ ಹೊಗೆಮಂಜು ಮತ್ತು ವಾಯು ಮಾಲಿನ್ಯಕ್ಕೆ ಒಣ ಪೈರುಗಳ ಕೂಳೆ ಸುಡುವುದೇ ಕಾರಣ ಎಂದು ಉದ್ದೇಶಪೂರ್ವಕವಾಗಿಯೇ ರೈತರ, ಅದರಲ್ಲೂ ಪಂಜಾಬ್, ಹರ್ಯಾಣ ಮತ್ತು ಉತ್ತರಪ್ರದೇಶದ ರೈತರ ವಿರುದ್ಧ ದಿಲ್ಲಿ ಮತ್ತು ಸುತ್ತಮುತ್ತಲಿನ ನಗರ ಪ್ರದೇಶಗಳಲ್ಲಿ ಕೆಟ್ಟ ಅಭಿಪ್ರಾಯ ಮತ್ತು ದ್ವೇಷ ಸೃಷ್ಟಿಸುತ್ತಿದೆ ಎಂದು ಎಐಕೆಎಸ್ ಆಪಾದಿಸಿದೆ.

ಪಂಜಾಬ್ ಮತ್ತು ಹರ್ಯಾಣದಲ್ಲಿ ಕೂಳೆ ಸುಡುವುದರಿಂದ ರಾಜಧಾನಿ ಪ್ರದೇಶದಲ್ಲಿ ವಾಯು ಮಾಲಿನ್ಯ ಉಂಟಾಗುತ್ತದೆ ಎಂಬುದಕ್ಕೆ ಯಾವುದೇ ಆಧಾರವಿಲ್ಲ, ಅದು ಅವೈಜ್ಞಾನಿಕ ದಾವೆ ಎಂದಿರುವ ಎಐಕೆಎಸ್ ಇದರ ನೇರ ಪರಿಣಾಮವಿರುವ ಈ ರಾಜ್ಯಗಳಲ್ಲಿ ಇದರ ಬಾಧೆ ರಾಷ್ಟ್ರೀಯ ರಾಜಧಾನಿ ಪ್ರದೇಶಕ್ಕಿಂತ ಕಡಿಮೆಯಿರುವುದೇ ಇದೊಂದು ಬೋಗಸ್ ದಾವೆ ಎಂದು ತೋರಿಸುತ್ತದೆ ಎಂದು ಹೇಳಿದೆ.

ದಿಲ್ಲಿಯಲ್ಲಿ ವಾಹನಗಳಿಂದ ಮಾಲಿನ್ಯ, ಕಾರ್ಖಾನೆಗಳು ಮತ್ತು ಇಟ್ಟಿಗೆಗೂಡುಗಳ ಮಾಲಿನ್ಯವನ್ನು ತಡೆಯಲು ಯಾವುದೇ ಕ್ರಮಗಳಿಲ್ಲ. ಇವೇ ರಾಷ್ಟ್ರೀಯ ರಾಜಧಾನಿ ಪ್ರದೇಶದಲ್ಲಿ ವಾಯುಮಾಲಿನ್ಯಕ್ಕೆ ಹೆಚ್ಚು ಹೊಣೆ ಎಂದು ವೈಜ್ಞಾನಿಕ ಅಧ್ಯಯನಗಳು ತೋರಿಸಿ ಕೊಟ್ಟಿವೆ. ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟ್ರಾಪಿಕಲ್ ಮಿಟೀರಿಯೋಲೊಜಿಯ ದತ್ತಾಂಶಗಳ ಪ್ರಕಾರ ಅಕ್ಟೋಬರ್ 12ರಿಂದ 21ರ ನಡುವೆ ದಿಲ್ಲಿಯ ಪಿಎಂ2.5ನ ಮಟ್ಟದಲ್ಲಿ ಕೂಳೆ ಸುಡುವುದರಿಂದ ಉಂಟಾದ ಪರಿಣಾಮ ಕೇವಲ ಶೇ.0.92 ಮಾತ್ರ.

ಅಂದರೆ, ರಾಷ್ಟ್ರೀಯ ರಾಜಧಾನಿ ಪ್ರದೇಶದಲ್ಲಿ ವಾಹನ, ಕಾರ್ಖಾನೆ ಮತ್ತು ಇಟ್ಟಿಗೆಗೂಡು ಪ್ರದೂಷಣೆಗಳೇ ವಾಯುಮಾಲಿನ್ಯಕ್ಕೆ ಪ್ರಧಾನ ಕಾರಣಗಳು ಎನ್ನುವುದು ಸ್ಪಷ್ಟ. ಆದರೆ ಇದಕ್ಕಾಗಿ ಶ್ರೀಮಂತರು ಮತ್ತು ಬಂಡವಳಿಗರ ಮೇಲೆ ಯಾವುದೇ ದಂಡ ಹಾಕುತ್ತಿಲ್ಲ, ಈ ಪ್ರದೇಶ ವಾಹನಗಳಿಂದ ತುಂಬಿ ಹೋಗಿರುವುದನ್ನು ತಡೆಯಲು ಯಾವುದೇ ಕ್ರಮಗಳನ್ನು ಕೈಗೊಳ್ಳುತ್ತಿಲ್ಲ, ಬದಲಿಗೆ ಬಡ ರೈತರ ಮೇಲೆ ಗುರಿಯಿಡಲಾಗುತ್ತಿದೆ ಎಂದು ಎಐಕೆಎಸ್ ಹೇಳಿದೆ. ಈ ಮೂಲಕ ಕಾರ್ಪೊರೇಟ್–ಪರ ಕೃಷಿ ಕಾಯ್ದೆಗಳ ವಿರುದ್ಧ ರೈತರ ಚಾರಿತ್ರಿಕ ಹೋರಾಟ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಬಿಜೆಪಿಗಾಗಿರುವ ಹಿನ್ನಡೆಗಾಗಿ ಅವರ ಮೇಲೆ ಮುಯ್ಯಿ ತೀರಿಸಿಕೊಳ್ಳಲಾಗುತ್ತಿದೆ.

ವಾಸ್ತವವಾಗಿ, ರೈತರು ಕೃಷಿ ಅರಣ್ಯೀಕರಣ ಮತ್ತು ಹಸಿರು ಹೊದಿಕೆಯ ರಕ್ಷಣೆಯ ಮೂಲಕ ದೇಶಕ್ಕೆ ಪರಿಸರ ಸೇವೆ ಸಲ್ಲಿಸುತ್ತಿದ್ದಾರೆ, ಆದರೆ ಬಿಜೆಪಿ ನೇತೃತ್ವದ ಕೇಂದ್ರ ಸರಕಾರ ಅವರನ್ನು ದಂಡಿಸುತ್ತಿದೆ ಎಂದಿರುವ ಎಐಕೆಎಸ್, ರೈತರಿಗೆ ಸಿ2+50% ಸೂತ್ರದಂತೆ ಫಲದಾಯಕ ಬೆಲೆಗಳ ಭರವಸೆ ಮತ್ತು ಕೂಳೆ ನಿರ್ವಹಣೆಗೆ ಹೆಕ್ಟೇರಿಗೆ 10,000 ರೂ.ನಂತೆ ಪರಿಸರ ಸೇವಾ ಶುಲ್ಕವನ್ನು ಕೊಟ್ಟರೆ, ಕೂಳೆ ಸುಡುವ ಈ ಇಡೀ ಸಮಸ್ಯೆಯನ್ನು ಎದುರಿಸಬಹುದು ಎಂದು ಹೇಳಿದೆ.

ನರೇಂದ್ರ ಮೋದಿ ಸರಕಾರ ಡಿಸೆಂಬರ್ 2021ರಲ್ಲಿ ಸಂಯುಕ್ತ ಕಿಸಾನ್ ಮೋರ್ಚಾದೊಡನೆ ಮಾಡಿಕೊಂಡ ಒಪ್ಪಂದದಲ್ಲಿ ಕೂಳೆ ಸುಡುವ ಹೆಸರಿನಲ್ಲಿ ರೈತರನ್ನು ಶಿಕ್ಷಿಸುವುದಿಲ್ಲ ಎಂದು ಹೇಳಿತ್ತು. ಈಗ ಈ ವಿಷಯದಲ್ಲಿ ಸರಕಾರ ವಿಶ್ವಾಸಘಾತ ಮಾಡುತ್ತಿದೆ. ಈಗ ಈ ಕರಾಳ ಅಧಿಸೂಚನೆಯನ್ನು ಹೇರಿದರೆ, ಭಾರೀ ಪ್ರತಿಭಟನೆಯನ್ನು ಎದುರಿಸಬೇಕಾಗುತ್ತದೆ ಎಂದು ಎಚ್ಚರಿಸಿರುವ ಅಖಿಲ ಭಾರತ ಕಿಸಾನ್ ಸಭಾ ಈ ಅಧಿಸೂಚನೆಯನ್ನು ತಕ್ಷಣ ರದ್ದು ಮಾಡಬೇಕು ಎಂದು ಆಗ್ರಹಿಸಿದೆ.

ನಿರುದ್ಯೋಗ ಎನ್ನುವ ತೀವ್ರ ಪ್ರಶ್ನೆಯು ಭಾರತದಂತಹ ಅಭಿವೃದ್ಧಿ ಹೊಂದುತ್ತಿರುವ ಹಾಗೂ ವೈವಿದ್ಯಮಯ ಕಾರ್ಮಿಕ ಬಲವನ್ನು ಹೊಂದಿರುವ ದೇಶಕ್ಕೊಂದು ಸವಾಲಾಗಿ ಪರಿಣಮಿಸಿದೆ. ನಿರುದ್ಯೋಗದ ಈ ಆತಂಕಕಾರಿ ಏರಿಳಿತವು ದೇಶದ ಅಭಿವೃದ್ಧಿ, ಜನಜೀವನ ಪರಿಸ್ಥಿತಿ, ಬೆಲೆ ಏರಿಕೆ, ಗ್ರಾಮೀಣ ಆರ್ಥಿಕತೆ ಮೇಲೆ ಹಾಗೂ ಯುವಜನರ ಉದ್ಯೋಗ ಪರಿಸ್ಥಿತಿಗಳ ಮೇಲೆ ಗಂಭೀರ ಪರಿಣಾಮ ಬೀರಿದೆ. ಜಗತ್ತಿನಲ್ಲಿ ಅತಿ ಹೆಚ್ಚು ಯುವ ಮಾನವ ಸಂಪನ್ಮೂಲ ಹೊಂದಿರುವ ಭಾರತ ದೇಶವು, ಯುವಪಡೆಯನ್ನು ಸಮರ್ಥವಾಗಿ ಬಳಸಿಕೊಳ್ಳುವಲ್ಲಿ ವಿಫಲತೆ ಹೊಂದಿದೆ ಎನ್ನುತ್ತವೆ ಅಧ್ಯಯನ ವರದಿಗಳು. ಹಾಗಾದರೆ ಭಾರತದ ಪ್ರಸಕ್ತ ನಿರುದ್ಯೋಗದ ಪರಿಸ್ಥಿತಿ ಹೇಗಿದೆ? ಅದರ ವಿವಿಧ ಆಯಾಮಗಳತ್ತ ಬೆಳಕು ಚೆಲ್ಲಿದೆ ಈ ವಿಶೇಷ ಲೇಖನ.



ನಿರುದ್ಯೋಗ: ಯುವ ಬದುಕಿಗೆ ಬರೆ: ದೇಶಕ್ಕೆ ಹೊರೆ

ಕೆ. ಮಹಾಂತೇಶ

ಸೆಂಟರ್ ಫಾರ್ ಮಾನಿಟರಿಂಗ್ ಇಂಡಿಯನ್ ಎಕಾನಮಿ(ಸಿಎಂಐಇ)ಯ ಸ್ವತಂತ್ರ ಚಿಂತಕರ ಚಾವಡಿಯ ಸಮೀಕ್ಷೆ ಪ್ರಕಾರ ಭಾರತದಲ್ಲಿ ನಿರುದ್ಯೋಗವು 2024 ಸೆಪ್ಟೆಂಬರ್‌ನಲ್ಲಿ ಶೇ. 7.8ರಷ್ಟು ದಾಖಲಾಗಿತ್ತು. ಅದರ ಹಿಂದಿನ ತಿಂಗಳು ಇದರ ಪ್ರಮಾಣ ಶೇ.8.2 ರಷ್ಟು ಏರಿಕೆಯಾಗಿತ್ತು ಅದಕ್ಕೂ 2024 ಜೂನ್ ಹೊತ್ತಿಗೆ ಶೇ. 9.2ರಷ್ಟು ಏರಿಕೆ ಕಂಡು ದಾಖಲೆ ಮಾಡಿತ್ತು. ಏರುತ್ತಿರುವ ಈ ನಿರುದ್ಯೋಗವು ದೇಶದಲ್ಲಿ ಎರಡು ಅಸಮಾನತೆ ಭಾರತಗಳನ್ನು ಸೃಷ್ಟಿಸಿದೆ. ಭಾರತದ ಗ್ರಾಮೀಣ ಪ್ರದೇಶಗಳಲ್ಲಿ ನಿರುದ್ಯೋಗ ಪ್ರಮಾಣ ಶೇ.8.5 ಪ್ರಮಾಣದಲ್ಲಿದ್ದರೆ ನಗರ ಪ್ರದೇಶಗಳಲ್ಲಿ ಅದು ಶೇ. 14.7ರಷ್ಟು ದಾಖಲಾಗಿದೆ. ಮಹಿಳಾ ನಿರುದ್ಯೋಗಿಗಳ ಪ್ರಮಾಣವು ಗ್ರಾಮೀಣ ಪ್ರದೇಶದಲ್ಲಿ ಶೇ. 8.2ರಷ್ಟಿದ್ದರೆ, ನಗರ ಪ್ರದೇಶಗಳಲ್ಲಿ ಶೇ. 20.1ರಷ್ಟು ದಾಖಲಾಗಿದೆ.

ಇಂಡಿಯನ್ ಎಂಪ್ಲಾಯ್‌ಮೆಂಟ್ ರಿಪೋರ್ಟ್ 2024, ಮಾನವ ಅಭಿವೃದ್ಧಿ ಸಂಸ್ಥೆ ಹಾಗೂ ಅಂತರಾಷ್ಟ್ರೀಯ ಕಾರ್ಮಿಕ ಸಂಘಟನೆ(ಐಎಲ್‌ಓ) ಬಿಡುಗಡೆ ಮಾಡಿರುವ ವರದಿ 2024 ಪ್ರಕಾರ ಭಾರತದಲ್ಲಿ ಉದ್ಯೋಗವಕಾಶಗಳು ಕ್ಷೀಣಿಸುತ್ತಾ ಸಾಗಿವೆ. ಅದರ ಪ್ರಕಾರ ಭಾರತದ ದುಡಿಯುವ ವರ್ಗದ ಪ್ರಮಾಣ 2011ರಲ್ಲಿ ಶೇ. 61ರಷ್ಟಿತ್ತು. ಅದು 2021ರಲ್ಲಿ ಶೇ. 64ಕ್ಕೆ ತಲುಪಿತ್ತು. ಮುಂದುವರೆದು 2036ರ ಹೊತ್ತಿಗೆ ಶೇ. 65ರಷ್ಟು ತಲುಪಲಿದೆ ಎಂದು ನಿರೀಕ್ಷೆ ಮಾಡಿದೆ. ಆದಾಗ್ಯೂ ಆರ್ಥಿಕ ಚಟುವಟಿಕೆಯಲ್ಲಿ ಯುವಜನರ ಭಾಗವಹಿಸುವಿಕೆ ಇಳಿಕೆಯಾಗುತ್ತಿದೆ ಎನ್ನುವುದರತ್ತ ವರದಿ ಬೊಟ್ಟು ಮಾಡಿದೆ. ಇದು ಭಾರತ ಸರ್ಕಾರವೇ ಬಿಡುಗಡೆ ಮಾಡಿರುವ ಕಾರ್ಮಿಕರ ಭಾಗವಹಿಸುವಿಕೆ ಕುರಿತಾಗಿ ಅಂಕಿಅಂಶಗಳನ್ನು ಆಧರಿಸಿಯೇ ಐಎಲ್‌ಓ ಈ ವರದಿಯನ್ನು ಸಿದ್ದಗೊಳಿಸಿದೆ ಎನ್ನುವುದು ಬಹುಮುಖ್ಯವಾಗಿ ಗಮನಿಸಬೇಕಾದ ಅಂಶ.

ಜನಸಂಖ್ಯೆ ಆಧರಿಸಿ ಉದ್ಯೋಗಗಳಿಲ್ಲ:

2019ರ ಕೋವಿಡ್ ನಂತರದಲ್ಲಿ ಉದ್ಯೋಗಗಳ ಸೃಷ್ಟಿಯಲ್ಲಿ ಸ್ವಲ್ಪ ಪ್ರಗತಿ ಕಂಡು ಬಂದರೂ 2022ರ ಬಳಿಕ ಭಾರತದ ಜನಸಂಖ್ಯಾ ಬೆಳವಣಿಗೆಯನ್ನು ಆಧರಿಸಿ ಉದ್ಯೋಗಗಳು ಸೃಷ್ಟಿಯಾಗುತ್ತಿಲ್ಲ. ಇದರಿಂದಾಗಿ ನಿರುದ್ಯೋಗ ತೀವ್ರಗತಿಯಲ್ಲಿ ಬೆಳವಣಿಗೆ ಕಂಡಿದೆ ಮಾತ್ರವಲ್ಲ, ದೊರೆತಿರುವ ಉದ್ಯೋಗಗಳು ಘನತೆ ಹಾಗೂ ನೆಮ್ಮದಿ ಬದುಕಿಗೆ ಪೂರವಾಗಿಲ್ಲ ಎಂದು ಹಲವು ಅದ್ಯಯನಗಳು ಹೇಳುತ್ತಿವೆ. ಭಾರತದಲ್ಲಿ ವಿದ್ಯಾವಂತ ಯುವಜನರ ನಡುವೆ ನಿರುದ್ಯೋಗ ಸಮಸ್ಯೆ ಅತ್ಯಧಿಕವಾಗಿ ಬೆಳೆವಣಿಗೆಯಾಗುತ್ತಿರುವುದು ಆತಂಕದ ಸಂಗತಿ.

ಆವರ್ತಕ ಕಾರ್ಮಿಕ ಬಲ ಸಮೀಕ್ಷೆ (ಪಿಎಲ್‌ಎಸ್‌ಎಫ್) ಪ್ರಕಾರ ಭಾರತದಲ್ಲಿ 2000ರಲ್ಲಿ 15–59 ವಯೋಮಾನದವರ ಸಂಖ್ಯೆ 39.63 ಕೋಟಿಯಷ್ಟಿತ್ತು. ಅದರಲ್ಲಿ ಔಪಚಾರಿಕ ಹಾಗೂ ಅನೌಪಚಾರಿಕ ಉದ್ಯೋಗದಲ್ಲಿ ತೊಡಗಿದ್ದವರ ಸಂಖ್ಯೆ 38.71 ಕೋಟಿಯಾಗಿತ್ತು. ಆಗ 92 ಲಕ್ಷದಷ್ಟು ಜನರು ಮಾತ್ರ ನಿರುದ್ಯೋಗಿಗಳಾಗಿದ್ದರು ಎಂದು ಅಂದಾಜಿಸಲಾಗಿತ್ತು. ಆದರೆ 2022ರಲ್ಲಿ ಅದೇ 15–59 ವಯಸ್ಸಿನ ಜನರ ದುಡಿಯುವ ಅರ್ಹತೆ ಹೊಂದಿದವರ ಸಂಖ್ಯೆ 56.74 ಕೋಟಿಯಾಗಿದ್ದು, ಔಪಚಾರಿಕ ಹಾಗೂ ಅನೌಪಚಾರಿಕ ಉದ್ಯೋಗಗಳಲ್ಲಿ ತೊಡಗಿದವರ ಸಂಖ್ಯೆ 54.45 ಕೋಟಿ ಎಂದು ಅಂದಾಜಿಸಲಾಗಿದೆ. ಆದರೆ ಈ ಉದ್ಯೋಗಿಗಳಲ್ಲಿ ಅನೌಪಚಾರಿಕ ಉದ್ಯೋಗಗಳಲ್ಲಿ ತೊಡಗಿಸಿಕೊಂಡಿರುವ ವೇತನವಿಲ್ಲದ ಮನೆಕೆಲಸ, ಕೃಷಿ ಚಟುವಟಿಕೆ ಮತ್ತು ಕುಟುಂಬದ ಕೆಲಸಗಳು ಸೇರಿವೆ. ಇವುಗಳು ದೇಶದ ಆರ್ಥಿಕತೆಗೆ ತನ್ನದೇ ಕೊಡುಗೆ ನೀಡುತ್ತಿದ್ದರೂ, ವ್ಯಕ್ತಿಗತವಾದ



ವೇತನರಹಿತ ಕೆಲಸಗಳಾಗಿವೆ. ಇವುಗಳನ್ನು ಉದ್ಯೋಗಗಳೆಂದು ಪರಿಗಣಿಸಿದರೂ 2022ರಲ್ಲಿ ದೇಶದಲ್ಲಿ ದುಡಿಮೆಗೆ ಅರ್ಹವಾದ 2.29 ಕೋಟಿ ಜನರು ನಿರುದ್ಯೋಗಿಗಳಾಗಿದ್ದರು ಎನ್ನುತ್ತವೆ ಅಂಕಿ ಅಂಶಗಳು.

ನವ ಉದಾರವಾದಿ ನೀತಿಗಳ ಫಲ:

ಕಳೆದೆರಡು ದಶಕಗಳ ಕಾಲ ಅನುಸರಿಸಿದ ನವ ಉದಾರವಾದಿ ಆರ್ಥಿಕ ನೀತಿಗಳು ಭಾರತದ ಈ ನಿರುದ್ಯೋಗ ಹೆಚ್ಚಳಕ್ಕೆ ಪ್ರಮುಖ ಕಾರಣವಾಗಿವೆ. ನಮ್ಮ ದೇಶದಲ್ಲಿ ಜಾಗತೀಕರಣ–ಉದಾರೀಕರಣ ಹಾಗೂ ಖಾಸಗೀಕರಣಗಳ ನೀತಿಗಳ ಜಾರಿಯೊಂದಿಗೆ ಇರುವ ಉದ್ಯೋಗವಕಾಶಗಳು ಕ್ಷೀಣಿಸತೊಡಗಿದವು. ಈ ನೀತಿಗಳು ಕೃಷಿ ಬಿಕ್ಕಟ್ಟಿಗೆ ಕಾರಣವಾಗಿ 1991ರ ಹೊತ್ತಿಗೆ ಶೇ. 85ರಷ್ಟಿದ್ದ ಕೃಷಿ 2001ರಿಂದ 2021 ಹೊತ್ತಿಗೆ ಶೇ. 57ಕ್ಕೆ ಇಳಿಕೆಯಾಗಿದೆ. ಗ್ರಾಮೀಣ ಬಿಕ್ಕಟ್ಟಿನ ಕಾರಣದಿಂದ ಪ್ರತಿ ವರ್ಷ ಶೇ. 2.8ರಷ್ಟು ಜನರು ನಗರಗಳಿಗೆ ಉದ್ಯೋಗಗಳನ್ನರಿಸಿ ವಲಸೆ ಬರುತ್ತಿದ್ದಾರೆ. ಆದರೆ 2021ರಲ್ಲಿ ಕೊವೀಡ್ ಕಾರಣದಿಂದಾಗಿ 23 ದಶಲಕ್ಷ ಜನರು ಗ್ರಾಮೀಣ ಪ್ರದೇಶಗಳಿಗೆ ಮರು ವಲಸೆಗೊಂಡಿದ್ದಾರೆ. ಹೀಗಾಗಿ ಹಳ್ಳಿಗಳಲ್ಲಿ ಉದ್ಯೋಗ ಖಾತ್ರಿಗಳಿಗೆ ಬೇಡಿಕೆ ಹೆಚ್ಚಾಗಿದೆ. ಭಾರತವು ಜಾಗತಿಕವಾಗಿ ಮೂರನೇ ಅತಿದೊಡ್ಡ ಆರ್ಥಿಕ ದೇಶವಾಗಿ ಹೊರ ಹೊಮ್ಮುತ್ತಿದೆ ಎಂದು ಹೇಳಿಕೊಳ್ಳಲಾಗುತ್ತಿದೆ. ಆದರೆ ದೇಶದಲ್ಲಿ ಸೇವಾ ವಲಯದಲ್ಲಿ ಮಾತ್ರವೇ ಸ್ವಲ್ಪ ಪ್ರಮಾಣದ ಉದ್ಯೋಗಗಳು ಕಳೆದೊಂದು ದಶಕಗಳಲ್ಲಿ ಸೃಷ್ಟಿಯಾಗಿವೆ. ಆದರೆ, ನೇರ ಹಾಗೂ ಪರೋಕ್ಷ ಉದ್ಯೋಗಗಳನ್ನು ಅಪಾರ ಸಂಖ್ಯೆಯಲ್ಲಿ ಸೃಷ್ಟಿಸುತ್ತಿದ್ದ ಉತ್ಪಾದಕ ವಲಯದಲ್ಲಿ ಉದ್ಯೋಗಗಳ ಸಂಖ್ಯೆ ಕ್ಷೀಣಿಸುತ್ತಾ ಬಂದಿವೆ ಎಂಬುದರತ್ತ ಐಎಲ್‌ಓ ಅದ್ಯಯನ ಬೊಟ್ಟು ಮಾಡಿದೆ. ವಿಶೇಷವಾಗಿ ನಗರ ಪ್ರದೇಶಗಳಲ್ಲಿ ನಿರುದ್ಯೋಗ ತೀವ್ರ ಸ್ವರೂಪದಲ್ಲಿ ಏರಿಕೆಯಾಗುತ್ತಿರುವುದನ್ನು ತಡೆಯಲು ಸರ್ಕಾರಗಳು ತೀವ್ರ ಕ್ರಮಗಳನ್ನು ಕೈಗೊಳ್ಳಬೇಕಾದ ಅಗತ್ಯವಿದೆ. ಆದರೆ ಮೂರು ದಶಕಗಳಿಂದ ಜಾರಿಯಾಗುತ್ತಿರುವ ಉದಾರವಾದಿ ನೀತಿಗಳು ಹಾಗೂ ತೀವ್ರ ಸ್ವರೂಪದ ನಿರುದ್ಯೋಗ ಮತ್ತು ಗ್ರಾಮೀಣ ಬಿಕ್ಕಟ್ಟನ್ನು ಸೃಷ್ಟಿಸಿವೆ. ಈ ಪರಿಸ್ಥಿತಿಯ ಲಾಭ ಪಡೆದು ವರ್ಷಕ್ಕೆ ಎರಡು ಕೋಟಿ ಉದ್ಯೋಗ ನೀಡುವ ಭರವಸೆ ನೀಡಿದ್ದ ಮೋದಿ ನೇತೃತ್ವದ ಬಿಜೆಪಿ ಸರ್ಕಾರ, ಕಳೆದ ಹತ್ತು ವರ್ಷಗಳಿಂದ ಅಧಿಕಾರ ನಡೆಸುತ್ತಿದ್ದರೂ ಆ ಬಗ್ಗೆ ಕ್ರಮ ಕೈಗೊಳ್ಳಲಿಲ್ಲ.

ಉದ್ಯೋಗಗಳ ಉತ್ಪತ್ತಿಯಲ್ಲ ನಾಶ:

'ಉದ್ಯೋಗ ಹುಡುಕುವವರ' ಬದಲು 'ಉದ್ಯೋಗ ಸೃಷ್ಟಿಕರ್ತರು' ಎಂದು ಯುವಕರನ್ನು ಹುರಿದುಂಬಿಸುವ ಮೂಲಕ ಮೋದಿ ಸರಕಾರ ನಮ್ಮ ಯುವಕರಿಗೆ ಉದ್ಯೋಗ ಖಾತ್ರಿಪಡಿಸುವ ಜವಾಬ್ದಾರಿಯಿಂದ ನುಣುಚಿಕೊಳ್ಳುತ್ತಿದೆ. ಇದು ಯೋಗ್ಯ ಉದ್ಯೋಗಗಳನ್ನು ಒದಗಿಸುವ ಸಾರ್ವಜನಿಕ ವಲಯವನ್ನು ನಾಶಪಡಿಸುತ್ತಿದೆ. ಮತ್ತೊಂದೆಡೆ, ತೆರಿಗೆ ರಿಯಾಯಿತಿಗಳ ರೂಪದಲ್ಲಿ ದೊಡ್ಡ ಕಾರ್ಪೊರೇಟ್‌ಗಳಿಗೆ ಎಲ್ಲಾ ರೀತಿಯ 'ಪ್ರೋತ್ಸಾಹ'ಗಳನ್ನು ವಿಸ್ತರಿಸುತ್ತಿದೆ. ಇದು ಶೋಷಣೆಯನ್ನು ಹೆಚ್ಚಿಸಲು ಮತ್ತು ಕಾರ್ಮಿಕರ ಮೂಲಭೂತ ಹಕ್ಕುಗಳ ದಮನಕ್ಕೆ ಅನುಕೂಲವಾಗುವಂತೆ ಕಾರ್ಮಿಕ ಸಂಹಿತೆಗಳನ್ನು ಜಾರಿಗೊಳಿಸಿದೆ. 'ಈಸ್ ಆಫ್ ಡೂಯಿಂಗ್ ಬಿಸಿನೆಸ್' ಅನ್ನು ಸುಧಾರಿಸುವ ನೆಪದಲ್ಲಿ ಮತ್ತು ಖಾಸಗಿ ವಲಯದಿಂದ ಹೂಡಿಕೆಯನ್ನು ಆಕರ್ಷಿಸುವ ಮತ್ತು ಉದ್ಯೋಗ ಸೃಷ್ಟಿಸುವ ನೆಪದಲ್ಲಿ ಇದನ್ನು ಮಾಡಲಾಗುತ್ತಿದೆ.

ಆದರೆ ಉದ್ಯೋಗಗಳನ್ನು ಸೃಷ್ಟಿಸುವುದು ಹೂಡಿಕೆ ಮಾಡುವಲ್ಲಿ ಖಾಸಗಿ ವಲಯದ ಉದ್ದೇಶವಲ್ಲ; ಲಾಭವನ್ನು ಹೆಚ್ಚಿಸುವುದು. ಖಾಸಗಿ ಕಂಪನಿಗಳು ತಮ್ಮ ಉತ್ಪನ್ನಗಳಿಗೆ ಮಾರುಕಟ್ಟೆ ಇದ್ದರೆ ಮಾತ್ರ ಹೂಡಿಕೆ ಮಾಡುತ್ತಾರೆ. ಕೋವಿಡ್ ಸಾಂಕ್ರಾಮಿಕ ರೋಗಕ್ಕೆ ಮುಂಚಿನ ವ್ಯವಸ್ಥಿತ ಬಿಕ್ಕಟ್ಟು ವಿಶ್ವದ ಹೆಚ್ಚಿನ ದೇಶಗಳಲ್ಲಿ ವಿಧಿಸಲಾದ ಲಾಕ್‌ಡೌನ್‌ಗಳು ಮತ್ತು ನಿರ್ಬಂಧಗಳಿಂದ ಹದಗೆಟ್ಟಿದೆ. ಭಾರತದ ಆರ್ಥಿಕತೆ, ವಿಶ್ವದ ಬಹುತೇಕ ಬಂಡವಾಳಶಾಹಿ ರಾಷ್ಟ್ರಗಳಲ್ಲಿರುವಂತೆ, ಮೋದಿ ಸರ್ಕಾರದ ದೊಡ್ಡ ಹಕ್ಕುಗಳ ಹೊರತಾಗಿಯೂ, ಸಾಂಕ್ರಾಮಿಕ ಪೂರ್ವದ ಮಟ್ಟಕ್ಕೆ ಇನ್ನೂ ಚೇತರಿಸಿಕೊಂಡಿಲ್ಲ. ಮೋದಿ ನೇತೃತ್ವದ ಬಿಜೆಪಿ ಸರಕಾರ ಎಲ್ಲ 'ಪ್ರೋತ್ಸಾಹ' ಮತ್ತು ರಿಯಾಯಿತಿಗಳನ್ನು ನೀಡಿದ್ದರೂ ಖಾಸಗಿ ಹೂಡಿಕೆ ಬರುತ್ತಿಲ್ಲ. ಹೀಗಾಗಿ ಹೆಚ್ಚಿನ ಉದ್ಯೋಗಗಳು ಸೃಷ್ಟಿಯಾಗಿಲ್ಲ. 2017–18ರಲ್ಲಿ ಭಾರತದ ನಿರುದ್ಯೋಗ ದರವು ಕಳೆದ 45 ವರ್ಷಗಳಲ್ಲಿಯೇ ಅತ್ಯಧಿಕವಾಗಿದೆ ಎಂದು ಆವರ್ತಕ ಕಾರ್ಮಿಕ ಪಡೆ ಸಮೀಕ್ಷೆ (PSFS) ಕಂಡುಹಿಡಿದಿದೆ

ಅದೇ ಸಮಯದಲ್ಲಿ, ದೊಡ್ಡ ವರ್ಗದ ಕಾರ್ಮಿಕರಿಗೆ ಉದ್ಯೋಗವನ್ನು ಒದಗಿಸುವ ಸಾವಿರಾರು ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳು (MSME) ಮೋದಿ ಆಡಳಿತದಲ್ಲಿ ಮುಚ್ಚಲ್ಪಟ್ಟಿವೆ. ಜಾಗತಿಕ ಬಿಕ್ಕಟ್ಟಿನ ಪ್ರಭಾವದ ಮೇಲೆ, ನೋಟು ಅಮಾನ್ಯೀಕರಣ ಮತ್ತು ಜಿಎಸ್‌ಟಿ ಹೇರಿಕೆಯು ಎಂಎಸ್‌ಎಂಇ ವಲಯಕ್ಕೆ ದೊಡ್ಡ ಹೊಡೆತವನ್ನು ನೀಡಿತು. ಸಾಂಕ್ರಾಮಿಕ ಮತ್ತು ಸಂಬಂಧಿತ ಲಾಕ್‌ಡೌನ್‌ಗಳು ಮತ್ತು ನಿರ್ಬಂಧಗಳು ಅವರಲ್ಲಿ ಅನೇಕರಿಗೆ ಮರಣದಂಡನೆಯನ್ನು ಧ್ವನಿಸಿದವು. ದೇಶಾದ್ಯಂತ ಲಕ್ಷಗಟ್ಟಲೆ MSMEಗಳು ಮುಚ್ಚಲ್ಪಟ್ಟವು ಮತ್ತು ಕೋಟಿಗಟ್ಟಲೆ ಕಾರ್ಮಿಕರು ತಮ್ಮ ಉದ್ಯೋಗವನ್ನು ಕಳೆದುಕೊಂಡರು. ಸಣ್ಣ ಉದ್ಯಮಗಳ ಮಾಲೀಕರು, ಹಿಂದೆ 'ಉದ್ಯೋಗ ಒದಗಿಸುತ್ತಿದ್ದವರು ಈಗ 'ಉದ್ಯೋಗ ಹುಡುಕುವವರು' ಆಗಿದ್ದಾರೆ.

ನಮ್ಮ ದೇಶದಲ್ಲಿ ನವ ಉದಾರೀಕರಣದ ಅಧಿಕೃತ ಆಗಮನದಿಂದ, ಸರ್ಕಾರಿ ಉದ್ಯೋಗಗಳನ್ನು ಕಡಿತಗೊಳಿಸುವುದು, ನೇಮಕಾತಿ ಮೇಲೆ ನಿಷೇಧ ಹೇರುವ ಮೂಲಕ, ಉದ್ಯೋಗಗಳನ್ನು ↗

ರದ್ದುಗೊಳಿಸುವುದು, ಖಾಲಿ ಹುದ್ದೆಗಳನ್ನು ಭರ್ತಿ ಮಾಡದಿರುವುದು ಸರ್ಕಾರದ ನೀತಿಯ ಭಾಗವಾಗಿದೆ. 2014ರಿಂದ ಕೇಂದ್ರ ಸರ್ಕಾರಿ ಸಂಸ್ಥೆಗಳಲ್ಲಿ ಉದ್ಯೋಗಗಳ ಸಂಖ್ಯೆ ತೀವ್ರವಾಗಿ ಕುಸಿದಿದೆ. ಕೇಂದ್ರ ಸರ್ಕಾರದ ಇಲಾಖೆಗಳಲ್ಲಿ ಸುಮಾರು 7 ಲಕ್ಷ ಹುದ್ದೆಗಳು ಖಾಲಿ ಇವೆ. ಸುರಕ್ಷತೆಗೆ ಸಂಬಂಧಿಸಿದ ಉದ್ಯೋಗಗಳು ಸೇರಿದಂತೆ ರೈಲ್ವೆಯಲ್ಲಿ ಸುಮಾರು 2.65 ಲಕ್ಷ ಉದ್ಯೋಗಗಳು ಖಾಲಿ ಇವೆ. ಕೇಂದ್ರ ಸಾರ್ವಜನಿಕ ವಲಯದ ಸಂಸ್ಥೆಗಳಲ್ಲಿ ಸುಮಾರು 1.67 ಲಕ್ಷ ಉದ್ಯೋಗಗಳು ಖಾಲಿಯಾಗಿವೆ. ಸಾರ್ವಜನಿಕ ವಲಯದಲ್ಲಿಯೂ ಸಹ ಶೋಷಣೆಯ ಪರಿಸ್ಥಿತಿಗಳಲ್ಲಿ ಶಾಶ್ವತ ಉದ್ಯೋಗಗಳನ್ನು ಅನಿಶ್ಚಿತ ಉದ್ಯೋಗಗಳಾಗಿ ಬದಲಾಯಿಸಲಾಗುತ್ತಿದೆ. ಲಕ್ಷಾಂತರ ಉದ್ಯೋಗಗಳನ್ನು ನೀಡುತ್ತಿದ್ದ ಸಾರ್ವಜನಿಕ ರಂಗ ವಿದ್ಯುತ್, ರೈಲ್ವೆ, ಬ್ಯಾಂಕಿಂಗ್, ರಕ್ಷಣೆ, ದೂರಸಂಪರ್ಕ ಮೊದಲಾದ ಕ್ಷೇತ್ರಗಳಲ್ಲಿ ಇರುವ ಬಂಡವಾಳವನ್ನು ಹಿಂಪಡೆಯುವ ಪ್ರಯತ್ನ ಆರಂಭಿಸಿದೆ. ಇದೇ ಮೊದಲ ಬಾರಿಗೆ ಸೇನೆಯಲ್ಲೂ ಅಗ್ನಿವೀರ್ ಎನ್ನುವ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಿಸುವ ಮೂಲಕ ಲಕ್ಷಾಂತರ ಯುವಜನರ ಬದುಕಿನ ಮೇಲೆ ದಾಳಿ ನಡೆಸಿದೆ. ಕಾಂಗ್ರೆಸ್ ಆಡಳಿತದಲ್ಲಿ ನಿರುದ್ಯೋಗ ಸಮಸ್ಯೆಯು ಮೋದಿ ಆಡಳಿತದಲ್ಲಿ ಉದ್ಯೋಗ ನಷ್ಟವಾಗಿ ರೂಪುಗೊಂಡಿತು.

ಭಾರತದಲ್ಲಿ ಕಳೆದ 10 ವರ್ಷಗಳ ನಿರುದ್ಯೋಗ ಏರಿಕೆಯ ಐತಿಹಾಸಿಕ ನೋಟ:

ವರ್ಷ	ನಿರುದ್ಯೋಗ ದರ(ಶೇಖಡಾವಾರು)
2024	7.8 (ಸೆಪ್ಟೆಂಬರ್ 2024)
2023	8.003
2022	7.33
2021	5.98
2020	8.00
2019	5.27
2018	5.33
2017	5.36
2016	5.42
2015	5.44
2014	5.44
	5.44

ರಾಜ್ಯ ಹಾಗೂ ಕೇಂದ್ರಾಡಳಿ ಪ್ರದೇಶಗಳ ನಿರುದ್ಯೋಗ ದರ 2022-23

ರಾಜ್ಯಗಳು	ನಿರುದ್ಯೋಗ ದರ
ಲಕ್ಷದ್ವೀಪ	11.1
ಗೋವಾ	9.7
ಅಂಡಮಾನ ನಿಕೋಬಾರ	9.7
ಕೇರಳ	7
ಹರಿಯಾಣ	6.1
ಪಂಜಾಬ್	6.1
ಲಡಖ್	6.1
ಮೇಗಾಲಯ	6
ಪಾಂಡಿಚೇರಿ	5.6
ಅರುಣಚಲ ಪ್ರದೇಶ	4.8
ಮಣಿಪುರ	4.7
ಉತ್ತರಕಾಂಡ್	4.5
ರಾಜಸ್ಥಾನ	4.4
ತೆಲಗಾಂಣ	4.4
ಜಮ್ಮು ಕಾಶ್ಮೀರ	4.4

ಪುಟ 10 ಕ್ಕೆ

ಭಾರತದಲ್ಲಿನ ಲಂಚ ಪ್ರಕರಣ ಅಮೆರಿಕಾದಲ್ಲಿ ಬಯಲಾಗಿರುವ ನಾಚಿಕೆಗೇಡಿನ ಸಂಗತಿ

ಸಿಬಿಐ ತಕ್ಷಣವೇ ಅದಾನಿ ಮೇಲೆ ಭ್ರಷ್ಟಾಚಾರದ ಕೇಸು ದಾಖಲಿಸಬೇಕು–ಪೊಲಿಟ್‌ಬ್ಯುರೊ



ಗೌತಮ್ ಅದಾನಿ ಮತ್ತು ಇತರ ಆರು ಜನರ ವಿರುದ್ಧ ಅಮೆರಿಕ ಸಂಯುಕ್ತ ಸಂಸ್ಥಾನಗಳ(ಯುಎಸ್) ನ್ಯಾಯಾಲಯದಲ್ಲಿ ಅಲ್ಲಿನ ನ್ಯಾಯಾಂಗ ಇಲಾಖೆಯು ಸಲ್ಲಿಸಿದ ಆರೋಪಪಟ್ಟಿ ಅದಾನಿ ಮತ್ತು ಅವರ ಅಣ್ಣನ ಮಗ ಸಾಗರ್ ಅದಾನಿ, ಕೇಂದ್ರ ಮತ್ತು ರಾಜ್ಯಗಳ ಮಟ್ಟದಲ್ಲಿ ಭಾರತೀಯ ಸರ್ಕಾರಿ ಅಧಿಕಾರಿಗಳಿಗೆ ಲಂಚ ನೀಡುವಲ್ಲಿ ಭಾಗಿಯಾಗಿದ್ದಾರೆ ಎಂಬ ಗಂಭೀರ ಆರೋಪಗಳನ್ನು ಒಳಗೊಂಡಿದೆ. ಭಾರತ ಸರಕಾರ ಇವುಗಳಲ್ಲಿ ಒದಗಿಸಿದ ಸಂಗತಿಗಳ ಆಧಾರದಲ್ಲಿ ತಕ್ಷಣವೇ ಪ್ರಕರಣ ದಾಖಲಿಸುವಂತೆ ಕೇಂದ್ರೀಯ ತನಿಖಾ ದಳಕ್ಕೆ (ಸಿಬಿಐ) ನಿರ್ದೇಶಿಸಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹಿಸಿದೆ. ಈ ಹಿಂದೆ ಹಿಂಡೆನ್‌ಬರ್ಗ್ ಬಯಲಿಗೆಳೆದ ಸಂಗತಿಗಳ ಸಂದರ್ಭದಲ್ಲಿ ಮಾಡಿದಂತೆ ಯಾವುದೇ ಪರದೆಯ ಹಿಂದೆ ಅಡಗಿಕೊಳ್ಳಲು ಮೋದಿ ಸರಕಾರಕ್ಕೆ ಈಗ ಸಾಧ್ಯವಿಲ್ಲ ಎಂದು ಅದು ಹೇಳಿದೆ. ಅದಾನಿ ಸಮೂಹದ ಕಂಪನಿಗಳ ಎಲ್ಲಾ ಇತರ ತಪ್ಪುನಡೆಗಳನ್ನು ಬಯಲಿಗೆ ತರಲು ಒಂದು ಸ್ವತಂತ್ರ ಏಜೆನ್ಸಿಯಿಂದ ಪೂರ್ಣ ಪ್ರಮಾಣದ ತನಿಖೆಯ ಅಗತ್ಯವಿದೆ ಎಂದೂ ಪೊಲಿಟ್‌ಬ್ಯುರೊ ಹೇಳಿದೆ.

ಅದಾನಿಗಳಿಂದ ಇಂತಹ ದೊಡ್ಡ ಪ್ರಮಾಣದಲ್ಲಿ ಸರ್ಕಾರಿ ಅಧಿಕಾರಿಗಳಿಗೆ ಲಂಚ ಮತ್ತು ಚಿತಾವಣೆಗಳು ಭಾರತದಲ್ಲಿ ಬಯಲಿಗೆ ಬಾರದೆ ಯುಎಸ್‌ನಲ್ಲಿ ಅವರ ಕ್ರಿಮಿನಲ್ ನ್ಯಾಯ ವ್ಯವಸ್ಥೆಯ ಮೂಲಕ ಬಂದಿದೆ ಎಂಬುದು ನಾಚಿಕೆಗೇಡಿನ ಸಂಗತಿ ಎಂದೂ ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಪೊಲಿಟ್‌ಬ್ಯುರೊ ನವಂಬರ್ 21, 2024ರಂದು ನೀಡಿರುವ ಹೇಳಿಕೆಯ ಪೂರ್ಣ ಪಾಠವನ್ನು ಈ ಮುಂದೆ ಕೊಡಲಾಗಿದೆ:

ಗೌತಮ್ ಅದಾನಿ ಮತ್ತು ಇತರ ಆರು ಜನರ ವಿರುದ್ಧ ಅಮೆರಿಕ ಸಂಯುಕ್ತ ಸಂಸ್ಥಾನಗಳ(ಯುಎಸ್) ನ್ಯಾಯಾಲಯದಲ್ಲಿ ಅಲ್ಲಿನ ನ್ಯಾಯಾಂಗ ಇಲಾಖೆಯು ಸಲ್ಲಿಸಿದ ಆರೋಪಪಟ್ಟಿಯು, ಅದಾನಿ ಮತ್ತು ಅವರ ಅಣ್ಣನ ಮಗ ಸಾಗರ್ ಅದಾನಿ ಕೇಂದ್ರ ಮತ್ತು ರಾಜ್ಯಗಳ ಮಟ್ಟದಲ್ಲಿ ಭಾರತೀಯ ಸರ್ಕಾರಿ ಅಧಿಕಾರಿಗಳಿಗೆ ಲಂಚ ನೀಡುವಲ್ಲಿ ಭಾಗಿಯಾಗಿದ್ದಾರೆ ಎಂಬ ಗಂಭೀರ ಆರೋಪಗಳನ್ನು ಒಳಗೊಂಡಿದೆ. ಆರೋಪಪಟ್ಟಿಯಲ್ಲಿ ರಾಜ್ಯ ವಿದ್ಯುತ್ ವಿತರಣಾ ಕಂಪನಿಗಳು ಸೌರ ವಿದ್ಯುತ್ ಪೂರೈಕೆಗಾಗಿ ವಿದ್ಯುತ್ ಮಾರಾಟದ ಒಪ್ಪಂದಗಳನ್ನು ಕಾರ್ಯಗತಗೊಳಿಸುವಂತೆ ಮಾಡಲು, ಭಾರತೀಯ ಸರ್ಕಾರಿ ಅಧಿಕಾರಿಗಳಿಗೆ ರೂ. 2,029 ಕೋಟಿಗಳನ್ನು ನೀಡಲಾಯಿತು ಅಥವಾ ಆ ಕುರಿತು ಭರವಸೆ ನೀಡಲಾಯಿತು ಎಂದು ಹೇಳಲಾಗಿದೆ. ಈ ಪ್ರಕರಣ ಯುಎಸ್ ಹೂಡಿಕೆದಾರರನ್ನು ಅದಾನಿಗಳು ದಾರಿ ತಪ್ಪಿಸಿದ್ದಾರೆ ಎಂಬ ಆರೋಪ ಅಲ್ಲಿ ಬಂದಿದೆ.

ಸಾಗರ್ ಅದಾನಿಯಿಂದ ಸಾಕ್ಷ್ಯವನ್ನು ಸಂಗ್ರಹಿಸಲಾಗಿದೆ ಎಂದು ಮುಂದುವರೆದು ದೋಷಾರೋಪಣೆಯಲ್ಲಿ ಹೇಳಲಾಗಿದೆ, ಇದು ಸರ್ಕಾರಿ ಅಧಿಕಾರಿಗಳಿಗೆ ನೀಡಿದ ಅಥವ ಭರವಸೆ ನೀಡಿದ ಲಂಚದ ನಿರ್ದಿಷ್ಟ ವಿವರಗಳನ್ನು ಒದಗಿಸುತ್ತದೆ.

"ಲಂಚದ ಟಿಪ್ಪಣಿಗಳು:

(1) ಯಾವ ರಾಜ್ಯ ಅಥವಾ ಪ್ರದೇಶಕ್ಕಾಗಿ ಸರ್ಕಾರಿ ಅಧಿಕಾರಿಗಳಿಗೆ ಲಂಚವನ್ನು ನೀಡಲಾಯಿತು.

(2) ನೀಡಲಾದ ಲಂಚದ ಒಟ್ಟು ಮೊತ್ತ.

(3) ಲಂಚಕ್ಕೆ ಬದಲಾಗಿ ರಾಜ್ಯ ಅಥವಾ ಪ್ರದೇಶವು ಖರೀದಿಸಲು ಒಪ್ಪುವ ಸೌರಶಕ್ತಿಯ ಅಂದಾಜು ಮೊತ್ತ.

ಇವುಗಳನ್ನು ಗುರುತಿಸಲಾಗಿದೆ. ಹೆಚ್ಚಿನ ನಿದರ್ಶನಗಳಲ್ಲಿ, ಈ ಲಂಚದ ಟಿಪ್ಪಣಿಗಳು ನೀಡಲಾದ ಒಟ್ಟು ಲಂಚದ ಮೊತ್ತಕ್ಕೆ ಪ್ರತಿ ಮೆಗಾವ್ಯಾಟ್ ದರ, ಲಂಚವನ್ನು ಸ್ವೀಕರಿಸಲಿದ್ದ ಸರ್ಕಾರಿ ಅಧಿಕಾರಿಗಳ ಸಂಕ್ಷಿಪ್ತ ಹುದ್ದೆನಾಮಗಳು ಮತ್ತು/ಅಥವಾ ಪ್ರತಿ ರಾಜ್ಯ ಮತ್ತು ಪ್ರದೇಶದೊಳಗಿನ ಸರ್ಕಾರಿ ಅಧಿಕಾರಿಗಳಿಗೆ ಒಟ್ಟು ಲಂಚದ ಮೊತ್ತದಲ್ಲಿನ ಹಂಚಿಕೆಯನ್ನು ಕೂಡ ಗುರುತಿಸುತ್ತವೆ.

ಅದಾನಿಗಳಿಂದ ಇಂತಹ ದೊಡ್ಡ ಪ್ರಮಾಣದಲ್ಲಿ ಸರ್ಕಾರಿ ಅಧಿಕಾರಿಗಳಿಗೆ ಲಂಚ ಮತ್ತು ಚಿತಾವಣೆಗಳು ಭಾರತದಲ್ಲಿ ಬಯಲಿಗೆ ಬಾರದೆ ಯುಎಸ್‌ನಲ್ಲಿ ಅವರ ಕ್ರಿಮಿನಲ್ ನ್ಯಾಯ ವ್ಯವಸ್ಥೆಯ ಮೂಲಕ ಬಂದಿದೆ ಎಂಬುದು ನಾಚಿಕೆಗೇಡಿನ ಸಂಗತಿ. ಗೌತಮ್ ಅದಾನಿ ಮತ್ತು ಅವರ ವ್ಯಾಪಾರ ಸಾಮ್ರಾಜ್ಯಕ್ಕೆ ಅವರ ಕಾನೂನುಬಾಹಿರ ಮತ್ತು ಕ್ರಿಮಿನಲ್ ಚಟುವಟಿಕೆಗಳನ್ನು ಕಾರ್ಯಗತಗೊಳಿಸಲು ಮೋದಿ ಸರ್ಕಾರದ ಸಂಪೂರ್ಣ ರಕ್ಷಣೆ ದೊರೆತಿದೆ. ಹಿಂಡೆನ್‌ಬರ್ಗ್ ಬಯಲಿಗೆಳೆದ ಸಂಗತಿಗಳಿಂದ ಹೊಮ್ಮಿದ ಆರೋಪಗಳ ಮೇಲೆ ಯಾವುದೇ ವಿಚಾರಣೆ ಅಥವಾ ಕಾನೂನು ಕ್ರಮದಿಂದ ಅದಾನಿಗೆ ಸ್ವತಃ ಪ್ರಧಾನಿ ಮೋದಿಯವರು ರಕ್ಷಾಕವಚ ಒದಗಿಸಿದ್ದರು.

ಮೋದಿ ಸರ್ಕಾರ ಈಗ ಯಾವುದೇ ಪರದೆಯ ಹಿಂದೆ ಅಡಗಿಕೊಳ್ಳಲು ಸಾಧ್ಯವಿಲ್ಲ. ಯುಎಸ್‌ನಲ್ಲಿ ಫಿರ್ಯಾದಿ ಪಕ್ಷ (ಪ್ರಾಸಿಕ್ಯೂಷನ್) ಒದಗಿಸಿದ ಸಂಗತಿಗಳ ಆಧಾರದ ಮೇಲೆ ತಕ್ಷಣವೇ ಪ್ರಕರಣ ದಾಖಲಿಸುವಂತೆ ಕೇಂದ್ರೀಯ ತನಿಖಾ ದಳಕ್ಕೆ (ಸಿಬಿಐ) ನಿರ್ದೇಶಿಸಬೇಕು. ಸಾರ್ವಜನಿಕ ಸೇವಕರಿಗೆ ಲಂಚ ನೀಡುವುದು ಭ್ರಷ್ಟಾಚಾರ ತಡೆ ಕಾಯಿದೆಯಡಿ ಬರುತ್ತದೆ, ಇದು ಸಿಬಿಐ ವ್ಯಾಪ್ತಿಯಡಿಯಲ್ಲಿದೆ. ಅದಾನಿ ಸಮೂಹದ ಕಂಪನಿಗಳ ಎಲ್ಲಾ ಇತರ ತಪ್ಪುನಡೆಗಳನ್ನು ಬಯಲಿಗೆ ತರಲು ಒಂದು ಸ್ವತಂತ್ರ ಏಜೆನ್ಸಿಯಿಂದ ಪೂರ್ಣ ಪ್ರಮಾಣದ ತನಿಖೆಯ ಅಗತ್ಯವಿದೆ.

ಮಣಿಪುರದಲ್ಲಿ ಗಂಭೀರ ಪರಿಸ್ಥಿತಿ–ಕೇಂದ್ರ ಸರಕಾರ ಬಲವಾಗಿ ಮಧ್ಯಪ್ರವೇಶಿಸಬೇಕು

ಮಣಿಪುರದಲ್ಲಿ ಜನಾಂಗೀಯ ನೆಲೆಯಲ್ಲಿ ಹತ್ಯೆಗಳು ಮತ್ತು ಪ್ರತಿಹತ್ಯೆಗಳಿಂದಾಗಿ ಹಿಂಸಾಚಾರ ತೀವ್ರಗೊಂಡಿದೆ. ಇದರಿಂದಾಗಿ ಒಂದು ಗಂಭೀರ ಪರಿಸ್ಥಿತಿ ನಿರ್ಮಾಣವಾಗಿದೆ. ನವೆಂಬರ್ 7 ರಿಂದ ವಿವಿಧ ಘಟನೆಗಳಲ್ಲಿ 20 ಜನರ ಹತ್ಯೆಯಾಗಿದೆ. ಇದಕ್ಕೆ ಮೊದಲು ಹಿಂದೆ ಭೀಕರ ಘಟನೆಯೊಂದರಲ್ಲಿ ಅಪಹರಣಕ್ಕೊಳಗಾದ ಐವರು ಮಹಿಳೆಯರು ಮತ್ತು ಮಕ್ಕಳ ಶವಗಳು ಪತ್ತೆಯಾಗಿರುವುದು ಕಣಿವೆಯಲ್ಲಿ ಪರಿಸ್ಥಿತಿಗೆ ಉರಿ ಹಚ್ಚಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಆತಂಕ ವ್ಯಕ್ತಪಡಿಸಿದೆ.

ಆರಂಭದಿಂದಲೂ ಪರಿಸ್ಥಿತಿ ಹದಗೆಡಲು ಮುಖ್ಯಮಂತ್ರಿ ಬಿರೇನ್ ಸಿಂಗ್ ಕಾರಣರಾಗಿದ್ದರು, ಆದರೂ ಕೇಂದ್ರ ಸರ್ಕಾರ ಮತ್ತು ಆಳುವ ಪಕ್ಷವಾಗಿ ಬಿಜೆಪಿ ಅವರನ್ನು ತೆಗೆದುಹಾಕಲು ನಿರಾಕರಿಸಿತು ಮತ್ತು ಅವರಿಗೆ ಮುಂದುವರಿಯಲು ಅವಕಾಶ ಮಾಡಿಕೊಟ್ಟಿತು. ಈಗ ರಾಜ್ಯ ಸರ್ಕಾರ ಮತ್ತು ಆಡಳಿತವನ್ನು ಯಾರೂ ಲೆಕ್ಕಿಸದ ಪರಿಸ್ಥಿತಿ ಉದ್ಭವಿಸಿದೆ.

ಇದೀಗ ಹಿಂಸಾಚಾರವನ್ನು ತಕ್ಷಣವೇ ಕೊನೆಗೊಳಿಸಲು ಕೇಂದ್ರ ಸರ್ಕಾರವು ಬಲವಾಗಿ ಮಧ್ಯಪ್ರವೇಶಿಸಬೇಕಾದ ಸಮಯ. ಅದು ಶಾಂತಿಯನ್ನು ಮರುಸ್ಥಾಪಿಸುವ ಮತ್ತು ರಾಜ್ಯದ ಎಲ್ಲಾ ಜನಾಂಗೀಯ ಸಮುದಾಯಗಳ ಹಕ್ಕುಗಳನ್ನು ರಕ್ಷಿಸುವ ಒಂದು ರಾಜಕೀಯ ಇತ್ಯರ್ಥಕ್ಕಾಗಿ ಗಂಭೀರವಾದ ಕೆಲಸವನ್ನು ಪ್ರಾರಂಭಿಸಬೇಕಾಗಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ನಿರುದ್ಯೋಗ: ಯುವ ಬದುಕಿಗೆ ಬರೆ.....

ಪುಟ 9 ರಿಂದ

ಹಿಮಾಚಲ ಪ್ರದೇಶ	4.3
ನಾಗಲ್ಯಾಂಡ್	4.3
ತಮಿಳುನಾಡು	4.3
ಆಂಧ್ರ ಪ್ರದೇಶ	4.1
ಚಂಡೀಗಡ	4
ಬಿಹಾರ	3.9
ಓರಿಸ್ಸಾ	3.9
ಅಖಿಲ ಭಾರತ	3.2
ಮಹಾರಾಷ್ಟ್ರ	3.1
ದಾದರ್ ನಗರ ಹವೇಲಿ	3.1
ಚತ್ತೀಸ್ ಗಢ್	2.4
ಕರ್ನಾಟಕ	2.4
ಉತ್ತರ ಪ್ರದೇಶ	2.4
ಮೀಜೋರಾಂ	2.2
ಸಿಕ್ಕಿಂ	2.2
ಪ.ಬಂಗಾಳ	2.2
ದೆಹಲಿ	1.9
ಅಸ್ಸಾಂ	1.7
ಗುಜರಾತ್	1.7
ಜಾರ್ಖಂಡ್	1.7
ಮಧ್ಯಪ್ರದೇಶ	1.6

ನಿರುದ್ಯೋಗಿಗಳಲ್ಲಿ ಯುವಜನರ ಪಾಲು ಅಧಿಕ

29 ವರ್ಷ ಮೇಲ್ಪಟ್ಟವರ ಪ್ರಮಾಣ

2000	2012	2019	2022
11.4	12.9	16.9	17.7

15–29 ವರ್ಷ ಒಳಗಿನವರ ಪ್ರಮಾಣ

2000	2012	2019	2022
88.6%	87.1%	83.1%	82.9%

ಅರ್ಥಿಕ ಚಟುವಟಿಕೆಯಲ್ಲಿ ಇಳಿಕೆಯಾಗುತ್ತಿರುವ ಯುವಜನರ ಪ್ರಮಾಣ

ಅರ್ಥಿಕ ಚಟುವಟಿಕೆಯಲ್ಲಿ ಭಾಗಿಯಾದ ಯುವಜನರ ಪ್ರಮಾಣ

2000	2012	2019	2022
54%	44%	38%	42%

ಅರ್ಥಿಕ ಚಟುವಟಿಕೆಯಲ್ಲಿ ಭಾಗಿಯಾದ ಯುವಕರ ಪ್ರಮಾಣ

2000	2012	2019	2022
74%	63%	59%	61%

ಅರ್ಥಿಕ ಚಟುವಟಿಕೆಯಲಿ ಭಾಗಿಯಾದ ಯುವತಿಯರ ಪ್ರಮಾಣ

2000	2012	2019	2022
39%	24%	16%	21%

ವಿದ್ಯಾವಂತರಲ್ಲೇ ನಿರುದ್ಯೋಗ ಹೆಚ್ಚಳ:

2000ರಲ್ಲಿ ಶೇ.18ರಷ್ಟು ಶಿಕ್ಷಣ ಪಡೆದ ಯುವಜನರು ನಿರುದ್ಯೋಗಿಗಳಾಗಿದ್ದರೆ, 2022ರಲ್ಲಿ ಅವರ ಪ್ರಮಾಣ ಶೇ.35ಕ್ಕೆ ಏರಿಕೆಯಾಗಿದೆ. ಉದ್ಯೋಗ ದೊರೆಯದ ಕಾರಣದಿಂದ ಶಿಕ್ಷಣ ಮುಂದುವರೆಸುವವರ ಪ್ರಮಾಣವೂ ಮತ್ತು ಶಿಕ್ಷಣ ಪಡೆದು ಕೌಶಲ್ಯತೆ ಕೊರತೆ ಕಾರಣದಿಂದಾಗಿ ವಿದ್ಯಾವಂತ ಯುವಜನರಲ್ಲಿ ನಿರುದ್ಯೋಗ ಹೆಚ್ಚಳಕ್ಕೆ ಒಂದು ಪ್ರಮುಖ ಕಾರಣ ಎನ್ನಲಾಗಿದೆ. ಕೇಂದ್ರ ರಾಜ್ಯ ಸರ್ಕಾರಗಳು ಶಿಕ್ಷಣ ಪಡೆದ ಯುವಜನರಿಗಾಗಿ ಕೌಶಲ್ಯ ತರಬೇತಿಗಾಗಿ ನೂರಾರು ಕೋಟಿ ಹಣ ಖರ್ಚು ಮಾಡುತ್ತಿದ್ದರೂ ಅದು ಯುವಜನರಿಗೆ ಕೌಶಲ್ಯತೆ ಮತ್ತು ಅ ಮೂಲಕ ಉದ್ಯೋಗಗಳನ್ನು ನೀಡಲು ಪ್ರಯೋಜನವಾಗಿಲ್ಲ ಎನ್ನುವುದು ತಿಳಿದು ಬಂದಿದೆ.

ಹೀಗಾಗಿ ನಿರುದ್ಯೋಗಿ ಪಡೆಯಲ್ಲಿ ವಿದ್ಯಾವಂತರ ಸಂಖ್ಯೆ ಅಧಿಕವಾಗಿದೆ.

ವಿದ್ಯಾವಂತ ನಿರುದ್ಯೋಗಿಗಳ ಪ್ರಮಾಣ

2000	2012	2019	2022
54.2	58.9	59.4	65.7

ನಿರುದ್ಯೋಗದ ಲೆಕ್ಕಚಾರ ಹೇಗೆ?

ಭಾರತದಲ್ಲಿ ಪ್ರಸ್ತುತ ನಿರುದ್ಯೋಗ ದರವನ್ನು ಈ ಕೆಳಕಂಡಂತೆ ಲೆಕ್ಕಚಾರ ಮಾಡಲಾಗುತ್ತೆ

ನಿರುದ್ಯೋಗ ದರ–ನಿರುದ್ಯೋಗಿಗಳ ಸಂಖ್ಯೆ/ನಾಗರಿಕ ಲೇಬರ್ ಪೋರ್ಸ

ಅಥವಾ

ನಿರುದ್ಯೋಗ ದರ–ನಿರುದ್ಯೋಗಿಗಳ ಸಂಖ್ಯೆ(ಉದ್ಯೋಗಸ್ಥರ ಸಂಖ್ಯೆ+ನಿರುದ್ಯೋಗಿಗಳ ಸಂಖ್ಯೆ)

ಈ ಅವಧಿಯಲ್ಲಿ ಅವನು/ಅವಳು ಉದ್ಯೋಗ ಹುಡುಕುತ್ತಿರಬೇಕು

ಇದು ಅವನು/ಅವಳು ತಾತ್ಕಾಲಿಕವಾಗಿ ವಜಾಗೊಂಡಿರುವ ಮತ್ತೆ ಕೆಲಸಕ್ಕೆ ಸೇರುವವರನ್ನು ಕೆಲ ವಿನಾಯ್ತಿಗಳಿಂದ ಒಳಗೊಂಡಿರುತ್ತೆ.

ನಿರುದ್ಯೋಗಿ ಎಂದು ವರ್ಗೀಕರಿಸಲು ಒಬ್ಬ ವ್ಯಕ್ತಿ ನಿರ್ದಿಷ್ಟ ಮಾನದಂಡಗಳನ್ನು ಪೂರೈಸಬೇಕು

ಅವನು/ಅವಳು 16 ವರ್ಷದವರಾಗಿರಬೇಕು ಮತ್ತು ನಾಲ್ಕು ವಾರಗಳ ಕಾಲ ಪೂರ್ಣ ಪ್ರಮಾಣದ ಕೆಲಸಕ್ಕೆ ಲಭ್ಯವಿರಬೇಕು

ಭಾರತದಂತಹ ದೇಶಗಳಲ್ಲಿನ ಅಭಿವೃದ್ಧಿಯ ದೃಷ್ಟಿಕೋನದಿಂದ ಮುಂದುವರೆದ ಆರ್ಥಿಕತೆಗಳಿಗೆ ಹೋಲಿಸಿದರೆ ನಿರುದ್ಯೋಗ ದರವೂ ಕಡಿಮೆಯೇ ಇರುತ್ತದೆ. ಯಾಕೆಂದರೆ ಜನರು ತಮ್ಮ ಶ್ರಮ ಶಕ್ತಿಯನ್ನು ಅತ್ಯಂತ ಕಡಿಮೆ ಕೂಲಿಗೆ ಮಾರಾಟ ಮಾಡಿಕೊಂಡು ಬದುಕು ಸಾಗಿಸುವ ಅನಿವಾರ್ಯತೆಯನ್ನು ಸೃಷ್ಟಿಸಲಾಗುತ್ತದೆ. ಹೀಗಾಗಿ ಜನರು ಅದು ಕಳೆಪೆ–ಗುಣಮಟ್ಟವಿಲ್ಲದ ಮತ್ತು ಕಡಿಮೆ ವೇತನದ ಸಾಮಾಜಿಕ ರಕ್ಷಣೆ ರಹಿತವಾದ ಕೆಲಸಗಳನ್ನು ಅನಿವಾರ್ಯವಾಗಿ ಮಾಡಬೇಕಾಗುತ್ತೆ. ಇದು ಆಳುವವರಿಗೆ ತಮ್ಮ ಮಾನ ಮುಚ್ಚಿಕೊಳ್ಳಲು ಜಗತ್ತಿನ ಮುಂದೆ ನಿರುದ್ಯೋಗ ಪ್ರಮಾಣ ಕಡಿಮೆ ತೋರಿಸಲು ಅಪ್ರತ್ಯಕ್ಷವಾಗಿ ಸಹಾಯಕವಾಗುತ್ತಿದೆ. ಹೀಗಾಗಿ ಇಲ್ಲಿ ಉದ್ಯೋಗದ ಸ್ವರೂಪ, ಗುಣಮಟ್ಟ ಹಾಗೂ ವೇತನ ಪ್ರಶ್ನೆಗಳು ನಗಣ್ಯವಾಗಿರುತ್ತವೆ.

ಸ್ಥಗಿತಗೊಂಡ ಉತ್ಪಾದಕತೆ:

ನಿರುದ್ಯೋಗ ದರವು ಒಂದೆಡೆ ಏರಿಕೆಯಾಗುತ್ತಿದೆ. ಜತೆಗೆ ಭಾರತದ ಉತ್ಪಾದನೆಯ ಪಾಲು ಕಳೆದ ಎರಡು ವರ್ಷಗಳಿಂದ ಸ್ಥಗಿತಗೊಂಡಿದೆ. ಅದೇ ಹೊತ್ತಿನಲ್ಲೇ ಗ್ರಾಮೀಣ ಪ್ರದೇಶದ ಕೃಷಿಯಲ್ಲಿ ಉದ್ಯೋಗಗಳು ಹೆಚ್ಚುತ್ತಿರುವುದು ಒಂದು ಆಶಾದಾಯಕ ಬೆಳವಣಿಗೆಯಾಗಿದೆ. ಇದಕ್ಕೆ ಬಹುಮುಖ್ಯ ಕಾರಣ ಕೋವಿಡ್ ಮತ್ತು ನಂತರದ ಹಿಮ್ಮುಖವಾದ ವಲಸೆ ಎಂದು ಹೇಳಲಾಗುತ್ತಿದೆ. ವಿಶೇಷವಾಗಿ ಮಹಾತ್ಮಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿಯಲ್ಲಿ ಉದ್ಯೋಗಕ್ಕಾಗಿ ಅರ್ಜಿ ಸಲ್ಲಿಸುವವರ ಸಂಖ್ಯೆ ಗಣನೀಯವಾಗಿ ಹೆಚ್ಚಾಗಿದೆ. ಆದರೆ ಅದೇ ವೇಳೆಗೆ ಆ ಯೋಜನೆಗೆ ಕೇಂದ್ರ ಸರ್ಕಾರ ನೀಡುವ ಅನುದಾನವೂ ಪ್ರತಿವರ್ಷ ಕಡಿತಗೊಳಿಸಲಾಗುತ್ತದೆ. ಇದು ಸರ್ಕಾರದ ಇನ್ನೊಂದು ಮುಖವನ್ನು ಅನಾವರಣಗೊಳಿಸಿದೆ.

ಈಗಿರುವ ಉದ್ಯೋಗಗಳಲ್ಲಿ ನಿಯಮಿತವಾಗಿ ಸಂಬಳ ಹಾಗೂ ವೇತನ ಪಡೆಯುವವರ ಪಾಲು ಶೇ. 21.7ರಷ್ಟಿದೆ ಮತ್ತು ಇದರಲ್ಲಿ ಶೇ. 58ರಷ್ಟು ಉದ್ಯೋಗಿಗಳಿಗೆ ಯಾವುದೇ ಲಿಖಿತ ಒಪ್ಪಂದ ಹಾಗೂ ನಿಯಮಗಳಿಲ್ಲ. ಮತ್ತು ಅದರಲ್ಲಿ ಶೇ. 53.5 ಜನರಿಗೆ ಯಾವುದೇ ಸಾಮಾಜಿಕ ಭದ್ರತೆಗಳಿಲ್ಲ. ಹೀಗೆ ದುಡಿಯುವವರಲ್ಲಿ ಸ್ವಯಂ ಉದ್ಯೋಗಿಗಳ ಪ್ರಮಾಣ ಅಧಿಕವಿದೆ ಮತ್ತು ಅವರು ಉದ್ಯೋಗಿಗಳು ಪಡೆಯುವ ಸರಾಸರಿ ಮಾಸಿಕ ವೇತನದ ಶೇ. 66ರಷ್ಟು ಮಾತ್ರ ಗಳಿಸುತ್ತಾರೆ. 2024 ಏಪ್ರಿಲ್‌ನಿಂದ ಜೂನ್ 2024 ರವರೆಗಿನ ಒಬ್ಬ ಸಾಮಾನ್ಯ ಕೆಲಸಗಾರನ ಮಾಸಿಕ ವೇತನ 21,103 ರೂಪಾಯಿಗಳಾಗಿದ್ದರೆ, ಸ್ವಯಂ ದುಡಿಮೆ ಮಾಡುವವರ ಆದಾಯ ಮಾಸಿಕವಾಗಿ 13,900 ರಷ್ಟಿತ್ತು. ಇವೆಲ್ಲ ಅಂಕಿ ಅಂಶಗಳು ಪ್ರಸಕ್ತ ಭಾರತದ ಉದ್ಯೋಗದ ನಿರಶನ ಸ್ಥಿತಿಗೆ ಹಿಡಿದ ಕೈಗನ್ನಡಿಯಾಗಿವೆ.

ಭಾರತದಲ್ಲಿ ನಿರುದ್ಯೋಗ ಹೆಚ್ಚಳಕ್ಕೆ ಪ್ರಮುಖ ಕೊಡುಗೆಗಳು

1. ಜಾಗತಿಕ ಹಣಕಾಸು ಬಿಕ್ಕಟ್ಟು 2008: ಅಮೆರಿಕಾದ ಬ್ಯಾಕಿಂಗ್ ಕ್ಷೇತ್ರದಲ್ಲಿ ಉಂಟಾದ ಈ ಆರ್ಥಿಕ ಹಿಂಜರಿತ ಅಥವಾ ಬಿಕ್ಕಟ್ಟು ಇಡೀ ಜಗತ್ತಿನ ಆರ್ಥಿಕತೆಯ ಮೇಲೆ ಗಂಭೀರ ಪರಿಣಾಮ ಬೀರಿತು.

2. ನೋಟು ಅಮಾನ್ಯೀಕರಣ 2016: ನರೇಂದ್ರ ಮೋದಿ ಸರ್ಕಾರ ಯಾವುದೇ ಪೂರ್ವಪರ ಯೋಚಿಸದೇ 2016 ಜೂನ್ ತಿಂಗಳಲ್ಲಿ ರಾತ್ರೋರಾತ್ರಿ ಕೈಗೊಂಡ ನೋಟು ಅಮಾನ್ಯೀಕರಣ ನಿರ್ಧಾರ ದೇಶದ ಆರ್ಥಿಕ ಕ್ಷೇತ್ರವನ್ನೇ ಅಯೋಮಯವಾಗಿಸಿತು ಮಾತ್ರವಲ್ಲ, ನೂರಾರು ಜನರ ಸಾವು ಮತ್ತು ತೀವ್ರ ಸ್ವರೂಪದ ನಿರುದ್ಯೋಗವನ್ನು ಉಂಟು ಮಾಡಿತು.

ವಿಶೇಷವಾಗಿ ಸಣ್ಣ ವ್ಯಾಪಾರಿಗಳು, ಅಸಂಘಟಿತ ಕಾರ್ಮಿಕರು, ನಿರ್ಮಾಣ, ಗಾರ್ಮೆಂಟ್, ಸಣ್ಣ ಕೈಗಾರಿಕೆ ಹಾಗೂ ನಗರ ಮತ್ತು ಗ್ರಾಮೀಣ ಆರ್ಥಿಕತೆಯ ಮೇಲೆ ಭೀಕರ ಪರಿಣಾಮ ಬೀರಿ ಲಕ್ಷಾಂತರ ಉದ್ಯೋಗಳನ್ನು ನಾಶಪಡಿಸಿತು.

3. ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) 2018: ಏಕರೂಪದ ಸರಕು ಹಾಗೂ ಸೇವಾ ತೆರಿಗೆ ಜಾರಿಯೂ ದೇಶದಲ್ಲಿ ನಿರುದ್ಯೋಗ ಹೆಚ್ಚಳಕ್ಕೆ ಪ್ರಮುಖ ಕೊಡುಗೆ ನೀಡಿದೆ. ದೇಶದ ನಗರ ಹಾಗೂ ಗ್ರಾಮೀಣ ಆರ್ಥಿಕತೆಯ ಮೇಲೆ ಆಗಲೇ ಬೆಲೆ ಏರಿಕೆ ಆರ್ಥಿಕ ಬಿಕ್ಕಟ್ಟಿನಿಂದ ತತ್ತರಿಸಿದ್ದ ದೇಶದ ಜನರ ಮೇಲೆ ಈ ಏಕರೂಪದ ತೆರಿಗೆಯನ್ನು ಏರಲಾಯಿತು.

4. ಕೋವಿಡ್–2019 ದಾಳಿ: ಜಾಗತಿಕವಾಗಿ ಮತ್ತು ಭಾರತದ ಮೇಲೆ ಅನಿರೀಕ್ಷಿತವಾಗಿ ಎದುರಾದ ಕೊವೀಡ್–19 ದಾಳಿಗಳಿಂದಾಗಿ ವಿಶೇಷವಾಗಿ ನಗರ ಪ್ರದೇಶಗಳಲ್ಲಿ ಮುಂಚೂಣಿಯಲ್ಲಿದ್ದು ಕೆಲಸ ಮಾಡುತ್ತಿದ್ದ ಯುವಜನರ ಮೇಲೆ, ಕೆಲಸದ ಮೇಲೆ ದಾಳಿ ನಡೆಸಿ ತೀವ್ರ ಸ್ವರೂಪದ ನಿರುದ್ಯೋಗ ಉಂಟು ಮಾಡಿತು. ಮಾತ್ರವಲ್ಲ ಗ್ರಾಮೀಣ ಪ್ರದೇಶಕ್ಕೆ ಮರು ವಲಸೆಗೆ ಕಾರಣವಾಯಿತು. ಈ ಭೀಕರ ಪರಿಸ್ಥಿತಿಯನ್ನು ನಿರ್ವಹಿಸಲು ವಿಫಲವಾದ ಕೇಂದ್ರ ಸರ್ಕಾರ ಕೋಟ್ಯಾಂತರ ವಲಸೆ ಹಾಗೂ ಅಸಂಘಟಿತ ಕಾರ್ಮಿಕರನ್ನು ಅಕ್ಷರಶಃ ಬೀದಿಯಲ್ಲಿ ಸಾಯುವಂತೆ ಮಾಡಿತು.

5. ಹಣದುಬ್ಬರದ ಒತ್ತಡ: ಕೇಂದ್ರ ಸರ್ಕಾರ ಕಚ್ಚಾ ತೈಲದ ಮೇಲಿನ ಬೆಲೆಗಳನ್ನು ನಿರಂತರವಾಗಿ ಏರಿಕೆ ಮಾಡುತ್ತಾ ಹಣದುಬ್ಬರಕ್ಕೆ ಕಾರಣವಾಗುತ್ತಿದೆ. ಹೀಗಾಗಿ ಜನಸಾಮಾನ್ಯರು ಬೆಲೆ ಏರಿಕೆ ಬಿಸಿಯಿಂದ ಬಳಲುವಂತಾಗಿದ್ದಾರೆ. ಅರೆ ಉದ್ಯೋಗ, ಕಡಿಮೆ ಸಂಬಳ, ದಿನಗೂಲಿ, ಗುತ್ತಿಗೆ ಪದ್ಧತಿಯಡಿಯಲ್ಲಿ ದುಡಿಯುತ್ತಿರುವ ಭಾರತದ ಕೋಟ್ಯಾಂತರ ಯುವಜನರು ಈ ಹಣದುಬ್ಬರದಿಂದಾಗಿ ತತ್ತರಿಸುವಂತಾಗಿದೆ.

ಭಾರತದಲ್ಲಿ ಬಹುಪಾಲು ಜನರಿಗೆ ಉದ್ಯೋಗ ಎಂಬುದು ಜೀವನೋಪಾಯ ನಡೆಸಲು ಇರುವ ಏಕೈಕ ದಾರಿಯಾಗಿರುವ ಕಾರಣ, ಕಡಿಮೆ ವೇತನಕ್ಕೆ ಇಲ್ಲಿ ಮಾನವ ಸಂಪನ್ಮೂಲವಾಗಿ ಇಲ್ಲಿನ ಜನರನ್ನು ಬಳಸಲಾಗುತ್ತಿದೆ. ಆರ್ಥಿಕ ಉತ್ಪಾದನೆಯಲ್ಲಿ ಬಳಕೆಯಾಗಬೇಕಾದ ಅಮೂಲ್ಯ ಮಾನವ ಸಂಪನ್ಮೂಲ ಹೀಗೆ ವ್ಯರ್ಥವಾಗಿ ಬಳಕೆಯಾಗುತ್ತಿರುವುದು ಶೋಚನೀಯ. ನಿರುದ್ಯೋಗ ಹೆಚ್ಚಳವು ದೇಶದ ಆರ್ಥಿಕತೆಯ ಮೇಲೆ ಹಾಗೂ ಉದ್ಯೋಗವಕಾಶಗಳ ಬೆಳವಣಿಗೆ ಹಾಗೂ ಆರ್ಥಿಕ ಪ್ರಗತಿ ಮೇಲೆ ಪರಿಣಾಮ ಬೀರಿ ಸಮಾಜದಲ್ಲಿ ಅಶಾಂತಿ ಸೃಷ್ಟಿಸುತ್ತಿದೆ. ಇದು ಯುವಜನರ ಬದುಕಿಗೆ ಬರೆ ಎಳೆಯುತ್ತಿದ್ದರೆ ದೇಶಕ್ಕೆ ಹೊರೆಯಾಗಿ ಪರಿಣಮಿಸಿದೆ. ಲಾಭವನ್ನೇ ಬೆಂಬತ್ತಿರುವ ನಮ್ಮ ದೇಶದ ಆಳುವ ನೀತಿ ನಿರೂಪಕರಿಗೆ ಹೆಚ್ಚೆಚ್ಚು ಉದ್ಯೋಗವಕಾಶಗಳು ದೇಶದ ಆರ್ಥಿಕ ಬೆಳವಣಿಗೆಗೆ ಕಾರಣವಾಗುತ್ತಿವೆ ಎನ್ನುವ ಅಂಶವನ್ನು ಅರ್ಥ ಮಾಡಿಕೊಳ್ಳುವಲ್ಲಿ ಏಳು ದಶಕಗಳ ಬಳಿಕವೂ ವಿಫರಾಗಿರುವುದು ದುರಂತವೇ ಆಗಿದೆ.

ಕರ್ನಾಟಕದ ಉದ್ಯೋಗ–ನಿರುದ್ಯೋಗ ಪರಿಸ್ಥಿತಿ:

ಅಖಿಲ ಭಾರತ ಮಟ್ಟದಲ್ಲಿ ಅತ್ಯಂತ ಕಡಿಮೆ ಪ್ರಮಾಣದ ನಿರುದ್ಯೋಗವನ್ನು ಅಂದರೆ ಶೇ. 2.7ರಷ್ಟು ರಾಜ್ಯದ ಪಾಲಿದೆ. ಕಳೆದ 5 ವರ್ಷಗಳಲ್ಲಿ 67.9 ಲಕ್ಷ ಉದ್ಯೋಗ ಸಂಘಟಿತ ವಲಯದಲ್ಲಿ ಸೃಷ್ಟಿಯಾಗಿದ್ದು, ಅದಾಗ್ಯೂ ಅಸಂಘಟಿತ ವಲಯದ ಉದ್ಯೋಗಗಳನ್ನು ಸಂಘಟಿತ ವಲಯದಡಿ ತರಲು ಮಾಸಿಕ ಪ್ರೋತ್ಸಾಹದಾಯಕ ಯೋಜನೆ ಜಾರಿಗೊಳಿಸಬೇಕೆಂದು' ಕರ್ನಾಟಕ ಉದ್ಯೋಗ ವರದಿ 2022–23 ಶಿಫಾರಸ್ಸು ಮಾಡಿದೆ. ಆದರೆ ಇದು ಹೇಗೆ ಪ್ರಯೋಗಿಕವಾಗಿ ಜಾರಿಯಾಗಿದೆ ಎಂಬುದನ್ನು ಅಧ್ಯಯನ ನಡೆಯಬೇಕಿದೆ.

ಆವರ್ತಕ ಕಾರ್ಮಿಕ ಬಲದ ಸಮೀಕ್ಷೆ 2022–23ರ ವಾರ್ಷಿಕ ವರದಿಯಂತೆ ರಾಜ್ಯದಲ್ಲಿ ಕಾರ್ಮಿಕ ಬಲದ ಭಾಗವಹಿಸುವಿಕೆ ದರವು ಶೇ. 62.9 ಆಗಿದೆ. ಅಂದರೆ ಉದ್ಯೋಗ ಮಾಡುವ 15–59 ವರ್ಷ ವಯೋಮಾನದ ಶೇ. 69.9ರಷ್ಟು ಜನರು ಉದ್ಯೋಗ ಮಾಡುತ್ತಾ, ಅರಸುತ್ತಾ ಸಕ್ರಿಯವಾಗಿದ್ದಾರೆ. ಇದು ಗ್ರಾಮೀಣ ಪ್ರದೇಶದಲ್ಲಿ ಶೇ. 66.2ರಷ್ಟು, ನಗರ ಪ್ರದೇಶದಲ್ಲಿ ಶೇ. 57.3ರಷ್ಟಿದೆ. ಹಾಗೆ ಮಹಿಳೆಯರ ಪ್ರಮಾಣ ನಗರದಲ್ಲಿ ಶೇ. 34.2 ಮತ್ತು ಗ್ರಾಮೀಣದಲ್ಲಿ ಶೇ. 48.6 ಮತ್ತು ಒಟ್ಟಾರೆ ಶೇ. 43.2ರಷ್ಟಿದೆ.

ರಾಜ್ಯದ 2.9 ಕೋಟಿ ಉದ್ಯೋಗಗಳಲ್ಲಿ ಶೇ. 24.7ರಷ್ಟು (73.8 ಲಕ್ಷ) ಜನರು ಸಂಘಟಿತ ವಲಯದಲ್ಲಿದ್ದಾರೆ. ಇದು ದೇಶದ ಸರಾಸರಿ ಶೇ. 20ಕ್ಕಿಂತ ಅಧಿಕವಾಗಿದೆ. ರಾಜ್ಯದಲ್ಲಿ ಪ್ರತಿ ವರ್ಷ 13.5 ಲಕ್ಷ ಜನರು ಇಪಿಎಫ್ ಹಾಗೂ ಇಎಸ್‌ಐಸಿ ಅಡಿಯಲ್ಲಿ ನೊಂದಾಯಿಸಿಕೊಳ್ಳುತ್ತಿದ್ದಾರೆ. 1.3 ಕೋಟಿ ಜನರು ಕೃಷಿ ರಂಗದಲ್ಲಿ ಉದ್ಯೋಗ ಮಾಡುತ್ತಿದ್ದಾರೆ. ಕಳೆದ 5 ವರ್ಷಗಳಲ್ಲಿ 1.2 ಕೋಟಿ ಉದ್ಯೋಗಗಳು ಸೃಷ್ಟಿಯಾಗಿವೆ. ಇದೊಂದು ಧನಾತ್ಮಕ ಬೆಳವಣಿಗೆ ಎನ್ನುತ್ತದೆ ಎಫ್‌ಕೆಸಿಸಿಐ ಹಾಗೂ ಕ್ವೆಸ್ ಸಂಸ್ಥೆ ಜಂಟಿಯಾಗಿ ಬಿಡುಗಡೆ ಮಾಡಿರುವ ವರದಿ.

ಚಿಲ್ಲರೆ ಮಾರುಕಟ್ಟೆಯ ದೈತ್ಯ ಕಂಪೆನಿಗಳಿಗೆ ನಿಯಂತ್ರಣ ಹೇರಿ: ಚಿಲ್ಲರೆ ವ್ಯಾಪಾರಿಗಳನ್ನು ರಕ್ಷಿಸಿ;

ದಕ್ಷಿಣ ಕನ್ನಡ ಸಿಪಿಐ(ಎಂ) ಜಿಲ್ಲಾ ಸಮ್ಮೇಳನ ಒತ್ತಾಯ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾರ್ಪೊರೇಟ್ ದೈತ್ಯರ ವ್ಯಾಪಾರಿ ಮಳಿಗೆಗಳ ತೆರೆಯುವಿಕೆ ಮತ್ತು ವಿಸ್ತರಣೆಗೆ ನಿಯಂತ್ರಣ ಹೇರುವ ಮೂಲಕ ಸಾವಿರಾರು ಸ್ಥಳೀಯ ಚಿಲ್ಲರೆ ವ್ಯಾಪಾರಿಗಳು, ಅವರ ಕುಟುಂಬಗಳನ್ನು ರಕ್ಷಿಸಬೇಕು ಎಂದು ದ.ಕ. ಜಿಲ್ಲಾ ಸಿಪಿಐ(ಎಂ) ಪಕ್ಷ ಆಗ್ರಹಿಸಿದೆ. ಈ ಕುರಿತು ಸ್ಥಳೀಯ ಚಿಲ್ಲರೆ ವ್ಯಾಪಾರಿಗಳು, ನಾಗರಿಕರು ಎಚ್ಚೆತ್ತುಕೊಳ್ಳಬೇಕಿದೆ, ಜಿಲ್ಲೆಯ ಜನಪ್ರತಿನಿಧಿಗಳು ನಿಯಮಗಳ ರೂಪಣೆಗೆ ಸರಕಾರದ ಮಟ್ಟದಲ್ಲಿ ಪ್ರಯತ್ನಗಳನ್ನು ನಡೆಸಬೇಕಿದೆ ಎಂದಿರುವ ಸಿಪಿಐ(ಎಂ), ಮುಂದಿನ ದಿನಗಳಲ್ಲಿ ಸ್ಥಳೀಯ ಚಿಲ್ಲರೆ ವ್ಯಾಪಾರಿಗಳು, ಸಮಾನ ಮನಸ್ಕ ಸಂಘಟನೆಗಳು ಮತ್ತು ನಾಗರಿಕರನ್ನು ಒಳಗೊಂಡು ಹೋರಾಟವನ್ನು ರೂಪಿಸುವುದಾಗಿ ಹೇಳಿದೆ. ಈ ಸಂಬಂಧ ಸಿಪಿಐ(ಎಂ) 24 ನೇ ದ.ಕ. ಜಿಲ್ಲಾ ಸಮ್ಮೇಳನ ನಿರ್ಣಯವನ್ನು ಅಂಗೀಕರಿಸಿದೆ.

ದಕ್ಷಿಣ ಕನ್ನಡ ಜಿಲ್ಲೆಯ ವಿವಿಧ ಸಣ್ಣ ಪುಟ್ಟ ಪಟ್ಟಣಗಳೂ ಒಳಗೊಂಡಂತೆ ಮಂಗಳೂರು ನಗರದಲ್ಲಿ ಚಿಲ್ಲರೆ ಮಾರುಕಟ್ಟೆಯ ದೈತ್ಯ ಕಾರ್ಪೊರೇಟ್ ಕಂಪೆನಿಗಳು ನಾಯಿಕೊಡೆಗಳಂತೆ ತಮ್ಮ ಮಳಿಗೆಗಳನ್ನು ತೆರೆಯುತ್ತಿವೆ. ಇದು ಸೀಮಿತ ವ್ಯಾಪ್ತಿ ಹೊಂದಿರುವ ದಕ್ಷಿಣ ಕನ್ನಡ ಜಿಲ್ಲೆಯ ಚಿಲ್ಲರೆ ಮಾರುಕಟ್ಟೆ ವಲಯದಲ್ಲಿ ಕೋಲಾಹಲಕ್ಕೆ ಕಾರಣವಾಗಿದೆ. ಅಮೆಝಾನ್ ನಂತಹ ಆನ್ ಲೈನ್ ವ್ಯಾಪಾರದ ದೈತ್ಯ ಕಾರ್ಪೊರೇಟ್ ಕಂಪೆನಿಗಳ ಹಾವಳಿಗೆ ಮೊದಲೆ ಸಂಕಷ್ಟಕ್ಕೆ ಸಿಲುಕಿದ್ದ ಸ್ಥಳೀಯ ಚಿಲ್ಲರೆ ವ್ಯಾಪಾರಿಗಳು,



ಅಂಗಡಿದಾರರು, ಬಟ್ಟೆ, ಚಪ್ಪಲಿ ವ್ಯಾಪಾರಿಗಳು, ಸ್ಥಳೀಯ ಸೂಪರ್ ಬಜಾರ್ ಮಾರುಕಟ್ಟೆ ಮಾಲಕರು ಈಗಂತೂ ಪೂರ್ತಿ ದಿವಾಳಿಯಾಗುವ ಭೀತಿಗೆ ಗುರಿಯಾಗಿದ್ದಾರೆ. ಬಿರ್ಲಾ ಗ್ರೂಪ್ ನ ಮೋರ್, ರಿಲಯನ್ಸ್ ನ ಟ್ರೆಂಡ್ಸ್, ಸ್ಮಾರ್ಟ್ ಬಜಾರ್, ಬಿಗ್ ಬಜಾರ್, ವಿಶಾಲ್ ಮಾರ್ಟ್, ಡಿ ಮಾರ್ಟ್ ಗಳು ಮಂಗಳೂರು ನಗರ ಹಾಗೂ ಉಪ ನಗರಗಳಲ್ಲಿ ವ್ಯಾಪಕವಾಗಿ ಮಳಿಗೆ ತೆರೆದಿವೆ.



ಡಿ ಮಾರ್ಟ್ ಮಂಗಳೂರು ನಗರದ ಒಳಗಡೆ ಅತಿ ದೊಡ್ಡದಾದ ಮಾಲ್ ಮಾದರಿಯ ಎರಡು ಮಳಿಗೆಗಳನ್ನು ತೆರದಿದೆ. ನಗರದ ಹೊರ ವಲಯದ ಸುರತ್ಕಲ್ ಹಾಗೂ ತೊಕ್ಕೊಟ್ಟು ಸಮೀಪದ ಕುಂಪಲದಲ್ಲಿ ಇನ್ನೆರಡು ಬೃಹತ್ ಮಳಿಗೆಗಳನ್ನು ತೆರೆಯಲು ಸಿದ್ಧತೆ ನಡೆಸುತ್ತಿದೆ. ಸ್ಥಳೀಯ ಚಿಲ್ಲರೆ ಮಾರುಕಟ್ಟೆ ಮೇಲೆ ಈ ಚಿಲ್ಲರೆ ವ್ಯಾಪಾರದ ಕಾರ್ಪೊರೇಟ್ ದೈತ್ಯರ ಹಾವಳಿ, ಧಾಳಿ ಹೇಗಿದೆ ಎಂಬುದಕ್ಕೆ ಮಂಗಳೂರು ನಗರದ ಪುಟ್ಟ ಉಪನಗರ ಸುರತ್ಕಲ್ ನ ಒಂದು ಉದಾಹರಣೆ ಸಾಕು. ಸುಮಾರು 60,000 ಜನಸಂಖ್ಯೆಯ ಸುರತ್ಕಲ್ ಹೋಬಳಿ ಒಂದರಲ್ಲಿಯೆ ಬಿರ್ಲಾ ಗ್ರೂಪ್ ನ ಮೋರ್ ನ ಎರಡು ಮಳಿಗೆ, ನೀಲಗಿರೀಸ್ ನ ಒಂದು ಮಳಿಗೆ, ವಿಶಾಲ್ ಮಾರ್ಟ್ ನ ವಿಶಾಲ ಮೂರು ಅಂತಸ್ತಿನ ಒಂದು ಮಳಿಗೆ ತೆರೆಯಲ್ಪಟ್ಟಿದೆ. ಇದರ ಜೊತೆಗೆ ರಿಲಯನ್ಸ್ ನ ದೈತ್ಯ ಗಾತ್ರದ ಮೂರು ಮಹಡಿಗಳ ಸ್ಮಾರ್ಟ್ ಬಜಾರ್ ಮಳಿಗೆ ತೆರೆಯಲು ಸಿದ್ದಗೊಂಡಿದೆ. ಡಿ ಮಾರ್ಟ್ ನ ಮಳಿಗೆಯ ಕಾಮಗಾರಿ ನಡೆಯುತ್ತಿದೆ. ಸುರತ್ಕಲ್ ನಂತಹ ಸಣ್ಣ ಪಟ್ಟಣದಲ್ಲಿ ಈ ರೀತಿಯ ದೈತ್ಯ ಗಾತ್ರದ ಸರಣಿ ಮಳಿಗೆಗಳು ತೆರೆಯಲ್ಪಟ್ಟರೆ ಅಲ್ಲಿನ ಚಿಲ್ಲರೆ ವ್ಯಾಪಾರಿಗಳ ಸ್ಥಿತಿ ಹೇಗಾಗಬಹುದು, ಮಾರುಕಟ್ಟೆಯ ಗತಿ ಹೇಗಿರಬಹುದು ಎಂಬುದಕ್ಕೆ ಸುರತ್ಕಲ್ ಒಂದು ಉದಾಹರಣೆಯಾಗಿದೆ.

ಚಪ್ಪಲಿ, ಒಳ ಉಡುಪು, ಮೊಟ್ಟೆ, ಮೀನು, ಮಾಂಸ, ತರಕಾರಿ, ಅಕ್ಕಿಯಿಂದ ಹಿಡಿದು ಬಚ್ಚಲು ಮನೆ ತೊಳೆಯುವ ಲಿಕ್ವಿಡ್, ಪೊರಕೆಗಳನ್ನೂ ಇವರು ಮಾರಾಟ ಮಾಡುತ್ತಾರೆ. ಈ ಕಾರ್ಪೊರೇಟ್ ಅಂಗಡಿಗಳ ಆಕರ್ಷಣೆಯ ಗಾಳಕ್ಕೆ ಎರೆಹುಳ ಸಿಕ್ಕಿಸುವ ರೀತಿಯ ರಿಯಾಯಿತಿಗಳು, ಉಡುಗೊರೆಗಳ ಮೂಲಕ ಸಾಮಾನ್ಯ ಗ್ರಾಹಕರನ್ನೂ ತನ್ನ ಮಳಿಗೆಗಳಿಗೆ ಸೂಜಿಗಲ್ಲಿನಂತೆ ಸೆಳೆದುಕೊಳ್ಳುತ್ತಿವೆ. ಇದರಿಂದಾಗಿ ತಲೆಮಾರುಗಳಿಂದ ಚಿಲ್ಲರೆ ಮಾರಾಟ ಅಂಗಡಿಗಳನ್ನು ನಡೆಸುತ್ತಾ ಬಂದವರು, ಹೊಸದಾಗಿ ದುಬಾರಿ ಬಾಡಿಗೆಯ, ಇತರೆ ಖರ್ಚುಗಳನ್ನು ಮಾಡಿ ಅಂಗಡಿ, ಮಳಿಗೆ ತೆರೆದವರು ತತ್ತರಿಸಿಹೋಗಿದ್ದಾರೆ. ಹಲವರು ಈಗಾಗಲೆ ನಷ್ಟ ಅನುಭವಿಸಿ ಮಳಿಗೆ ಮುಚ್ಚಿದ್ದಾರೆ, ಇನ್ನೂ ಹಲವರು ಮುಚ್ಚುವ ದಾರಿಯಲ್ಲಿದ್ದಾರೆ. ದಿವಾಳಿ ಸ್ಥಿತಿಗೆ ತಲುಪುತ್ತಿದ್ದಾರೆ.

ದಶಕಗಳ ಹಿಂದೆ ಚಿಲ್ಲರೆ ಮಾರುಕಟ್ಟೆಯಲ್ಲಿ ಕಾರ್ಪೊರೇಟ್ ಬಂಡವಾಳದ ಅಪಾಯದ ಕುರಿತು ಸಿಪಿಐಎಂ ಪಕ್ಷ ಎಚ್ಚರಿಸಿದ್ದ ಆತಂಕ, ವಿರೋಧ ಇಂದು ನಿಜವಾಗುತ್ತಿದೆ. ಆಕರ್ಷಕ ಕೊಡುಗೆ, ರಿಯಾಯತಿಗಳ ಮೂಲಕ ಅಗತ್ಯ ಇರಲಿ, ಇಲ್ಲದಿರಲಿ ಎಲ್ಲವನ್ನೂ ಖರೀದಿಸುವಂತೆ ಗ್ರಾಹಕರನ್ನು ಒತ್ತಡಗೊಳಪಡಿಸುತ್ತಿದೆ. ಮಾರುಕಟ್ಟೆಯನ್ನು ಪೂರ್ತಿ ತಮ್ಮ ಹಿಡಿತಕ್ಕೆ ತೆಗೆದುಕೊಂಡ ನಂತರ ದರ ನಿಗದಿಯನ್ನೂ ತನ್ನ ಮರ್ಜಿಗೆ ಅನುಗುಣವಾಗಿ ನಡೆಸಲಿದೆ. ಇದರಿಂದಾಗಿ ಮೊದಲು ಸ್ಥಳೀಯ ವ್ಯಾಪಾರಿಗಳು ಮಾರುಕಟ್ಟೆಯಿಂದ ಹೊರದಬ್ಬಲ್ಪಟ್ಟ ತರುವಾಯ, ಸ್ಥಳೀಯ ಗ್ರಾಹಕರೂ ದೊಡ್ಡ ರೀತಿಯ ನಷ್ಟ ಅನುಭವಿಸುವುದು ಖಚಿತ. ಅದರಲ್ಲಿಯೂ ಸಾವಿರಗಟ್ಟಲೆ ಸ್ಥಳೀಯ ಕುಟುಂಬಗಳು ಬದುಕು ಕಟ್ಟಿಕೊಂಡಿರುವ ಚಿಲ್ಲರೆ ಮಾರುಕಟ್ಟೆಯಲ್ಲಿ ಕಾರ್ಪೊರೇಟ್ ಕಂಪೆನಿಗಳ ಆಕ್ರಮಣಕಾರಿ ಧಾಳಿಯನ್ನು ತಡೆಗಟ್ಟಬೇಕಿದೆ ಎಂದು ಸಿಪಿಐ(ಎಂ) ಹೇಳಿದೆ.

ದಕ್ಷಿಣ ಕನ್ನಡ ಜಿಲ್ಲೆಯ 24ನೇ ಸಮ್ಮೇಳನವು ಮಂಗಳೂರು ನಗರದ ಡಾನ್ ಬಾಸ್ಕೋ ಸಭಾಂಗಣದಲ್ಲಿ 2024ರ ನವೆಂಬರ್ 17, 18, 19 ರಂದು ಅತ್ಯಂತ ಸಂಭ್ರಮದಿಂದ ನಡೆಯಿತು. ಹಿರಿಯ ನೇತಾರ ಕಾಮ್ರೇಡ್ ಕೃಷ್ಣಪ್ಪ ಸಾಲ್ಯಾನ್ ಅವರು ಧ್ವಜಾರೋಹಣ ಮೂಲಕ ಮೂರು ದಿನಗಳ ಸಮ್ಮೇಳನಕ್ಕೆ ಚಾಲನೆ ನೀಡಿದರು. ಪಕ್ಷದ ಪಾಲಿಟ್ ಬ್ಯುರೋ ಸದಸ್ಯರಾದ ಕಾಮ್ರೇಡ್ ಎಂ.ಎ.ಬೇಬಿ, ರಾಜ್ಯ ಕಾರ್ಯದರ್ಶಿ ಯು.ಬಸವರಾಜ್, ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕೆ.ಪ್ರಕಾಶ್ ಮುಂತಾದವರು ಸಮ್ಮೇಳನದಲ್ಲಿ ಭಾಗಿಯಾಗಿದ್ದರು. ಸಮ್ಮೇಳನದ ಭಾಗವಾಗಿ ಅಮ್ಮಿಕೊಂಡಿದ್ದ ವಿಚಾರ ಸಂಕಿರಣ, ಪುಸ್ತಕಗಳ ಪ್ರದರ್ಶನ ಮತ್ತು ಮಾರಾಟ, ಕೆಂಪು ಬಾವುಟಗಳನ್ನು ಹಿಡಿದ ಪಕ್ಷದ ಸದಸ್ಯರು, ಹಿತೈಷಿಗಳ ಮೆರವಣಿಗೆ ಜನರನ್ನು ಆಕರ್ಷಿಸಿತು.

ಸಿಪಿಐ(ಎಂ)ನ ದಕ್ಷಿಣ ಕನ್ನಡ ಜಿಲ್ಲೆಯ ನೂತನ ಕಾರ್ಯದರ್ಶಿಯನ್ನಾಗಿ ಮುನೀರ್ ಕಾಟಿಪಳ್ಳ ಅವರನ್ನು ಸಮ್ಮೇಳನವು ಆಯ್ಕೆಮಾಡಿತು.

ಸಿಪಿಐ(ಎಂ)ನ ದಕ್ಷಿಣ ಕನ್ನಡ ಜಿಲ್ಲೆಯ ನೂತನ ಕಾರ್ಯದರ್ಶಿಯನ್ನಾಗಿ ಮುನೀರ್ ಕಾಟಿಪಳ್ಳ ಅವರನ್ನು ಸಮ್ಮೇಳನವು ಆಯ್ಕೆಮಾಡಿತು.

ಜಿಲ್ಲಾ ಸಮಿತಿ: ಯು.ಜಯಂತ್ ನಾಯ್ಕ್, ಯೋಗಿಶ್ ಜಪ್ಪಿನಮೊಗರು, ಸಂತೋಷ್ ಬಜಾಲ್, ರಫೀಕ್ ಹರೇಕಳ, ಪ್ರಮೀಳಾ ಶಕ್ತಿನಗರ, ಬಿ.ಕೆ. ಇಮ್ತಿಯಾಝ್, ಮನೋಜ್ ವಾಮಂಜೂರು ವಸಂತಿ ಕುಪ್ಪೆಪದವು, ರಮಣಿ ಮೂಡಬಿದ್ರೆ, ಈಶ್ವರಿ ಬೆಳ್ತಂಗಡಿ.

ಖಾಯಂ ಆಹ್ವಾನಿತರು: ಶೇಖರ್ ಕುಂದರ್ ಕುತ್ತಾರ್.

ವಿಶೇಷ ಆಹ್ವಾನಿತರು: ಜೆ. ಬಾಲಕೃಷ್ಣಶೆಟ್ಟಿ

ದಹಾನು (ಎಸ್ಟಿ) ವಿಧಾನಸಭಾ ಕ್ಷೇತ್ರದಲ್ಲಿ ಸಿಪಿಐ(ಎಂ) ಐತಿಹಾಸಿಕ ಗೆಲುವು

ಪಾಲ್ಘರ್ ಜಿಲ್ಲೆಯ ದಹಾನು (ಎಸ್ಟಿ) ವಿಧಾನಸಭಾ ಕ್ಷೇತ್ರದಲ್ಲಿ ಸಿಪಿಐ(ಎಂ) ಅಭ್ಯರ್ಥಿ ವಿನೋದ್ ನಿಕೋಲ್ ಐತಿಹಾಸಿಕ ಗೆಲುವು ಸಾಧಿಸಿದ್ದಾರೆ. ಅವರು ದಾಖಲೆಯ 1,04,702 ಮತಗಳನ್ನು ಗಳಿಸಿದರು ಮತ್ತು ತೀವ್ರ ಪೈಪೋಟಿಯಲ್ಲಿ ಬಿಜೆಪಿ ಅಭ್ಯರ್ಥಿಯನ್ನು 5,347 ಮತಗಳಿಂದ ಸೋಲಿಸಿದರು.

ಈ ಕ್ಷೇತ್ರದಲ್ಲಿ ಸಿಪಿಐ(ಎಂ) 1978 ರಿಂದ ಸತತವಾಗಿ 10ನೇ ಬಾರಿಯೂ ಗೆಲುವು ಸಾಧಿಸಿದೆ. 2009 ರ ಮೊದಲು ಈ ಕ್ಷೇತ್ರವನ್ನು ಜವಾಹರ್ (ಎಸ್ಟಿ ಮೀಸಲು) ಎಂದು ಕರೆಯಲಾಗುತ್ತಿತ್ತು. ಕ್ಷೇತ್ರ ಮರುವಿಂಗಡಣೆಯ ನಂತರ ದಹಾನು ಕ್ಷೇತ್ರವಾಗಿದೆ. ಮಹಾರಾಷ್ಟ್ರ



ವಿಧಾನಸಭಾ ಫಲಿತಾಂಶಗಳಲ್ಲಿ ಬಿಜೆಪಿ-ಎನ್‌ಡಿಎ ಯ ಪ್ರಬಲ ಪ್ರದರ್ಶನವನ್ನು ಗಮನಿಸಿದರೆ ನಿಕೋಲ್ ಅವರ ಗೆಲುವು ವಿಶೇಷವಾಗಿ ಗಮನಾರ್ಹವಾಗಿದೆ.

ಆರ್‌ಎಸ್‌ಎಸ್-ಬಿಜೆಪಿಯ ಹಣಬಲ ಮತ್ತು ಕೋಮುವಾದಿ ಪಿತೂರಿಗಳ ವಿರುದ್ಧದ ಈ ಬೃಹತ್ ವಿಜಯದ ಶ್ರೇಯಸ್ಸು ದಹಾನು ಮತ್ತು ತಲಸರಿ ತಹಸಿಲ್ ಗಳ ಜನರಿಗೆ ಸಲ್ಲುತ್ತದೆ ಎಂದು ಮಹಾರಾಷ್ಟ್ರ ಸಿಪಿಐ(ಎಂ) ರಾಜ್ಯ ಘಟಕ ತಿಳಿಸಿದೆ. ಸಾವಿರಾರು ಸಮರ್ಪಿತ ಸಿಪಿಐ(ಎಂ) ಮತ್ತು ಮಹಾ ವಿಕಾಶ್ ಅಘಾಡಿಯಾ(ಎಂವಿಎ) ಕಾರ್ಯಕರ್ತರ ಅವಿರತ ಶ್ರಮವನ್ನು ಶ್ಲಾಘಿಸಿದೆ. ಕಳೆದ ಐದು ವರ್ಷಗಳಲ್ಲಿ ಶಾಸಕರಾಗಿ ನಿಕೋಲ್ ಅವರ ಅನುಕರಣೀಯ ಕೆಲಸವೂ ಅವರ ಗೆಲುವಿನ ನಿರ್ಣಾಯಕ ಅಂಶಗಳಲ್ಲಿ ಒಂದಾಗಿದೆ ಎಂದು ಅದು ತಿಳಿಸಿದೆ.

ಸಿಪಿಐ(ಎಂ) ನೇತೃತ್ವದ ನಿರಂತರ ಹೋರಾಟಗಳು ಮತ್ತು AIKS, CITU, AIDWA, DYFI ಮತ್ತು SFI ಸಂಘಟನೆಗಳ ನಿರಂತರ ಶ್ರಮದಿಂದಾಗಿ ಈ ಗೆಲುವು ಸ್ಮರಣೀಯ ಎಂದು ಸಿಪಿಐ(ಎಂ) ಪಾಲಿಟ್ ಬ್ಯೂರೋ ಸದಸ್ಯ ಅಶೋಕ್ ಧವಳೆ ತಿಳಿಸಿದ್ದಾರೆ.

ಇತ್ತೀಚಿಗೆ ನಡೆದ ಮಹಾರಾಷ್ಟ್ರ ವಿಧಾನಸಭಾ ಚುನಾವಣೆಯಲ್ಲಿ ಸಿಪಿಐ(ಎಂ) ಮೂರು ಕ್ಷೇತ್ರಗಳಲ್ಲಿ ಸ್ಪರ್ಧಿಸಿತ್ತು. ಇಂಡಿಯಾ ಬ್ಲಾಕ್ (ಎಂವಿಎ) ಭಾಗವಾಗಿ ದಹಾನು, ಕಲ್ವಾನ್ ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದರೆ, ಸೊಲ್ಲಾಪುರ ಸಿಟಿ ಸೆಂಟ್ರಲ್ ಕ್ಷೇತ್ರದಲ್ಲಿ ಏಕಾಂಗಿಯಾಗಿ ಸ್ಪರ್ಧಿಸಿ ಕಾಂಗ್ರೆಸ್ ಮತ್ತು ಬಿಜೆಪಿ ಅಭ್ಯರ್ಥಿಗಳನ್ನು ಎದುರಿಸಿತ್ತು.

ನಾಸಿಕ್ ಜಿಲ್ಲೆಯ ಕಲ್ವಾನ್ ಕ್ಷೇತ್ರದಲ್ಲಿ ಸಿಪಿಐ(ಎಂ) ಅಭ್ಯರ್ಥಿ (ಪಕ್ಷದ ಕೇಂದ್ರ ಸಮಿತಿ ಸದಸ್ಯರು ಮತ್ತು ಮಾಜಿ ಶಾಸಕರು) ಜೆಪಿ ಗವಿತ್ ಅವರು 1,10,759 ಮತಗಳನ್ನು ಪಡೆದು ಕೇವಲ 8,432 ಮತಗಳಿಂದ ಸೋತಿದ್ದಾರೆ.

ಬುಲ್ಡೋಜರನ್ನು ಸುಪ್ರಿಂ ಕೋರ್ಟ್ ಮುಟ್ಟುಗೋಲು ಹಾಕಿಕೊಂಡದ್ದರಿಂದ ಯೋಗೀಜೀ ಬಂಟೋಗೆ–ಕಟೋಗೆ ಎನ್ನುತ್ತಿದ್ದಾರೆ–ಬೃಂದಾ ಕಾರಟ್

ಉತ್ತರಪ್ರದೇಶದ ಮುಖ್ಯಮಂತ್ರಿ ಆದಿತ್ಯನಾಥ್ ಯೋಗಿಯವರ ಭಯೋತ್ಪಾದಕ ಬುಲ್ಡೋಜರನ್ನು ಸುಪ್ರೀಂ ಕೋರ್ಟ್‌ನ ಆದೇಶದ ಮೇರೆಗೆ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ, ಅದಕ್ಕಾಗಿಯೇ ಅವರು "ಬಂಟೋಗೆ ತೋ ಕಟೋಗೆ" ಎಂಬ ಹೊಸ ಘೋಷಣೆಯನ್ನು ಹುಟ್ಟುಹಾಕಿದ್ದಾರೆ ಎಂದು ಸಿಪಿಐ(ಎಂ)ನ ಹಿರಿಯ ಮುಖಂಡರಾದ ಬೃಂದಾ ಕಾರಟ್ ಹೇಳಿದ್ದಾರೆ. ಅವರು ಝಾರ್ಖಂಡಿನ ದೇವಘರ್‌ನಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಿದ್ದರು. ಆದರೆ ಝಾರ್ಖಂಡ್‌ನ ಮತದಾರರು ಇದಕ್ಕೆ ತಕ್ಕ ಉತ್ತರ ನೀಡುತ್ತಾರೆ, ಇಲ್ಲಿ ಡಬಲ್ ಎಂಜಿನ್ ಸರ್ಕಾರ ರಚನೆಗೆ ಅವಕಾಶ ನೀಡುವುದಿಲ್ಲ ಎಂದು ಅವರು ಹೇಳಿದರು.

ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಪ್ರಕಾಶ್ ವಿಪ್ಲವ್, ಝಾರ್ಖಂಡಿನ ಸಂತಾಲ್ ಪರಗಣ ವಿಭಾಗದ 18 ವಿಧಾನಸಭಾ ಸ್ಥಾನಗಳ ಪೈಕಿ ಸಿಪಿಐ(ಎಂ) ಜಾಮ್‌ತಾಡಾ, ಜಾಮಾ, ಪಾಕುಡ್ ಮತ್ತು ಮಹೇಶ್‌ಪುರ ಎಂಬ 4 ವಿಧಾನಸಭಾ ಸ್ಥಾನಗಳಲ್ಲಿ ತನ್ನ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದೆ. ಸ್ವಾತಂತ್ರ್ಯ ಬಂದು ಏಳು ದಶಕಗಳು ಕಳೆದರೂ ಇಲ್ಲಿ ಜನ ಶುದ್ಧ ಕುಡಿಯುವ ನೀರಿಗಾಗಿ ಅಲೆದಾಡುತ್ತಿದ್ದಾರೆ, ಆದರೆ ಇನ್ನೊಂದೆಡೆಯಲ್ಲಿ ಇಲ್ಲಿನ ಚುನಾಯಿತ ಜನ ಪ್ರತಿನಿಧಿಗಳ ಸೇವಕರಿಂದ ಕೋಟ್ಯಂತರ ರೂಪಾಯಿಗಳನ್ನು ವಶಪಡಿಸಿಕೊಳ್ಳಲಾಗುತ್ತಿದೆ. ಇಡೀ ಭಾಗದಲ್ಲಿ ವಿದ್ಯುತ್ ಕೊರತೆ ಹಾಗೂ ತೀವ್ರ ಕುಡಿಯುವ




ನೀರಿನ ಸಮಸ್ಯೆ ಕಾಡುತ್ತಿದೆ ಎಂದರು.

ಇಲ್ಲಿ ಭೂಮಿಯ ಪ್ರಶ್ನೆ ಪ್ರಮುಖ ಪ್ರಶ್ನೆಯಾಗಿದೆ, ಏಕೆಂದರೆ ದೇಶೀ–ವಿದೇಶಿ ಕಂಪನಿಗಳು ಮತ್ತು ಕಾರ್ಪೊರೇಟ್‌ಗಳು ಇಲ್ಲಿನ ಖನಿಜ ಸಂಪತ್ತಿನ ಮೇಲೆ ಕಣ್ಣಿಟ್ಟಿದ್ದಾರೆ. ಇತ್ತೀಚೆಗೆ ಕಲ್ಲಿದ್ದಲು ಗಣಿಗಾರಿಕೆಗಾಗಿ ಖಾಸಗಿ ಕಂಪನಿಗಳಿಗೆ ಕಲ್ಲಿದ್ದಲು ಬ್ಲಾಕ್‌ಗಳನ್ನು ಹಂಚಿಕೆ ಮಾಡಲಾಗಿದೆ. ಖಾಸಗಿ ಕಂಪನಿಗಳು ಆದಿವಾಸಿಗಳು ಮತ್ತು ಇತರ ಬಡವರ ಭೂಮಿಯನ್ನು ರಕ್ಷಿಸಲು ಉದ್ದೇಶಿಸಿರುವ ಪರಗಣ ಗೇಣೀದಾರ ಕಾಯಿದೆಯನ್ನು ಹಾಡುಹಗಲೇ ಉಲ್ಲಂಘಿಸುತ್ತ, ಸ್ಥಳೀಯ ದಲ್ಲಾಳಿಗಳ ಮೂಲಕ ರೈತರ ಭೂಮಿಯ ಲೂಟಿಯನ್ನು ಮುಂದುವರೆಸುತ್ತಿದ್ದಾರೆ ಎಂದು ಪ್ರಕಾಶ್ ವಿಪ್ಲವ್ ಹೇಳಿದ್ದಾರೆ.

ಝಾರ್ಖಂಡ್ ಲೂಟ್‌ಖಂಡ್ ಆಗಲು ಬಿಡಬೇಡಿ

ಇದರ ಹಿಂದಿನ ದಿನ ಮಹೇಶ್‌ಪುರದಲ್ಲಿ ಚುನಾವಣಾ ಸಭೆಯಲ್ಲಿ ಮಾತಾಡುತ್ತ, ಝಾರ್ಖಂಡ್ ಲೂಟ್‌ಖಂಡ್ ಆಗಲು ಬಿಡಬೇಡಿ ಎಂದು ಕರೆ ನೀಡಿದರು. ಇಂದು ಯಾವುದೇ ಬಡ ವ್ಯಕ್ತಿ ಚುನಾವಣೆಯಲ್ಲಿ ಸ್ಪರ್ಧಿಸುವ ಬಗ್ಗೆ ಯೋಚಿಸಲೂ ಸಾಧ್ಯವಿಲ್ಲ, ಏಕೆಂದರೆ ಚುನಾವಣಾ ಬಾಂಡಿನಿಂದ ಹಣ ಪಡೆದಿರುವ ಪಕ್ಷದವರು ಹಣವನ್ನು ನೀರಿನಂತೆ ಖರ್ಚು ಮಾಡಿ ವೋಟುಗಳನ್ನು ಖರೀದಿಸಲು ಪ್ರಯತ್ನಿಸುತ್ತಿದ್ದಾರೆ. ಬಿಜೆಪಿ ಬಳಿ ಚುನಾವಣಾ ಬಾಂಡಿನ 8,000 ಕೋಟಿ ರೂ. ಜಮಾ ಆಗಿದೆ. ಇದನ್ನು ಅದು ಚುನಾವಣೆಗಳ ಮೇಲೆ ಪ್ರಭಾವ ಬೀರಲು ಬಳಸುತ್ತಿದೆ ಎಂದ ಅವರು 'ಬಾಂಗ್ಲಾದೇಶೀ ನುಸುಳುಕೋರರು' ಎಂಬ ಸುಳ್ಳು ಪ್ರಚಾರದ ಬಗ್ಗೆ ಎಚ್ಚರದಿಂದಿರಿ ಎಂದು ಮತದಾರರಿಗೆ ಕರೆ ನೀಡಿದರು.

ಉದಯಪುರ ಫಿಲ್ಮ್ ಫೆಸ್ಟಿವಲ್ ನಲ್ಲಿ ಆರೆಸ್ಸೆಸ್ ಮಂದಿಯ ಧಾಂಧಲೆ: ಸಿಪಿಐ(ಎಂ) ರಾಜಸ್ತಾನ ರಾಜ್ಯ ಸಮಿತಿ ಖಂಡನೆ



ರಾಜಸ್ತಾನದ ರಾಜಧಾನಿಯಲ್ಲಿ ನಡೆಯುತ್ತಿದ್ದ 'ಉದಯ್‌ಪುರ್ ಫಿಲ್ಮ್ ಫೆಸ್ಟಿವಲ್'ನಲ್ಲಿ ನವಂಬರ್ 19ರಂದು ಆರೆಸ್ಸೆಸ್ ಸಂಬಂಧಿತ ಮಂದಿ ಧಾಂಧಲೆ ನಡೆಸಿದರು ಎಂದು ವರದಿಯಾಗಿದೆ.

ಉದಯಪುರ ಫಿಲ್ಮ್ ಸೊಸೈಟಿ ಮೂರು ದಿನಗಳ ಉತ್ಸವವನ್ನು ಆಯೋಜಿಸಿದ್ದು, ಇದರ ಭಾಗವಾಗಿ 'ಸಿನಿಮಾ ಆಫ್ ರೆಸಿಸ್ಟೆನ್ಸ್' (ಪ್ರತಿರೋಧದ ಸಿನಿಮಾ) ಎಂಬುದನ್ನು ಇಸ್ರೇಲ್ ಮಿಲಿಟರಿ ಹಿಂಸಾಚಾರದಿಂದ ನರಳುತ್ತಿರುವ ಪ್ಯಾಲೆಸ್ತೀನಿನ ಮಕ್ಕಳಿಗೆ ಹಾಗೂ ಮಾನವ ಹಕ್ಕುಗಳ ಹೋರಾಟಗಾರ ಪ್ರೊ.ಜಿ.ಎನ್. ಸಾಯಿಬಾಬಾರವರಿಗೆ ಸಮರ್ಪಿಸಲಾಗಿತ್ತು. ಇದರ ಭಾಗವಾಗಿ 'ಹದ್ ಅನಹದ್' ಸಿನಿಮಾದ ಪ್ರದರ್ಶನಕ್ಕೆ ವ್ಯವಸ್ಥೆ ಮಾಡಿತ್ತು. ಇದು ಹಿಂದಿಯ ಪ್ರಖ್ಯಾತ ಜನಪರ ಕವಿ ಕಬೀರರ ದ್ವಿಪದಿಗಳ ಮೂಲಕ ಧರ್ಮ ಮತ್ತು ರಾಜಕೀಯವನ್ನು ಅನ್ವೇಷಿಸುವ ಕೃತಿ. ಇದರ ಪ್ರದರ್ಶನವನ್ನು ತಡೆಯಲು ಆರೆಸ್ಸೆಸ್ ಸಂಬಂಧಿತ ಮಂದಿ ದಾಂಧಲೆ ಎಬ್ಬಿಸಿದರು. ಪ್ಯಾಲೆಸ್ತೀನ್ ಮತ್ತು ಸಾಯಿಬಾಬಾರವರ ವಿರುದ್ಧ ಹೊಲಸು ಘೋಷಣೆಗಳನ್ನು ಕೂಗಿದರು.

ಇದನ್ನು ಸಿಪಿಐ(ಎಂ) ರಾಜಸ್ತಾನ ರಾಜ್ಯ ಕಾರ್ಯದರ್ಶಿ ಮತ್ತು ಸಂಸತ್ ಸದಸ್ಯ ಆಮ್ರ ರಾಮ್ ಮತ್ತು ಉದಯಪುರ ಜಿಲ್ಲಾ ಕಾರ್ಯದರ್ಶಿ ಸಂಜಯ್ ಮಾಧವ್ ಬಲವಾಗಿ ಖಂಡಿಸಿದ್ದಾರೆ. ಸಂಘಟಕರು ಜಿಲ್ಲಾ ಆಡಳಿತದಿಂದ ಎಲ್ಲ ಅಗತ್ಯ ಅನುಮತಿಗಳನ್ನು ಪಡೆದಿದ್ದರೂ, ಸಂಬಂಧಪಟ್ಟ ಅಧಿಕಾರಿಗಳು ಈ ಹೊಲಸು ಧಾಂಧಲೆಕೋರರನ್ನು ತಡೆಯುವಲ್ಲಿ ವಿಫಲರಾದರು ಎನ್ನುತ್ತ, ಇದು ಅಭಿವ್ಯಕ್ತಿ ಸ್ವಾತಂತ್ರ್ಯ, ಭಾರತೀಯ ಸಂವಿಧಾನ ಮತ್ತು ಪ್ರಜಾಪ್ರಭುತ್ವ ವಿಧಿ–ವಿಧಾನಗಳ ಮೇಲೆ ಹೇಡಿತನದ ದಾಳಿ ಎಂದು ಅವರು ರಾಜ್ಯಸಮಿತಿಯ ಪರವಾಗಿ ನೀಡಿರುವ ಹೇಳಿಕೆಯಲ್ಲಿ ಖಂಡಿಸಿದ್ದಾರೆ.



ಉದಯಪುರ ಫಿಲ್ಮ್ ಸೊಸೈಟಿ ಈ ಕಾರ್ಯಕ್ರಮವನ್ನು ಪ್ಯಾಲೆಸ್ತೀನಿ ಮಕ್ಕಳಿಗೆ ಹಾಗೂ ಪ್ರೊ.ಸಾಯಿಬಾಬಾರಿಗೆ ಸಮರ್ಪಿಸಿರುವುದನ್ನು ಹಿಂದಕ್ಕೆ ಪಡೆಯಲು ನಿರಾಕರಿಸಿ ಇಂತಹ ಫ್ಯಾಸಿಸ್ಟ್ ತೆರನ ಬೆದರಿಕೆಗಳ ವಿರುದ್ಧ ಧೀರ ನಿಲುವು ತಳೆದಿದೆ ಎಂದು ಅದನ್ನು ಅಭಿನಂದಿಸುತ್ತ, ಸಿಪಿಐ(ಎಂ) ಅದಕ್ಕೆ ಬೆಂಬಲವಾಗಿ ನಿಲ್ಲುತ್ತದೆ ಎಂದು ಭರವಸೆ ನೀಡಿದರು.

ಹದ್ ಅನಹದ್‌ನಂತಹ ಪ್ರಗತಿಪರ ಸಿನಿಮಾದ ಬಗ್ಗೆ ಆರೆಸ್ಸೆಸ್‌ನ ಭಯ ಎಚ್ಚೆತ್ತ ಜನರು ಅವರ ಶೋಷಕ ವ್ಯವಸ್ಥೆಗೆ ಸವಾಲು ಹಾಕಬಹುದು ಎಂಬ ಭೀತಿಯಿಂದಾಗಿ ಹುಟ್ಟಿಕೊಂಡಿದೆ. ಜನಪರ ಕಲೆಗಳು, ಮುಖ್ಯವಾಗಿ ಸಿನಿಮಾ ಅನ್ಯಾಯದ ವಿರುದ್ಧ ಪ್ರತಿರೋಧಕ್ಕೆ ಸ್ಫೂರ್ತಿ ನೀಡಿ ಆರೆಸ್ಸೆಸ್‌ನ ಸಿದ್ಧಾಂತಕ್ಕೆ ಬೆದರಿಕೆ ಒಡ್ಡುತ್ತದೆ ಎಂಬ ಭಯ ಅವರನ್ನು ಕಾಡುತ್ತಿದೆ ಎಂದಿರುವ ಸಿಪಿಐ(ಎಂ) ರಾಜಸ್ತಾನ ರಾಜ್ಯ ಸಮಿತಿಯ ಹೇಳಿಕೆ ರಾಜಸ್ತಾನದ ಜನತೆ ಸಾಂವಿಧಾನಿಕ ಸ್ವಾತಂತ್ರ್ಯಗಳ ಮೇಲೆ ದಾಳಿಗಳನ್ನು ಖಂಡಿಸಬೇಕು, ಮತ್ತು ಸಾರ್ವಜನಿಕ ಅವಕಾಶಗಳಲ್ಲಿ ಭಿನ್ನಮತವನ್ನು ದಮನಿಸುವ ಹೇಡಿ ಕೃತ್ಯಗಳ ವಿರುದ್ಧ ಒಂದಾಗಬೇಕು ಎಂದು ಕರೆ ನೀಡಿದೆ.

ಬ್ರಿಟಿಷರು ಗೆದ್ದ ಟಿಪ್ಪು ಸುಲ್ತಾನನ ಖಡ್ಗ.... ಪುಟ 2 ರಿಂದ

ನವಾಬ ಮುರ್ಷಿದ್ ಖುಲಿ ಖಾನ್ ಎಂಬುವನ ಖಾಸಾ ಬ್ಯಾಂಕರ್ ಆದ. ಅವನ ಸಂಸ್ಥಾನದ ಪ್ರದೇಶಗಳೆಲ್ಲದರ ತೆರಿಗೆ ಕಂದಾಯ ಸಂಗ್ರಹ, ಹಣದ ವ್ಯವಹಾರಗಳಿಗೆ ಸಂಬಂಧಿಸಿ ನವಾಬನಿಗೆ ಸಲಹೆಗಾರನಾಗಿದ್ದ. ಬಿಹಾರ, ಬಂಗಾಲಗಳು ಅಂದು ಇಡೀ ಮೊಘಲ ಸಾಮ್ರಾಜ್ಯದ ಅತ್ಯಂತ ಹೆಚ್ಚು ಆದಾಯ ತರುವ ಪ್ರದೇಶಗಳಾಗಿದ್ದವು. ತಮ್ಮ ಅಧೀನದ ಗ್ರಾಮೀಣ ವ್ಯಾಪಾರಿ, ಬಡ್ಡಿ ವ್ಯವಹಾರಿಗಳ ಮೂಲಕ ತೆರಿಗೆ ಸಂಗ್ರಹಿಸುತ್ತಿದ್ದ. ಇಡೀ ಬಂಗಾಲ ಸಂಸ್ಥಾನದ ತೆರಿಗೆ, ಕಂದಾಯಗಳನ್ನು ತಮ್ಮ ಬ್ಯಾಂಕ್ ಮೂಲಕ ದೆಹಲಿಯ ಮೊಘಲ್ ಬಾದಶಾಹನಿಗೆ ತಲುಪಿಸುವಷ್ಟು ದೊಡ್ಡ ವ್ಯವಹಾರ ಉಳ್ಳವನು. ಆದ್ದರಿಂದ ಇವನಿಗೆ ಬಾದಶಾ ಕೂಡಾ ಮನ್ನಣೆ ಕೊಡುತ್ತಿದ್ದ. ಈ ಮನ್ನಣೆಯನ್ನು ಬಳಸಿ ತನ್ನ ನವಾಬನಿಗೆ ಮೊಘಲ ದರ್ಬಾರಿಗಳಿಂದ ಆಪತ್ತು ಎದುರಾದರೆ ರಕ್ಷಿಸುತ್ತಿದ್ದ. ಇವನ ಬ್ಯಾಂಕ್ ಹುಂಡಿಗಳು ಬಂಗಾಲದಿಂದ ದೆಹಲಿಯವರೆಗೆ ಮಾತ್ರವಲ್ಲ, ಅದರಾಚೆಗೆ ಅಫ್ಘಾನಿಸ್ತಾನ, ತುರ್ಕಿಸ್ತಾನ, ಕಜಾಕ್ಸ್ತಾನ ಮೊದಲಾದ ದೇಶಗಳಲ್ಲಿ ಮಾನ್ಯತೆ ಪಡೆದಿದ್ದವು. ಆದ್ದರಿಂದ ಮೊಘಲ್ ಬಾದಶಾನೇ ಇವನಿಗೆ ಜಗತ್ ಶೇಟ್ ಎಂಬ ಬಿರುದು ನೀಡಿದ. ಇದು ಒಬ್ಬ ಶೇಟ್ ಪಡೆದ ಬಿರುದು ಇರಬಹುದು. ಆದರೆ ಇಂತಹ ಪ್ರಮಾಣದಲ್ಲಿ ವ್ಯಾಪಾರ, ಬ್ಯಾಂಕಿಂಗ್ ವ್ಯವಹಾರ ಇತ್ಯಾದಿಗಳಲ್ಲಿ ತೊಡಗಿದ ಹಲವು ಮಾರವಾಡಿ ಶೇಟ್ ಗಳಿದ್ದರು.

ಬ್ರಿಟಿಷರು ದೇಶವನ್ನು ಆಕ್ರಮಣ ಮಾಡಲು ಸಹವರ್ತಿಗಳಾದರು

ಈ ಜಗತ್ ಶೇಟ್ ಕತೆ ಇಷ್ಟಕ್ಕೇ ಮುಗಿಯಲಿಲ್ಲ. ಬ್ರಿಟಿಷರು ಪ್ರವೇಶಿಸಿದಾಗ ಅವರ ಹತ್ತಿ ಸರಕುಗಳ ವ್ಯಾಪಾರಕ್ಕೆ ಸಹಾಯ ಮಾಡಿದರು. ಅದಕ್ಕೆ ಸಾಲ ನೀಡಿದರು. ಆದರೆ ಬಹು ದೊಡ್ಡ, ಬಹಳ ಜನರಿಗೆ ತಿಳಿಯದ ಸಂಗತಿ ಎಂದರೆ ಬ್ರಿಟಿಷರು ದೇಶವನ್ನು ಆಕ್ರಮಣ ಮಾಡಲು ಸಹವರ್ತಿಗಳಾಗಿದ್ದು.

ಇಲ್ಲಿಯವರೆಗೂ ಬಂಗಾಲದ ನವಾಬನ ಆಪ್ತ ಸಹವರ್ತಿಗಳಾಗಿದ್ದವನು, ಅದರ ದೊಡ್ಡ ಲಾಭ ಪಡೆದವನು, ಬ್ರಿಟಿಷರ ಆಕ್ರಮಣದ ಮೊದಲ ಅತ್ಯಂತ ಯಶಸ್ವಾದ ಪ್ಲಾಸಿ ಕದನದ ಸಮಯದಲ್ಲಿ ನವಾಬ ಸಿರಾಜ್ ಉದ್ ದೌಲನ ವಿರುದ್ಧವಾಗಿ ಬ್ರಿಟಿಷ್ ಕರ್ನಲ್ ಕುಪ್ರಸಿದ್ಧ ರಾಬರ್ಟ್ ಕ್ಲೈವನಿಗೆ ಜಗತ್ ಶೇಟ್ ಅಂದಿನ ಬೆಲೆಗಳಲ್ಲಿ 12 ಲಕ್ಷ ರೂ.ಗಳನ್ನು ನೀಡಿದ. ಅವನ ಜೊತೆಗಾರ ದೊಡ್ಡ ವ್ಯಾಪಾರಿಗಳು–ಮಾರವಾಡಿಗಳು, ಬಂಗಾಲಿಗಳು ಕೂಡಾ ಅವರವರದೇ ರೀತಿ ಪ್ರಮಾಣದಲ್ಲಿ ಬ್ರಿಟಿಷರಿಗೆ ಸಹಾಯ ನೀಡಿದರು. ಅಷ್ಟೇ ಅಲ್ಲದೆ ಸಿರಾಜ್ ಉದ್ ದೌಲ ತನ್ನ ಸಂಸ್ಥಾನವನ್ನು ಮರಳಿ ಪಡೆಯಲು ಪ್ರಯತ್ನಿಸಿದಾಗ, ಈ ವ್ಯಾಪಾರಿಗಳು ನವಾಬನಿಗೆ ತುರ್ತು ಅವಶ್ಯವಾಗಿದ್ದ ಹಣ ನೀಡಲು ನಿರಾಕರಿಸಿದರು. ಇವರುಗಳು ಬ್ರಿಟಿಷರಿಗೆ ಸಿರಾಜ್ ಉದ್ ದೌಲನ ಧಾಳಿಗಳ ಬಗ್ಗೆ ಯುದ್ಧ ತಂತ್ರಗಳ ಬಗ್ಗೆ ಮಾಹಿತಿ ಒದಗಿಸುವ ಮೂಲಕ ಅವರು ಜಯ ಗಳಿಸಲು ನಿರ್ಣಾಯಕ ಸಹಾಯ ನೀಡಿದರು.

ಅಂತಹ ಮಾರವಾಡಿಗಳಲ್ಲೊಬ್ಬ ಅಕ್ಬರನ ಆಡಳಿತದಲ್ಲಿ ವಿವಿಧ ಮುಖ್ಯ ಸ್ಥಾನಗಳನ್ನು ಪಡೆದಿದ್ದ. ಅವನ ವಂಶದ ಹಯಾಲಿ ರಾಮ್ ಎಂಬುವನಿಗೆ ಬಿಹಾರದ ಪಾಟ್ನಾದಲ್ಲಿ ಮುಖ್ಯ ಸ್ಥಾನ ಪಡೆದಿದ್ದ. ಈ ಸ್ಥಾನ ಬಲದಿಂದಲೇ ಕ್ಲೈವನ ಜೊತೆ ಸಂಬಂಧ ಬೆಳೆಸಿ ಅವರಿಗೆ ಸಹಾಯ ಮಾಡಿದ. ಈ ಸಹಾಯಕ್ಕಾಗಿ ಕ್ಲೈವ್ ಅವನಿಗೆ ರಾಜಾ ಬಹದ್ದೂರ್ ಎಂಬ ಬಿರುದು ಕೊಟ್ಟು ಜಹಗೀರು ನೀಡಿದ. ಅಷ್ಟೇ ಅಲ್ಲದೆ ಬ್ರಿಟಿಷರ ಅಗತ್ಯ ಮತ್ತು ಅವರ ವಸಾಹತುಶಾಹಿ ಆಡಳಿತ ವ್ಯವಸ್ಥೆಗೆ ತಕ್ಕಂತೆ ಬಿಹಾರದ ಕಂದಾಯ ಮತ್ತು ತೆರಿಗೆ ವ್ಯವಸ್ಥೆಯನ್ನು ಪುನರ್ ರೂಪಿಸುವ ಸ್ಥಾನ ನೀಡಿದರು. ಇವನು ಬ್ರಿಟಿಷರು ಪ್ರಸಿದ್ಧ ಔಧ್, ಗ್ವಾಲಿಯರ್ ಮೊದಲಾದ ಸಂಸ್ಥಾನಗಳ ಮೇಲೆ ಆಕ್ರಮಣ ನಡೆಸಿದಾಗ ಬ್ರಿಟಿಷರ ಪರವಾಗಿ ಆ ನವಾಬ, ರಾಜರುಗಳೊಡನೆ ಸಂಧಾನ ನಡೆಸಿದ. ಈ ಸಹಾಯಕ್ಕಾಗಿ ಮತ್ತಷ್ಟು ಜಹಗೀರುಗಳನ್ನು ಮತ್ತು ರಾಜಾ ಎಂಬ ಬಿರುದು ಮತ್ತು ಸ್ಥಾನವನ್ನು ನೀಡಲಾಯಿತು.

ಜಗತ್ ಶೇಟ್ ನ ಜೊತೆ ಮತ್ತೊಬ್ಬ ಅಗರ್ವಾಲ್ ವಂಶದ ಮಾರವಾಡಿ ವಾರಾಣಸಿಯಲ್ಲಿದ್ದವನು ಗೋಪಾಲ್ ದಾಸ್. ಈತ ಈಸ್ಟ್ ಇಂಡಿಯಾ ಕಂಪನಿಯ ಬ್ಯಾಂಕರ್ ಆಗಿದ್ದ. ಕಲಕತ್ತಾಕ್ಕೆ ತನ್ನ ವ್ಯವಹಾರವನ್ನು ವರ್ಗಾಯಿಸಿ ಬಹು ದೊಡ್ಡ ಸಂಪತ್ತು ಪಡೆದುಕೊಂಡ. ಅವನ ಮಗ ಭವಾನಿದಾಸ್, ಟಿಪ್ಪೂ ಸುಲ್ತಾನನ ಮೇಲೆ 1799ರಲ್ಲಿ ಕೊನೆಯ ಧಾಳಿ ಮಾಡಿ ಯಶಸ್ವಿಯಾದ ಯುದ್ಧಕ್ಕೆ ಎಲ್ಲ ಸರಬರಾಜು ಮಾಡಿದವನು. ಅದು ಎಷ್ಟೊಂದು ಮುಖ್ಯವೆಂದು ಬ್ರಿಟಿಷ್ ಸೇನಾಧಿಕಾರಿ ಪರಿಗಣಿಸಿದನೆಂದರೆ, ಭವಾನಿ ದಾಸನ ಸಹಾಯದ ಸ್ಮರಣಾರ್ಥವಾಗಿ ಟಿಪ್ಪುವಿನ ಅಮೂಲ್ಯ ಖಡ್ಗವನ್ನೇ ಕೊಡುಗೆಯಾಗಿ ನೀಡಿದ.

ಹೀಗೆ ಈ ವ್ಯಾಪಾರಿ ಗಣ ಮೊಘಲರ ಮತ್ತು ನವಾಬರ ಸೇವೆಯಲ್ಲಿ ತಮ್ಮ ಸಂಪತ್ತನ್ನು ಹಲವು ಪಟ್ಟು ವೃದ್ಧಿಸಿಕೊಂಡಿದ್ದವರು ತಮ್ಮ ಹಣದ ಸಂಪತ್ತು, ರಾಜಕೀಯ ಸ್ಥಾನ, ತಂತ್ರಗಾರಿಕೆ, ಬುದ್ಧಿವಂತಿಕೆಯನ್ನು ಬ್ರಿಟಿಷರಿಗೆ ಒತ್ತೆಯಿಟ್ಟು ಅವರು ಭಾರತವನ್ನು ಆಕ್ರಮಿಸಿಕೊಳ್ಳಲು ಸಹಾಯ ಮಾಡಿದರು. ಬಂಡವಾಳಕ್ಕೆ, ಬಂಡವಾಳಿಗರಿಗೆ ಲಾಭ, ದುರ್ಲಾಭಗಳನ್ನು ಬಿಟ್ಟರೆ ಬೇರೇನೂ ಲೆಕ್ಕಕ್ಕಿಲ್ಲ ಎಂಬುದಕ್ಕೆ ಮಾರವಾಡಿ, ಪಾರ್ಸಿ ವರ್ತಕರ ಈ ವರ್ತನೆ ಐತಿಹಾಸಿಕ ಸಾಕ್ಷಿಯಾಗಿದೆ.

ಮುಂದೆ ಸಿಪಾಯಿ ದಂಗೆ ಎಂದು ಕರೆಯಲಾದ ಭಾರತದ ಮೊದಲ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಇವರ ಪಾತ್ರ ಮತ್ತೊಂದು ಸಾಕ್ಷಿಯಾಗಿದೆ.

ಮುಂದಿನ ವಾರಕ್ಕೆ

ಸಮಕಾಲೀನ ಉದಾರವಾದವು, ನವ ಉದಾರವಾದಿ ಆರ್ಥಿಕ ವ್ಯವಸ್ಥೆಗೆ ಬದ್ಧವಾಗಿರುವುದರಿಂದಾಗಿ, ಜನರ ಸಂಕಷ್ಟಗಳನ್ನು ನಿವಾರಿಸಲು ಅದು ಏನನ್ನೂ ಮಾಡದು ಮತ್ತು ನಿಜಕ್ಕೂ ಅದು ಏನನ್ನೂ ಮಾಡಲಾರದು. ಹಾಗಾಗಿ, ಜನರು ನವ–ಉದಾರವಾದವನ್ನು ತೊರೆದು ಬಲ ಪಂಥದತ್ತ ಅಥವಾ ಎಡ ಪಕ್ಷಗಳತ್ತ ಅಥವಾ ಬೇರೊಂದು ರೀತಿಯ ರಾಜಕೀಯ ಪಕ್ಷದತ್ತ ಹೊರಳುತ್ತಿದ್ದಾರೆ. ಫ್ರಾನ್ಸಿನಲ್ಲಿ, ಶ್ರೀಲಂಕಾದಲ್ಲಿ ಎಡಶಕ್ತಿಗಳ ಮತ್ತು ಈಗ ಯುಎಸ್‌ನಲ್ಲಿ ಟ್ರಂಪ್ ವಿಜಯ ಇದನ್ನೇ ತೋರಿಸಿದೆ. ಅದರಲ್ಲಿ ಆಶ್ಚರ್ಯವೇನಿಲ್ಲ. ಆದರೆ ಬಲಪಂಥೀಯರೂ ಕೂಡ ಜನರ ಸಂಕಷ್ಟವನ್ನು ನಿವಾರಿಸಲು, ಯುದ್ಧಗಳನ್ನು ನಿಲ್ಲಿಸಲು ಏನನ್ನೂ ಮಾಡಲಾರರು. ಚುನಾವಣೆಗಳ ಮೊದಲು ತಮ್ಮ ವಾಕ್ಚಾತುರ್ಯದ ಮೂಲಕ ತಮ್ಮ ನೀತಿಗಳು ನವ ಉದಾರವಾದಿ ನೀತಿಗಿಂತ ಭಿನ್ನ ಎಂದು ತೋರಿಸಿಕೊಳ್ಳುತ್ತಾರೆ; ಆದರೆ, ಚುನಾವಣೆಗಳ ನಂತರ ಅದೇ ನವ ಉದಾರವಾದಿ ನೀತಿಗಳನ್ನು ಅವರು ಸದ್ದಿಲ್ಲದೇ ಅಳವಡಿಸಿಕೊಳ್ಳುತ್ತಾರೆ. ಎಡ ಪಂಥ ಮಾತ್ರವೇ ನವ–ಉದಾರವಾದವನ್ನು ಕೊನೆಗೊಳಿಸುವ ಮೂಲಕ ಪ್ರಸಕ್ತ ಬಿಕ್ಕಟ್ಟನ್ನು ಮತ್ತು ಯುದ್ಧಗಳನ್ನು ಕೊನೆಗೊಳಿಸಬಲ್ಲದು. ಅದು ಮೇಲುಗೈ ಪಡೆಯಲು ಅಂತರರಾಷ್ಟ್ರೀಯ ಸನ್ನಿವೇಶವು ಅನುಕೂಲಕರವಾಗಿದೆ.

ಪ್ರೊ.ಪ್ರಭಾತ್ ಪಟ್ನಾಯಕ್ ಅನು:ಕೆ.ಎಂ.ನಾಗರಾಜ್

ಟ್ರಂಪ್ ವಿಜಯ ಮತ್ತು ಉದಾರ ನಡುಪಂಥದ ಕುಸಿತ



ಅಮೆರಿಕದ ಅಧ್ಯಕ್ಷೀಯ ಚುನಾವಣೆಯಲ್ಲಿ ಟ್ರಂಪ್ ಗಳಿಸಿದ ವಿಜಯವು ವಿಶ್ವಾದ್ಯಂತ ಈಗ ಗಮನಿಸಬಹುದಾದ ಒಂದು ನಮೂನೆಗೆ ಅನುಗುಣವಾಗಿದೆ. ಈ ನಮೂನೆಯೆಂದರೆ, ನಡುಪಂಥೀಯ ಉದಾರವಾದವು ಒಂದು ರಾಜಕೀಯ ಸಿದ್ಧಾಂತವಾಗಿ ಕುಸಿಯುತ್ತಿದೆ ಮತ್ತು ಜನ–ಬೆಂಬಲವು ಎಡಪಂಥೀಯರಿಗೆ ಅಥವಾ ಎಡ ಪಕ್ಷಗಳು ಇಲ್ಲದಿರುವ ಅಥವಾ ದುರ್ಬಲವಾಗಿರುವ ಪರಿಸ್ಥಿತಿಗಳಲ್ಲಿ ತೀವ್ರ ಬಲಪಂಥೀಯ ನವ–ಫ್ಯಾಸಿಸ್ಟರಿಗೆ ಹೆಚ್ಚುತ್ತಿದೆ ಎಂಬುದು. ಇದು ಒಂದು ವಿದ್ಯಮಾನವಾಗಿ ಫ್ರಾನ್ಸ್‌ನಲ್ಲಿ ಗೋಚರಿಸಿತು. ಅಲ್ಲಿ ಮ್ಯಕರೊನ್‌ರ ನಡು–ಉದಾರವಾದಿ ಪಕ್ಷವು ಒಂದು ಬಹು ದೊಡ್ಡ ಸೋಲನ್ನು ಅನುಭವಿಸಿತು ಮತ್ತು ನವ–ಫ್ಯಾಸಿಸಂ ಒಂದು ಬಲಶಾಲಿ ರಾಜಕೀಯ ಶಕ್ತಿಯಾಗಿ ನಿಜಕ್ಕೂ ಹೊರಹೊಮ್ಮುವ ಸಾಧ್ಯತೆಯನ್ನು ಅವಸರದಲ್ಲಿ ರಚನೆಯಾದ ಎಡ ಶಕ್ತಿಗಳ ಒಂದು ಮೈತ್ರಿ ಕೂಟವು ತಪ್ಪಿಸಿತು. ಇದೇ ರೀತಿಯ ವಿದ್ಯಮಾನವು ನಮ್ಮದೇ ನೆರೆಯ ದೇಶ ಶ್ರೀಲಂಕಾದಲ್ಲಿಯೂ ಸಹ ಬಹಳ ಸ್ಪಷ್ಟವಾಗಿಯೇ ಗೋಚರಿಸಿದೆ. ಶ್ರೀಲಂಕಾದ ನಡು–ಉದಾರವಾದಿ ಪಕ್ಷದ ಮತ್ತು ಅಧಿಕಾರದಲ್ಲಿದ್ದ ಅಧ್ಯಕ್ಷರನ್ನು ಚುನಾವಣೆಯಲ್ಲಿ ಅಲ್ಲಿನ ಪ್ರಮುಖ ಎಡ ಪಕ್ಷದ ಅಭ್ಯರ್ಥಿಯು ಯಾವ ಮುನ್ಸೂಚನೆಯೂ ಇಲ್ಲದೆ ಮತ್ತು ಗಣನೀಯ ಪ್ರಮಾಣದ ಮತಗಳ ಅಂತರದಿಂದ ಸೋಲಿಸಿದರು. ನಡು–ಉದಾರವಾದದ ಈ ಸರ್ವತ್ರ ಕುಸಿತವು ಉದಾರವಾದದ ಬಿಕ್ಕಟ್ಟಿನ ಸೂಚಕವಾಗಿದೆ ಮತ್ತು ಇದು ಇಂದಿನ ಕಾಲದ ಅತ್ಯಂತ ಗಮನಾರ್ಹವಾದ ಒಂದು ವಿದ್ಯಮಾನವಾಗಿದೆ. ರಾಜಕೀಯ ಉದಾರವಾದವು ಇಂದು ಆರ್ಥಿಕ ನವ–ಉದಾರವಾದದೊಂದಿಗೆ ಗಂಟುಹಾಕಿಕೊಂಡಿದೆ. ಹಾಗಾಗಿ, ಅದರ ಇಂದಿನ ಬಿಕ್ಕಟ್ಟಿನ ಬೇರುಗಳು ಸ್ವತಃ ಬಿಕ್ಕಟ್ಟಿನಲ್ಲಿ ಸಿಲುಕಿಕೊಂಡಿರುವ ಆರ್ಥಿಕ ನವ–ಉದಾರವಾದದಲ್ಲಿ ನೆಲೆಸಿವೆ.

ಉದಾರವಾದಿ ರಾಜಕೀಯ ಕ್ರಿಯೆಗೆ ಒಂದು ಆಧಾರವನ್ನು ಒದಗಿಸಿದ ಶಾಸ್ತ್ರೀಯ ಉದಾರವಾದದ ರಾಜಕೀಯ ತತ್ವಶಾಸ್ತ್ರವನ್ನು ಬೂರ್ಜ್ವಾ ಆರ್ಥಿಕ ಚಿಂತನೆಯು ಪೋಷಿಸಿಕೊಂಡು ಬಂದಿರುವ ಒಂದು ಸುದೀರ್ಘ ಪರಂಪರೆಯೇ ಇದೆ. ಇದು ಶಾಸ್ತ್ರೀಯ ರಾಜಕೀಯ ಅರ್ಥಶಾಸ್ತ್ರ ಮತ್ತು ನವ–ಶಾಸ್ತ್ರೀಯ ಅರ್ಥಶಾಸ್ತ್ರ ಇವೆರಡನ್ನೂ ಆವರಿಸಿದೆ. ಈ ಎರಡೂ ಚಿಂತನಾ ಎಳೆಗಳು, ಅವುಗಳ ನಡುವಿನ ಗಮನಾರ್ಹ ವ್ಯತ್ಯಾಸಗಳ ಹೊರತಾಗಿಯೂ ಹೊಂದಿದ್ದ ಒಂದು ನಂಬಿಕೆ ಎಂದರೆ, ಮುಕ್ತ ಮಾರುಕಟ್ಟೆಯು ಸದ್ಗುಣ ಸಂಪನ್ನವಾಗಿದೆ, ಅದರ ಮೇಲೆ ಪ್ರಭುತ್ವದ ಹಸ್ತಕ್ಷೇಪದ ಸಂಕೋಲೆಯನ್ನು ಆದ್ಯತೆಯ ಮೇಲೆ ತೆಗೆದುಹಾಕಬೇಕು ಎಂಬುದು.

ಅರ್ಥಹೀನ ತರ್ಕಸರಣಿ

ಈ ಇಡೀ ತರ್ಕಸರಣಿಯು ಅರ್ಥಹೀನವಾಗಿದೆ ಎಂಬುದನ್ನು ಮೊದಲನೆಯ ಮಹಾ ಯುದ್ಧವು (ಅದರ ಆರ್ಥಿಕ ಬೇರುಗಳು ಮಾರುಕಟ್ಟೆಯ ಸದ್ಗುಣಗಳಿಗೆ ಸಂಬಂಧಿಸಿದ ಎಲ್ಲ ದಾವೆಗಳನ್ನು ಹುಸಿಗೊಳಿಸಿದವು) ಬಯಲುಮಾಡಿತು ಮತ್ತು ಆರ್ಥಿಕ ಮಹಾಕುಸಿತವು ಅದನ್ನು ಇನ್ನೂ ಹೆಚ್ಚು ಸ್ಪಷ್ಟವಾಗಿ ಬಯಲುಮಾಡಿತು. ಸರ್ಕಾರದ ತಟಸ್ಥ ಧೋರಣೆಯ (laissez faire) ಬಂಡವಾಳಶಾಹಿಯು, ಅದರ "ಸಡಗರದ ಸಣ್ಣ ಅವಧಿಯನ್ನು" ಬಿಟ್ಟರೆ, ಉಳಿದಂತೆ ಎಲ್ಲ ಸಮಯಗಳಲ್ಲಿ ಬಹು ಸಂಖ್ಯೆಯಲ್ಲಿ ಕಾರ್ಮಿಕರನ್ನು ವ್ಯವಸ್ಥಿತವಾಗಿ ನಿರುದ್ಯೋಗಿಗಳಾಗಿ ಇರಿಸಿದೆ ಎಂಬುದನ್ನು ಮತ್ತು ಮುಕ್ತ ಮಾರುಕಟ್ಟೆಯು ಅದನ್ನು ಚಿತ್ರಿಸಿದ ರೀತಿಯ ಒಂದು ಆದರ್ಶ ಸಂಸ್ಥೆಯಾಗಿರದೆ, ಎಷ್ಟೊಂದು ದೋಷಪೂರಿತವಾಗಿದೆಯೆಂದರೆ, ಅದು ಸಮಾಜವಾದಿ ಅಲೆಗಳ ಉಬ್ಬರವು ಬಂಡವಾಳಶಾಹಿಯನ್ನು ಕಿತ್ತೆಸೆಯುವ ಅಪಾಯಕ್ಕೆ ತೆರೆದಿಟ್ಟಿತು ಎಂಬುದನ್ನು ಕೀನ್ಸ್ ತೋರಿಸಿಕೊಟ್ಟರು. ಬಂಡವಾಳಶಾಹಿ ವ್ಯವಸ್ಥೆಯನ್ನು ಸರಿಪಡಿಸದಿದ್ದರೆ ಸಮಾಜವಾದವು ಅದನ್ನು ಸೋಲಿಸುವ ಬೆದರಿಕೆಯಿಂದ ಭಯಭೀತರಾಗಿದ್ದ ಮತ್ತು ಒಬ್ಬ ಉದಾರವಾದಿಯಾಗಿದ್ದ ಕೀನ್ಸ್, ಉದಾರವಾದದ ಒಂದು ಹೊಸ ಆವೃತ್ತಿಯ ಪ್ರಸ್ತಾಪವನ್ನು ಮಂಡಿಸಿದರು (ಅದನ್ನು ಅವರು "ಹೊಸ ಉದಾರವಾದ" ಎಂದು ಕರೆದರು). ಪ್ರಭುತ್ವದ ಹಸ್ತಕ್ಷೇಪ ತಪ್ಪಿಸುವುದನ್ನೇ ಶಾಸ್ತ್ರೀಯ ಉದಾರವಾದದ ಒಂದು ಹೆಗ್ಗುರುತಾಗಿದ್ದರೆ, ಹೆಚ್ಚು ಉದ್ಯೋಗಗಳನ್ನು ಸೃಷ್ಟಿಸುವ ಸಲುವಾಗಿ ಮತ್ತು ಒಟ್ಟಾರೆ ಬೇಡಿಕೆಯನ್ನು ವರ್ಧಿಸುವ ಸಲುವಾಗಿ ಪ್ರಭುತ್ವದ ಹಸ್ತಕ್ಷೇಪವು ಸದಾ ಇರಬೇಕು ಎಂಬದೇ ಈ ಹೊಸ ಆವೃತ್ತಿಯ ಒಂದು ವಿಶಿಷ್ಟ ಲಕ್ಷಣವಾಗಿತ್ತು.

ಕೀನ್ಸ್‌ವಾದವನ್ನು ಹಣಕಾಸು ಬಂಡವಾಳ ಒಪ್ಪಿಕೊಳ್ಳಲಿಲ್ಲ. ಈ ನಿರಾಕರಣೆಯಿಂದ ತಬ್ಬಿಬ್ಬಾದ ಕೀನ್ಸ್, ತಮ್ಮ ಸಿದ್ಧಾಂತವನ್ನು ಸರಿಯಾಗಿ ಗ್ರಹಿಸದಿರುವುದೇ ಅದಕ್ಕೆ ಕಾರಣವೆಂದರು. ಆದರೆ, ಈ ನಿರಾಕರಣೆಯ ನಿಜ ಕಾರಣ ಬಹಳ ಆಳವಾಗಿತ್ತು. ಪ್ರಭುತ್ವದ ಒಂದು ವ್ಯವಸ್ಥಿತವಾದ ಹಸ್ತಕ್ಷೇಪವು ತಮ್ಮ ಸಾಮಾಜಿಕ ಪಾತ್ರವನ್ನು ನಗಣ್ಯಗೊಳಿಸುತ್ತದೆ ಎಂಬ ಭಯವನ್ನು ಬಂಡವಾಳಶಾಹಿಗಳು ಹೊಂದಿದ್ದರು. ಅದರಲ್ಲೂ ವಿಶೇಷವಾಗಿ, ಹಣಕಾಸು ವಲಯದಲ್ಲಿ ವ್ಯವಹಾರ ನಡೆಸುತ್ತಿದ್ದ ಬಂಡವಾಳಗಾರರು (ಇವರನ್ನು "ಕಾರ್ಯರಹಿತ ಹೂಡಿಕೆದಾರರು" ಎಂದು ಕೀನ್ಸ್ ಕರೆದಿದ್ದರು) ಹೆಚ್ಚು ಭಯಭೀತರಾಗಿದ್ದರು. ಅವರ ಈ ಭಯ ನಿರಂತರವಾದುದು ಮತ್ತು ಅದು ಇಂದಿಗೂ ಉಳಿದಿರುವುದು ಹೌದು. ಮಹಾ ಯುದ್ಧವು ಹಣಕಾಸು ಬಂಡವಾಳವನ್ನು ದುರ್ಬಲಗೊಳಿಸಿತು ಮತ್ತು ಸಾಮಾಜಿಕ ಪ್ರಜಾಪ್ರಭುತ್ವವು ಪ್ರವರ್ಧಮಾನಕ್ಕೆ ಬರಲು ಕಾರಣವಾಯಿತು. ತದನಂತರವೇ, ಕೀನ್ಸ್ ಸಿದ್ಧಾಂತವನ್ನು ಪ್ರಭುತ್ವದ ನೀತಿಯಾಗಿ ಅಂಗೀಕರಿಸಲಾಯಿತು.

ಪರಿತ್ಯಜಿಸಲ್ಪಟ್ಟ ಕೀನ್ಸ್‌ರ "ಹೊಸ ಉದಾರವಾದ"

ಯುದ್ಧಾನಂತರದ ಅವಧಿಯಲ್ಲಿ ಮುಂದುವರಿದ ಬಂಡವಾಳಶಾಹಿ ದೇಶಗಳಲ್ಲಿ ಉಂಟಾದ ಆರ್ಥಿಕ ಉತ್ಕರ್ಷವು ಹಣಕಾಸು ಬಂಡವಾಳದ ಬಲವನ್ನು ವರ್ಧಿಸಿತು ಮತ್ತು ಅದರ ಗಾತ್ರವು ಹೆಚ್ಚಿದಂತೆಲ್ಲಾ ಅದು ಹೆಚ್ಚು ಹೆಚ್ಚು ಅಂತಾರಾಷ್ಟ್ರೀಯಗೊಳ್ಳುತ್ತಾ ಹೋಯಿತು. ಅದೇ ಸಮಯದಲ್ಲಿ, ಯುದ್ಧಾನಂತರದ ಬಂಡವಾಳಶಾಹಿಯು, ಪ್ರಭುತ್ವದ ಹಸ್ತಕ್ಷೇಪದ ಮಾರ್ಗವಾಗಿ ನೆರವು ಪಡೆಯುತ್ತಿದ್ದರೂ ಸಹ, ಬೇರೊಂದು ರೀತಿಯ ಬಿಕ್ಕಟ್ಟಿಗೆ ಸಿಲುಕಿಕೊಂಡಿತು. ಈ ಬಿಕ್ಕಟ್ಟು ಒಟ್ಟಾರೆ ಬೇಡಿಕೆಯ ಅಸಮರ್ಪತೆಯ ಕಾರಣದಿಂದ ಉಂಟಾದುದಲ್ಲ. 1960ರ ದಶಕದ ಕೊನೆಯಲ್ಲಿ ಮತ್ತು 1970ರ ದಶಕದ ಆರಂಭದಲ್ಲಿ ಸಂಭವಿಸಿದ ಹಣದುಬ್ಬರದ ಏರಿಕೆಯ ಕಾರಣದಿಂದಾಗಿ ಈ ಬಿಕ್ಕಟ್ಟು ಉಂಟಾಗಿತ್ತು. ಈ ಬಿಕ್ಕಟ್ಟು,ಯುದ್ಧಾನಂತರದ ಬಂಡವಾಳಶಾಹಿಯನ್ನು ನಿರೂಪಿಸುವ ಅವಳಿ ವಿದ್ಯಮಾನಗಳಲ್ಲಿ ಬೇರೂರಿದೆ: ಉದ್ಯೋಗಗಳ ಉನ್ನತ ಮಟ್ಟವು ಕಾರ್ಮಿಕರ ಮೀಸಲು ಪಡೆಯ ಗಾತ್ರವನ್ನು



ಕುಗ್ಗಿಸಿತು ಮತ್ತು ಒಂದು ಬಂಡವಾಳಶಾಹಿ ಅರ್ಥವ್ಯವಸ್ಥೆಯಲ್ಲಿ ಮೀಸಲು ಪಡೆಯ ಗಾತ್ರವು ಬೀರುತ್ತಿದ್ದ "ಸ್ಥಿರಗೊಳಿಸುವ ಪ್ರಭಾವ" ಇಲ್ಲವಾಯಿತು. ಹಾಗೂ, ನಿರ್ವಸಾಹತೀಕರಣವು ಮೂರನೇ ಜಗತ್ತಿನ ಬೇಡಿಕೆಯನ್ನು ಅಲ್ಲಿ ದೊರಕುವ ಮೂಲ ಸರಕು ಬೆಲೆಗಳನ್ನು ಕೆಳ ಮಟ್ಟದಲ್ಲಿಡುವ ಮೂಲಕ ಸಂಕುಚಿತಗೊಳಿಸುವ ಕಾರ್ಯವಿಧಾನವನ್ನು ಕಳಚಿಹಾಕಿತು. ಈ ಬಿಕ್ಕಟ್ಟು, ನೂತನ ಅಂತಾರಾಷ್ಟ್ರೀಯ ಹಣಕಾಸು ಬಂಡವಾಳವು ಕೀನ್ಸ್ ಪ್ರತಿಪಾದಿಸಿದ ಬೇಡಿಕೆ ನಿರ್ವಹಣೆಯ ವ್ಯವಸ್ಥೆಯನ್ನು ಅಪಖ್ಯಾತಿಗೆ ಈಡುಮಾಡಲು ಅವಕಾಶವನ್ನು ಕಲ್ಪಿಸಿ ಕೊಟ್ಟಿತು ಹಾಗೂ ಎಲ್ಲೆಡೆಯೂ ನವ ಉದಾರವಾದಿ ಆರ್ಥಿಕ ಆಳ್ವಿಕೆಯನ್ನು ಉತ್ತೇಜಿಸಲು ಅವಕಾಶವನ್ನು ಕಲ್ಪಿಸಿಕೊಟ್ಟಿತು. ಇದಕ್ಕೆ ಮುಕ್ತ ಮಾರುಕಟ್ಟೆಯ 'ಸದ್ಗುಣ'ಗಳನ್ನು ಮರು–ಪ್ರಸರಿಸುವ ಬೂರ್ಜ್ವಾ ಅರ್ಥಶಾಸ್ತ್ರದ ನೆರವು ಮತ್ತು ಪ್ರಚೋದನೆಯೂ ಇತ್ತು. ಈ ಹೊಸ ಪರಿಸ್ಥಿತಿಯಲ್ಲಿ, "ಹೂಡಿಕೆದಾರರ ವಿಶ್ವಾಸ" (ಅಂದರೆ, ಅಂತಾರಾಷ್ಟ್ರೀಯ ಹಣಕಾಸು ಬಂಡವಾಳದ ಅಪೇಕ್ಷೆಗಳಿಗೆ ತಲೆಬಾಗುವ ಮೂಲಕ ಬಂಡವಾಳದ ಹೊರ–ಹರಿವನ್ನು ತಡೆಯುವುದು) ಉಳಿಸಿಕೊಳ್ಳುವುದೇ ಪ್ರಭುತ್ವ ನೀತಿಯ ಒಂದು ಮುಖ್ಯ ಕಾಳಜಿಯಾದ ಕಾರಣದಿಂದ, ಕೀನ್ಸ್ ಅವರ "ಹೊಸ ಉದಾರವಾದ"ವನ್ನು ಪರಿತ್ಯಜಿಸಲಾಯಿತು. ಜೊತೆಗೆ, ನಡು–ಉದಾರವಾದ, ಸಾಮಾಜಿಕ ಪ್ರಜಾಪ್ರಭುತ್ವದ ಒಂದು ಬಹು ದೊಡ್ಡ ವಿಭಾಗ ಮತ್ತು ಎಡಪಂಥೀಯರ ಕೆಲವು ನಿರ್ದಿಷ್ಟ ವಿಭಾಗಗಳೂ ಸಹ ನವ ಉದಾರವಾದಕ್ಕೆ ಬೆಂಬಲವಾಗಿ ನಿಂತವು.

ಈ ನವ ಉದಾರವಾದವು ಅದು ಬಿಕ್ಕಟ್ಟಿಗೆ ಸಿಲುಕುವ ಮುನ್ನವೇ ಮುಂದುವರೆದ ಬಂಡವಾಳಶಾಹಿ ದೇಶಗಳ ಕಾರ್ಮಿಕ ವರ್ಗಕ್ಕೆ ಅಪಾರವಾದ ಸಂಕಟವನ್ನು ತಂದಿತ್ತು ಮತ್ತು ಮೂರನೇ ಜಗತ್ತಿನಲ್ಲಿ ದುಡಿಯುವ ಜನರಿಗೆ ಇನ್ನೂ ಹೆಚ್ಚಿನ ಸಂಕಟವನ್ನು ತಂದಿತು. ಅದು ಬಿಕ್ಕಟ್ಟಿಗೆ ಸಿಲುಕಿಕೊಂಡ ನಂತರ, ಜನರ ಸಂಕಷ್ಟಗಳು ಇನ್ನೂ ಹೆಚ್ಚುತ್ತಾ ಹೋದವು. ನಿಯಂತ್ರಣ ನೀತಿಗಳ ಅವಧಿಗೆ ಹೋಲಿಸಿದರೆ ನವ ಉದಾರವಾದಿ ಯುಗದಲ್ಲಿ ವಿಶ್ವ ಅರ್ಥವ್ಯವಸ್ಥೆಯ ಬೆಳವಣಿಗೆಯ ದರವು ಗಣನೀಯವಾಗಿ ನಿಧಾನಗೊಂಡಿದೆ. 2008ರ ನಂತರ ಯುಎಸ್‌ನಲ್ಲಿ ಆಸ್ತಿ ಬೆಲೆ ಗುಳ್ಳೆಗಳ ಕೊನೆಯ ಗುಳ್ಳೆಯು ಸ್ಫೋಟಗೊಂಡಾಗ ಬೆಳವಣಿಗೆಯ ದರ ಮತ್ತಷ್ಟು ನಿಧಾನಗೊಂಡಿತು. ನವ ಉದಾರವಾದಿ ಆಳ್ವಿಕೆಯ ಅಡಿಯಲ್ಲಿ ವರಮಾನಗಳ ಅಸಮಾನತೆಗಳು ಬೆಳೆಯುತ್ತಾ ಹೋದವು. ಈ ಅಸಮಾನತೆಗಳ ಬೃಹತ್ ಹೆಚ್ಚಳದ ಕಾರಣದಿಂದಾಗಿ ಒಟ್ಟಾರೆ ಬೇಡಿಕೆಯು ಅಸಮರ್ಪಕವಾಗುವಂತಾಯಿತು. ಇದು ಅನಿವಾರ್ಯವಾಗಿ ಅತಿ–ಉತ್ಪಾದನೆಯ ಒಂದು ಪ್ರವೃತ್ತಿಯನ್ನು ಉಂಟುಮಾಡುತ್ತದೆ. ಆಸ್ತಿ ಬೆಲೆ ಗುಳ್ಳೆಗಳ ಮೂಲಕ ಅಂದರೆ ಸಂಪತ್ತಿನ ಪರಿಣಾಮದ ಮೂಲಕ ವಿಶ್ವದ ಒಟ್ಟು ಬೇಡಿಕೆಯ ಮಟ್ಟವನ್ನು ಕಾಪಾಡಿಕೊಳ್ಳಲಾಯಿತು. ಹಾಗಾಗಿ ಬಿಕ್ಕಟ್ಟು ಪ್ರಕಟಗೊಳ್ಳುವುದು ತಡವಾಯಿತು. ಗುಳ್ಳೆಗಳು ಸ್ಫೋಟಗೊಂಡ ನಂತರ, ಈ ಬಿಕ್ಕಟ್ಟು ಸ್ವತಃ ಪ್ರಕಟಗೊಂಡಿತು. ನವ ಪುಟ 15 ಕ್ಕೆ

ಹಾಸನ ಸಿಪಿಐ(ಎಂ) ಜಿಲ್ಲಾ ಸಮ್ಮೇಳನ ಒತ್ತಾಯ... ಪುಟ 5 ರಿಂದ

ಸಾಮರ್ಥ್ಯದ 159 ಸರ್ಕಾರಿ ಆಸ್ಪತ್ರೆಗಳಿವೆ. ಸ್ವಾಯತ್ತ ಶಿಕ್ಷಣ ಸಂಸ್ಥೆಯನ್ನು ಹೊರತುಪಡಿಸಿ ಜಿಲ್ಲೆಯಲ್ಲಿ 176 ಸರ್ಕಾರಿ ವೈದ್ಯರಿದ್ದಾರೆ. ಜಿಲ್ಲೆಯಲ್ಲಿ 3,054 ಹಾಸಿಗೆ ಸಾಮರ್ಥ್ಯದ 384 ಖಾಸಗೀ ಆಸ್ಪತ್ರೆ ಮತ್ತು ನರ್ಸಿಂಗ್ ಹೋಂ ಗಳಿವೆ. ಇಲ್ಲಿ 338 ವೈದ್ಯರಿದ್ದಾರೆ

ಜಿಲ್ಲೆಯಲ್ಲಿ ಪಕ್ಷದ ಮಧ್ಯಪ್ರವೇಶ

ಹಾಸನ ಜಿಲ್ಲೆಯ ಮಟ್ಟಿಗೆ ಸಿಪಿಐಎಂ ರಾಜಕೀಯವಾಗಿ ದೊಡ್ಡ ಪಕ್ಷವಲ್ಲ. ಆದರೆ ಇತರೆ ಬಂಡವಾಳಶಾಹಿ ರಾಜಕೀಯ ಪಕ್ಷಗಳು ಮಾಡಲು ಸಾಧ್ಯವಾಗದಂತಹ ಹಲವು ರಾಜಕೀಯ ಮಧ್ಯಪ್ರವೇಶಗಳನ್ನು ಪಕ್ಷದ ನೇತೃತ್ವದಲ್ಲಿ ಮತ್ತು ಪಕ್ಷದ ಮುತುವರ್ಜಿಯಲ್ಲಿ ನಡೆಸಿ, ಗಮನ ಸೆಳೆಯಲು ಸಾಧ್ಯವಾಗಿದೆ.

ಕೋಮುವಾದದ ವಿರುದ್ಧ ಚಳುವಳಿ: ಹಾಸನ ಜಿಲ್ಲೆ ಪಾರಂಪರಿಕವಾಗಿ ಪಾಳೇಗಾರಿ ಮನಸ್ಥಿತಿಯನ್ನು ಹೊಂದಿದ್ದರೂ, ಇಲ್ಲಿ ಧರ್ಮ ಧರ್ಮಗಳ ನಡುವಿನ ಕಲಹ ವಿರಳವೆಂದೇ ಹೇಳಬೇಕು. ಜಿಲ್ಲೆಯ ಜನ ಕುವೆಂಪುರವರ ಮಾತಿನಂತೆ "ಸರ್ವಜನಾಂಗದ ಶಾಂತಿಯ ತೋಟದ ಬಗೆಬಗೆಯ ಬಣ್ಣದ ಹೂವುಗಳಂತೆ" ಬದುಕುತ್ತಾ ಬಂದಿದ್ದಾರೆ. ಆದರೆ ಇತ್ತೀಚಿನ ವರ್ಷಗಳಲ್ಲಿ ಕೋಮುವಾದಿ ಶಕ್ತಿಗಳು ಜಿಲ್ಲೆಯನ್ನು ತಮ್ಮ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಳ್ಳಲು ನಿರಂತರವಾಗಿ ಪ್ರಯತ್ನಿಸುತ್ತಿವೆ. ಅದರಲ್ಲೂ ಸಕಲೇಶಪುರ, ಬೇಲೂರು ಮತ್ತು ಆಲೂರು ತಾಲ್ಲೂಕುಗಳನ್ನು ಕೇಂದ್ರೀಕರಿಸಿ ತನ್ನ ಕೆಲಸವನ್ನು ನಡೆಸುತ್ತಿದೆ.

ಸಕಲೇಶಪುರ ತಾಲ್ಲೂಕಿನಲ್ಲಿ ಗೋರಕ್ಷಣೆಯ ಹೆಸರಿನಲ್ಲಿ ಬಜರಂಗದಳ, ವಿಶ್ವಹಿಂದೂ ಪರಿಷತ್ ಸಂಘಟನೆಗಳ ಕಾರ್ಯಕರ್ತರು ವಾಹನಗಳನ್ನು ಅಡ್ಡಗಟ್ಟುವುದು, ಏಕಾಏಕಿ ದಾಳಿಮಾಡಿ, ಹಲ್ಲೆ ಮಾಡುವ ಪ್ರಕರಣಗಳು ಬೆಳಕಿಗೆ ಬರುತ್ತಿರುತ್ತವೆ. ಇಂತಹ ಒಂದು ಪ್ರಕರಣದಲ್ಲಿ ಸಕಲೇಶಪುರ ತಾಲ್ಲೂಕಿನ ದಲಿತ ಯುವಕನ ಮೇಲೆ ಮಾರಣಾಂತಿಕ ಹಲ್ಲೆ ನಡೆಸಲಾಗಿತ್ತು. ಈ ಹಲ್ಲೆಯನ್ನು ಖಂಡಿಸಿ ಪಕ್ಷದ ಮುತುವರ್ಜಿಯಲ್ಲಿ ಜಿಲ್ಲೆಯ ದಲಿತ ಜನಪರ ಸಂಘಟನೆಗಳನ್ನು ಒಟ್ಟಿಗೆ ಸೇರಿಸಿಕೊಂಡು ಹಾಸನದಲ್ಲಿ ಬೃಹತ್ ಮೆರವಣಿಗೆ ಮತ್ತು ಪ್ರತಿಭಟನಾ ಸಭೆಯನ್ನು ನಡೆಸಲಾಗಿತ್ತು. ಈ ಪ್ರತಿಭಟನಾ ಸಭೆಗೆ ಹಿರಿಯ ಪತ್ರಕರ್ತರಾದ ದಿನೇಶ್ ಅಮ್ಮಿನಮಟ್ಟು ಭಾಗವಹಿಸಿದ್ದರು. ಈ ಹೋರಾಟ ಮತ್ತು ಅದರ ತಯಾರಿಯಲ್ಲಿ ಪಕ್ಷದ ನಾಯಕತ್ವದ ತೊಡಗಿಸಿಕೊಳ್ಳುವಿಕೆ ದಲಿತ ವಿಭಾಗದ ನಡುವೆ ನಮ್ಮ ಪಕ್ಷದ ಕುರಿತು ಉತ್ತಮ ವಾತಾವರಣವನ್ನು ನಿರ್ಮಾಣ ಮಾಡಿದೆ. ಸಮಾಜದ ಸ್ವಾಸ್ಥ್ಯವನ್ನು ಹಾಳು ಮಾಡುವ ನಿಟ್ಟಿನಲ್ಲಿ ಹೇಳಿಕೆಗಳನ್ನು ನೀಡುತ್ತಿದ್ದ ಬಜರಂಗದಳದ ಮುಖಂಡನನ್ನು ಜಿಲ್ಲೆಯಿಂದ ಗಡಿಪಾರು ಮಾಡಬೇಕೆಂದು ಆಗ್ರಹಿಸಿ ಪ್ರತಿಭಟನೆ ನಡೆಸಲಾಗಿದೆ.

ಬೇಲೂರಿನ ವಿಶ್ವವಿಖ್ಯಾತ ಚನ್ನಕೇಶವ ದೇವಾಲಯದ ಜಾತ್ರಾ ಮಹೋತ್ಸವದ ಸಂದರ್ಭದಲ್ಲಿ ಮುಸ್ಲಿಂ ವ್ಯಾಪಾರಿಗಳಿಗೆ ವ್ಯಾಪಾರ ಮಾಡಲು ಅವಕಾಶ ಕೊಡಬಾರದೆಂದು ವಿಶ್ವ ಹಿಂದು ಪರಿಷತ್, ಹಿಂದೂ ಜಾಗರಣ ವೇದಿಕೆ ತಹಸಿಲ್ದಾರರಿಗೆ ಮನವಿ ಮಾಡಿ ಅಶಾಂತಿಯ ವಾತಾವರಣ ನಿರ್ಮಿಸಿದ್ದರು. ಈ ಸಂದರ್ಭದಲ್ಲಿ ಪಕ್ಷದ ಮುತುವರ್ಜಿಯಿಂದ ಎಲ್ಲಾ ಜನಪರ ಸಂಘಟನೆಗಳನ್ನು ಸೇರಿಸಿಕೊಂಡು ಹಾಸನ ಜಿಲ್ಲಾಧಿಕಾರಿ ಕಛೇರಿ ಎದುರು ಮತ್ತು ಬೇಲೂರಿನಲ್ಲಿ ಪ್ರತಿಭಟನೆ ನಡೆಸಿ ಮುಸ್ಲಿಂ ವ್ಯಾಪಾರಿಗಳಿಗೂ ವ್ಯಾಪಾರಕ್ಕೆ ಅವಕಾಶ ಕಲ್ಪಿಸಿಕೊಟ್ಟು ಸೌಹಾರ್ದತೆಯನ್ನು ಮೆರೆಯಲಾಯಿತು.

ಹಾಸನದಲ್ಲಿ ಆರ್‌ಎಸ್‌ಎಸ್ ನೇತೃತ್ವದ ಪಾಂಚಜನ್ಯ ಹಿಂದೂ ಗಣಪತಿಯನ್ನು ಸರ್ಕಾರಿ ಕಟ್ಟಡ ಹಾಸನಾಂಬ ಕಲಾಕ್ಷೇತ್ರದಲ್ಲಿ ಪ್ರತಿಷ್ಠಾಪಿಸಿ, ಅಲ್ಲೇ ಹೋಮ ಹವನಗಳನ್ನು ನಡೆಸಲು ನಿರ್ಧರಿಸಲಾಗಿತ್ತು. ಇದರ ವಿರುದ್ಧ ಪಕ್ಷದ ಮುತುವರ್ಜಿಯಲ್ಲಿ ಜನಪರ ಸಂಘಟನೆಗಳನ್ನು ಒಟ್ಟಿಗೆ ಸೇರಿಸಿಕೊಂಡು, ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಲು ಹಾಗೂ ಒಂದು ಸಾಂಸ್ಕೃತಿಕ ಮತ್ತು ಸಾಮಾಜಿಕ ಪ್ರತಿರೋಧ ವ್ಯಕ್ತಪಡಿಸುವಲ್ಲಿ ನಮ್ಮ ಪಕ್ಷ ಪ್ರಮುಖ ಪಾತ್ರವಹಿಸಿದೆ. ಅರೇಹಳ್ಳಿ ಮತ್ತು ಬೇಲೂರುಗಳಲ್ಲಿ ಬಜರಂಗದಳದಿಂದ ನಡೆಸಿದ ಚರ್ಚ್ ಮೇಲಿನ ದಾಳಿಯನ್ನು ಖಂಡಿಸಿ ಪ್ರತಿಭಟನೆ ನಡೆಸಲಾಗಿದೆ.

ಈ ಎಲ್ಲಾ ಬೆಳವಣಿಗೆಗಳಿಂದ ಕೋಮುವಾದಿ ಶಕ್ತಿಗಳ ಅಟ್ಟಹಾಸವನ್ನು ಪ್ರತಿಭಟಿಸುವಲ್ಲಿ ಪಕ್ಷದ ಮುತುವರ್ಜಿ ಗಮನಾರ್ಹವಾಗಿದೆ. ಇವುಗಳ ಮುಂದುವರಿಕೆಯ ಭಾಗವಾಗಿ 2024 ಜನವರಿ 30ರಂದು ಹುತಾತ್ಮ ದಿನದ ಅಂಗವಾಗಿ ಹಾಸನ ನಗರದಲ್ಲಿ ಸೌಹಾರ್ದ ಮಾನವ ಸರಪಳಿಯನ್ನು ರಚಿಸಲಾಗಿತ್ತು. ಇದಕ್ಕಾಗಿ ವ್ಯಾಪಕ ಪ್ರಚಾರ ಮಾಡಿ ಎಲ್ಲರನ್ನೂ ಒಳಗೊಳಿಸಲಾಗಿತ್ತು.

ದಲಿತರ ಜಾತಿ ದೌರ್ಜನ್ಯ, ಅಸ್ಪೃಶ್ಯತೆಯ ಪ್ರಶ್ನೆಗಳು ಜಿಲ್ಲೆಯಲ್ಲಿ ಎದುರಾದಾಗ ಅದನ್ನು ಎದುರಿಸುವಲ್ಲಿ ನಮ್ಮ ಪಕ್ಷ ಮತ್ತು ನಮ್ಮ ಸಂಘಟನೆಗಳು ಮುಂಚೂಣಿಯಲ್ಲಿದೆ. ಐತಿಹಾಸಿಕ ಸಿಗರನಹಳ್ಳಿ ದೇವಸ್ಥಾನ ಪ್ರವೇಶ ಹೋರಾಟವನ್ನು ನಡೆಸಿದ ಅನುಭವದ ಆಧಾರದಲ್ಲಿ ಜಿಲ್ಲೆಯಲ್ಲಿ ದಲಿತ ವಿಭಾಗದ ನಡುವಿನ ಪ್ರಶ್ನೆಗಳನ್ನು ತೆಗೆದುಕೊಳ್ಳಲು ಸಹಕಾರಿಯಾಗಿದೆ. ಅರಕಲಗೂಡು ತಾಲ್ಲೂಕಿನ ಗಂಗೂರು ಜೀತ ವಿಮುಕ್ತರ ಭೂಮಿ ಮತ್ತು ವಸತಿಯ ಪ್ರಶ್ನೆಯ ಮೇಲೆ ಪಕ್ಷದ ಮುತುವರ್ಜಿಯಲ್ಲಿ ಎಲ್ಲಾ ದಲಿತ ಜನಪರ ಸಂಘಟನೆಗಳ ನೇತೃತ್ವದಲ್ಲಿ ಹಲವು ಹಂತದ ಚಳುವಳಿಯನ್ನು ರೂಪಿಸಲು ಸಾಧ್ಯವಾಗಿದ್ದರೂ ಪರಿಹಾರ ಕಾಣಲು ಸಾಧ್ಯವಾಗಿಲ್ಲ. ದಲಿತರಿಗೆ ಭೂಮಿ ಇಲ್ಲದೆ ಶವಸಂಸ್ಕಾರವನ್ನು ಮನೆಯ ಮುಂದೆ ನಡೆಸಲು ಪ್ರಯತ್ನಿಸಿದ ಅರಕಲಗೂಡು ಪ್ರಕರಣದ ಕುರಿತು ಪಕ್ಷದ ನಿಯೋಗ ಭೇಟಿ ನೀಡಿ, ಅಧಿಕಾರಿಗಳೊಂದಿಗೆ ಚರ್ಚಿಸಿ, ದಲಿತರಿಗೆ ಪ್ರತ್ಯೇಕ ಸ್ಮಶಾನ ಮಂಜೂರು ಮಾಡಿ ಭೂಮಿ ಕೊಡಬೇಕೆಂದು ಆಗ್ರಹಿಸಲಾಗಿದೆ. ಸಕಲೇಶಪುರ ತಾಲ್ಲೂಕಿನಲ್ಲಿ ಅಂಗನವಾಡಿ ಸಹಾಯಕಿ ಮೇಲೆ ನಡೆದ ಜಾತಿ ಅಸ್ಪೃಶ್ಯತೆ ಪ್ರಕರಣಲ್ಲೂ ಪಕ್ಷದ ನಿಯೋಗ ಭೇಟಿ ನೀಡಿತ್ತು.

ಹೊಳೆನರಸೀಪುರ ತಾಲ್ಲೂಕಿನಲ್ಲಿ ಅಂಗನವಾಡಿ ನೌಕರರು ನಡೆಸುತ್ತಿದ್ದ ಪ್ರತಿಭಟನೆಯ ವೇಳೆ ದಬ್ಬಾಳಿಕೆ ನಡೆಸಿದ ಶಾಸಕ ರೇವಣ್ಣನ ವರ್ತನೆ ಖಂಡಿಸಿ ಜಿಲ್ಲೆಯಾದ್ಯಂತ ಪ್ರತಿಭಟನೆ ನಡೆಸಲಾಗಿದೆ ಮತ್ತು ಹಾಸನದ ಅಂಬೇಡ್ಕರ್ ಪ್ರತಿಮೆಯ ಎದುರು ಧರಣಿ ನಡೆಸಲಾಗಿದೆ.

2024 ಏಪ್ರಿಲ್‌ನಲ್ಲಿ ಹಾಸನ ಜಿಲ್ಲೆ ಮಾತ್ರವಲ್ಲದೆ ರಾಜ್ಯ, ಇಡೀ ದೇಶವೇ ಬೆಚ್ಚಿ ಬೀಳುವಂತಹ ಪ್ರಕರಣ ನಡೆದಿತ್ತು. ಹಾಸನದ ಸಂಸದ ಪ್ರಜ್ವಲ್ ರೇವಣ್ಣನ ಲೈಂಗಿಕ ದೌರ್ಜನ್ಯ ಮತ್ತು ಅದನ್ನು ಚಿತ್ರೀಕರಿಸಿದ ವೀಡಿಯೋಗಳನ್ನು ಹಂಚಿದ ಪ್ರಕರಣಕ್ಕೆ ಸಂಬಂಧಿಸಿದಂತೆ 2024 ಏಪ್ರಿಲ್ 25ರಂದು ಪಕ್ಷದ ಜಿಲ್ಲಾ ಸಮಿತಿಯಿಂದ ಪತ್ರಿಕಾ ಹೇಳಿಕೆ ನೀಡಿ, ಅಲ್ಲಿಂದಲೇ ಅತ್ಯಂತ ಕ್ರಿಯಾಶೀಲವಾಗಿ ಪಕ್ಷದ ರಾಜ್ಯ ಸಮಿತಿಯ ಮಾರ್ಗದರ್ಶನದೊಂದಿಗೆ ಕಾರ್ಯಪ್ರವೃತ್ತರಾಗಿ, ಈ ಹೋರಾಟವನ್ನು ವ್ಯಾಪಕವಾಗಿ ಬಲಪಡಿಸಲು ನಿರ್ಧರಿಸಲಾಯಿತು. ಏಪ್ರಿಲ್ 29ರಂದು ಹಾಸನ ನಗರದಲ್ಲಿ ಪ್ರತಿಭಟನೆಯನ್ನು ಆಯೋಜಿಸಲಾಗಿತ್ತು. ಈ ಪ್ರತಿಭಟನೆಗೆ ರಾಜ್ಯ ಮಟ್ಟದ ಮಹಿಳಾ ಮುಖಂಡರುಗಳು ಭಾಗವಹಿಸಿದ್ದರು. ಇದು ವಿಪರೀತ ಪ್ರಚಾರವನ್ನು ಪಡೆದುಕೊಂಡು ರಾಜಕೀಯ ಸ್ವರೂಪವನ್ನು ಪಡೆದುಕೊಂಡಿತು. ಮುಂದುವರೆದು ಮೇ 18 ರಾಜ್ಯಮಟ್ಟ ಸಮಾಲೋಚನಾ ಸಭೆಯನ್ನು ಹಾಸನದಲ್ಲಿ ನಡೆಸಲಾಯಿತು. ಈ ಸಭೆಗೆ ರಾಜ್ಯದ ಬಹುತೇಕ ಜನಪರ ಸಂಘಟನೆಗಳ ಮುಖಂಡರು ಭಾಗವಹಿಸಿದ್ದರು. ಪಕ್ಷದ ರಾಜ್ಯ ಸಮಿತಿಯ ತೀರ್ಮಾನದಂತೆ ಮೇ 30ರಂದು "ಹೋರಾಟದ ನಡೆಗೆ ಹಾಸನದ ಕಡೆಗೆ" ಎಂಬ ಘೋಷಣೆ ಅಡಿಯಲ್ಲಿ ಹಾಸನ ಚಲೋ ಕಾರ್ಯಕ್ರಮಕ್ಕೆ ಕರೆ ನೀಡಲಾಯಿತು.

ಮೇ 30ರಂದು ನಡೆದ ಈ ಬೃಹತ್ ಮೆರವಣಿಗೆ ಮತ್ತು ಪ್ರತಿಭಟನಾ ಸಮಾವೇಶ ಅಭೂತಪೂರ್ವ ಯಶಸ್ಸನ್ನು ಕಂಡಿತು. ಪಕ್ಷದ ರಾಜ್ಯ ಸಮಿತಿಯ ಕರೆಯಂತೆ ರಾಜ್ಯಾದ್ಯಂತ ಪಕ್ಷದ ಸದಸ್ಯರು ಮತ್ತು ನಮ್ಮ ಸಾಮೂಹಿಕ ಸಂಘಟನೆಗಳ ಸದಸ್ಯರು ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಈ ಪ್ರತಿಭಟನಾ ಸಮಾವೇಶವನ್ನು ಉದ್ಘಾಟಿಸಿ ನಮ್ಮ ಪಕ್ಷದ ಪೊಲಿಟ್ ಬ್ಯೂರೊ ಸದಸ್ಯರಾದ ಕಾಮ್ರೇಡ್ ಸುಭಾಷಿಣಿ ಅಲಿಯವರು ಮಾತನಾಡಿದರು. ಈ ಹೋರಾಟವನ್ನು ಯಶಸ್ವಿಗೊಳಿಸಲು ಹಾಸನ ಮತ್ತು ರಾಜ್ಯದ ಜನಪರ ಸಂಘಟನೆಗಳು ಮತ್ತು ವ್ಯಕ್ತಿಗಳನ್ನು ಒಳಗೊಂಡ ಸಮನ್ವಯ ಸಮಿತಿಯನ್ನು ರಚಿಸಲಾಗಿತ್ತು.

ಲೋಕಸಭಾ ಚುನಾವಣೆ ಘೋಷಣೆಯಾಗುತ್ತಿದ್ದಂತೆ ಹಾಸನದಲ್ಲಿ ದಲಿತ ಮತ್ತು ಜನಪರ ಸಂಘಟನೆಗಳ ಸಭೆಯನ್ನು ನಡೆಸಿ ಹಾಸನ ಲೋಕಸಭಾ ಕ್ಷೇತ್ರದಲ್ಲಿ ಚುನಾವಣಾ ಕೆಲಸವನ್ನು ಪರಿಣಾಮಕಾರಿಯಾಗಿ ನಡೆಸಬೇಕೆಂದು ತೀರ್ಮಾನಿಸಿ ಎರಡು ಹಂತಗಳಲ್ಲಿ ಕ್ಷೇತ್ರದ ಎಲ್ಲಾ ತಾಲ್ಲೂಕುಗಳಿಗೂ ಭೇಟಿ ನೀಡಿ ಸಭೆಗಳನ್ನು ನಡೆಸಿ, ಪತ್ರಿಕಾ ಗೋಷ್ಠಿಗಳನ್ನು ನಡೆಸಿ ಸ್ವತಂತ್ರವಾಗಿ ಕೆಲಸ ಆರಂಭಿಸಲಾಯಿತು. "ಭ್ರಷ್ಟ ಬಿಜೆಪಿ – ಸ್ವಾರ್ಥಿ ಜೆಡಿಎಸ್ ಸೋಲಿಸಿ, ಹಾಸನ ಉಳಿಸಿ" ಎಂಬ ಘೋಷಣೆಯ ಆಧಾರದಲ್ಲಿ ಪರಿಣಾಮಕಾರಿ ಚುನಾವಣಾ ಕೆಲಸವನ್ನು ನಡೆಸಲಾಯಿತು. ಲೋಕಸಭಾ ಚುನಾವಣೆಯಲ್ಲಿನ ನಮ್ಮ ಕೆಲಸ ಸಾರ್ವಜನಿಕವಾಗಿ ಮತ್ತು ರಾಜಕೀಯವಾಗಿ ಹೆಚ್ಚು ಗಮನ ಸೆಳೆಯಿತು.

ಲೋಕಸಭಾ ಚುನಾವಣೆ, ಪ್ರಜ್ವಲ್ ರೇವಣ್ಣನ ಲೈಂಗಿಕ ಹಗರಣದ ವಿರುದ್ಧದ ಹೋರಾಟ, ಕೋಮುವಾದದ ವಿರುದ್ಧದ ಮಧ್ಯಪ್ರವೇಶ, ದಲಿತ ದೌರ್ಜನ್ಯಗಳ ವಿರುದ್ಧದ ನಮ್ಮ ಮಧ್ಯಪ್ರವೇಶದಿಂದಾಗಿ ಜಿಲ್ಲೆಯಲ್ಲಿ ಪಕ್ಷ ಮತ್ತು ಸಂಘಟನೆಗಳ ಬಗ್ಗೆ ಸಾರ್ವಜನಿಕವಾಗಿ ಮತ್ತು ರಾಜಕೀಯವಾಗಿ ಗೌರವ ಹೆಚ್ಚಾಗಿದೆ.

ಹಾಸನ ಜಿಲ್ಲೆಯ ಸಮಗ್ರ ಮತ್ತು ಸಮರ್ಪಕ ಅಭಿವೃದ್ಧಿಯ ಕುರಿತು

ಈ ನಡುವೆ ಪಕ್ಷದ ಮುತುವರ್ಜಿಯಿಂದ ನಿರ್ದಿಷ್ಟವಾಗಿ ಜಿಲ್ಲೆಯ ಅಭಿವೃದ್ಧಿಗೆ ಸಂಬಂಧಿಸಿದಂತೆ ಒಂದು ಗಮನಾರ್ಹ ಕಾರ್ಯಕ್ರಮ ನಡೆಸಲಾಗಿದೆ. 'ಹಾಸನ ಜಿಲ್ಲೆಯ ಕೃಷಿ–ಪರಿಸರ ಉಳಿಸಿ; ಕೈಗಾರಿಕೆಗಳನ್ನು ಸ್ಥಾಪಿಸಿ; ವಾಣಿಜ್ಯ–ಉದ್ಯೋಗ ಸೃಷ್ಟಿಸಿ' ಎಂಬ ಘೋಷಣೆಯೊಂದಿಗೆ 'ಹಾಸನ ಜಿಲ್ಲೆಯ ಸಮಗ್ರ ಮತ್ತು ಸಮರ್ಪಕ ಅಭಿವೃದ್ಧಿಯ ಕುರಿತು ಬೃಹತ್ ವಿಚಾರ ಸಂಕಿರಣ' ಸಂಘಟಿಸಲಾಯಿತು. ಈ ವಿಚಾರ ಸಂಕಿರಣವನ್ನು ಅಕ್ಟೋಬರ್ 20ರಂದು ಸಾಮೂಹಿಕ ಸಂಘಟನೆಗಳ ನೇತೃತ್ವದಲ್ಲಿ ನಡೆಸಲಾಯಿತು. ಇದೊಂದು ಜಿಲ್ಲೆಯ ಗಮನ ಸೆಳೆದ ಕಾರ್ಯಕ್ರಮವಾಗಿದೆ. ಈ ವಿಚಾರಸಂಕಿರಣದಲ್ಲಿ ಹಾಸನ ಜಿಲ್ಲೆಗೆ ಸಂಬಂಧಿಸಿದಂತೆ ಕೃಷಿ, ಕೈಗಾರಿಕೆ, ಉದ್ಯೋಗ, ಸಾಮಾಜಿಕ ಆರ್ಥಿಕ ಅಸಮಾನತೆ ಮತ್ತು ಪರಿಸರದ ಪ್ರಶ್ನೆಗಳ ಕುರಿತು ವಿಷಯ ತಜ್ಞರಿಂದ ಅಧ್ಯಯನಯುಕ್ತ ಪ್ರಬಂಧಗಳನ್ನು ಮಂಡಿಸಲಾಯಿತು. ಹಾಗೂ ಈ ವಿಷಯಗಳ ಕುರಿತು ಒಂದು ಅಭಿವೃದ್ಧಿ ಸಂವಾದವನ್ನೂ ನಡೆಸಲಾಯಿತು. ಈ ವಿಚಾರ ಸಂಕಿರಣ ಸಾರ್ವಜನಿಕವಾಗಿ ಬಹು ಪ್ರಶಂಸೆಗೆ ಒಳಗಾದ ಕಾರ್ಯಕ್ರಮವಾಗಿದೆ.

ಸಮ್ಮೇಳನ ಗುರುತಿಸಿರುವ ಮುಂದಿನ ರಾಜಕೀಯ ಕರ್ತವ್ಯಗಳು

1. ಜಿಲ್ಲೆಯ ಕೃಷಿ, ಕೈಗಾರಿಕೆ, ವಾಣಿಜ್ಯ ಮತ್ತು ಉದ್ಯೋಗ ಪ್ರಶ್ನೆಗಳಿಗಾಗಿ ಒಂದು ಸಾರ್ವತ್ರಿಕವಾದ ಮತ್ತು ಸಾಮೂಹಿಕವಾದ ಹೋರಾಟ ರೂಪಿಸುವುದು. ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಸಂಬಂಧಿಸಿದ ನಿರ್ದಿಷ್ಟ ಸಮಸ್ಯೆಗಳನ್ನು ಗುರುತಿಸಿ ಸೂಕ್ತ ಅಧ್ಯಯನ ಮತ್ತು ತಯಾರಿ ನಡೆಸಿ, ಸ್ಥಳೀಯ ಮಟ್ಟದಿಂದ ಜಿಲ್ಲಾ ಮಟ್ಟದವರೆಗೆ ಒಂದು ಯೋಜನಾಬದ್ಧ ಹಾಗೂ ಶಿಸ್ತುಬದ್ಧ ಹೋರಾಟ ರೂಪಿಸುವುದು. ಹಾಗೂ ಆ ಹೋರಾಟಗಳನ್ನು ಒಂದು ತಾರ್ಕಿಕ ಅಂತ್ಯಕ್ಕೆ ಮುಟ್ಟಿಸುವುದು.
2. ಜಿಲ್ಲೆಯ ಯುವಜನರ ಉದ್ಯೋಗದ ಪ್ರಶ್ನೆಗಳ ಆಧಾರದಲ್ಲಿ ವ್ಯವಸ್ಥಿತ ತಯಾರಿಯ ಆಧಾರದಲ್ಲಿ ಹೋರಾಟ ರೂಪಿಸುವುದು.
3. ಜಿಲ್ಲೆಯಲ್ಲಿನ ಮನೆ ನಿವೇಶನ ರಹಿತರನ್ನು ಗುರುತಿಸಿ, ಅವರನ್ನು ಸಂಘಟಿಸಿ ಜಿಲ್ಲೆಯ ಕನಿಷ್ಠ 50 ಆಯ್ದ ಗ್ರಾಮ ಮತ್ತು ನಗರ ಸ್ಥಳೀಯ ಆಡಳಿತ ಸಂಸ್ಥೆಗಳ ಮಟ್ಟದಲ್ಲಿ ಅರ್ಜಿ ಹಾಕಿಸಿ ಹೋರಾಟ ರೂಪಿಸುವುದು. ಹಾಗೂ ಆ ಹೋರಾಟವನ್ನು ಜಿಲ್ಲಾ ಮಟ್ಟಕ್ಕೆ ತಂದು ಒಂದು ಸಮರಶೀಲ ಹೋರಾಟ ನಡೆಸಿ ಅದಕ್ಕೊಂದು ರಾಜಕೀಯ ಪರಿಹಾರ ಒದಗಿಸಲು ಪ್ರಯತ್ನಿಸಬೇಕು.
4. ಜಿಲ್ಲೆಯ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ವಿಸ್ತಾರಗೊಳಿಸಿ ಉತ್ತಮಗೊಳಿಸಲು ಹಾಗೂ ಸಾರ್ವಜನಿಕ ಆರೋಗ್ಯ ಕೇಂದ್ರಗಳನ್ನು ಬಲಪಡಿಸುವಂತೆ ಸ್ಥಳೀಯ ಮಟ್ಟದಿಂದ ಜಿಲ್ಲಾ ಮಟ್ಟದವರೆಗೆ ವ್ಯವಸ್ಥಿತ ಹೋರಾಟ ರೂಪಿಸುವುದು.
5. ಗ್ರಾಮೀಣ ರೈತರು, ಕೂಲಿ ಕಾರ್ಮಿಕರು, ದಲಿತರು ಮತ್ತು ಮಹಿಳೆಯರ ನಡುವೆ ಸಾಮೂಹಿಕ ರಂಗಗಳನ್ನು ಕಟ್ಟಲು ನಿರ್ದಿಷ್ಟ ಯೋಜನೆಯ ಆಧಾರದಲ್ಲಿ ಕೆಲಸ ಮಾಡುವುದು.
6. ಜಿಲ್ಲೆಯ ದಲಿತರ ನಿರ್ದಿಷ್ಟ ಪ್ರಶ್ನೆಗಳ ಆಧಾರದಲ್ಲಿ ಸ್ಥಳೀಯ ಮಟ್ಟದಿಂದ ವ್ಯಾಪಕವಾದ ಪ್ರಚಾರ ಮತ್ತು ತಯಾರಿಯೊಂದಿಗೆ ಜಿಲ್ಲಾ ಮಟ್ಟದಲ್ಲಿ ಒಂದು ದೊಡ್ಡ ಹೋರಾಟವನ್ನು ರೂಪಿಸುವುದು.



ನೂತನ ಜಿಲ್ಲಾ ಸಮಿತಿ

ಹೆಚ್.ಆರ್.ನವೀನಕುಮಾರ್ ಕಾರ್ಯದರ್ಶಿಯಾಗಿ ಆಯ್ಕೆ.

ಸದಸ್ಯರಾಗಿ: ಧರ್ಮೇಶ್, ಎಂ.ಜಿ.ಪೃಥ್ವಿ, ಪುಷ್ಪ, ಸೌಮ್ಯ, ಅರವಿಂದ, ಶ್ರೀಧರ್, ಮೊಹಮದ್, ಎಚ್.ಎಸ್.ಮಂಜುನಾಥ್, ಉಮೇಶ್, ಲಿಂಗರಾಜ (ಆಹ್ವಾನಿತ), ವಿ.ಸುಕುಮಾರ್ (ಖಾಯಂ ಆಹ್ವಾನಿತರು), ಜಿ.ಪಿ.ಸತ್ಯನಾರಾಯಣ (ಖಾಯಂ ಆಹ್ವಾನಿತರು).

ಟ್ರಂಪ್ ವಿಜಯ......... ಪುಟ 13 ರಿಂದ

ಉದಾರವಾದದ ಎಲ್ಲೆಗಳೊಳಗೆ ಈ ಬಿಕ್ಕಟ್ಟಿನಿಂದ ಹೊರಬರುವುದು ಸಾಧ್ಯವಿಲ್ಲ. ಏಕೆಂದರೆ, ಕೀನ್ಸ್ ಪ್ರತಿಪಾದನೆಯ ಬೇಡಿಕೆ ನಿರ್ವಹಣೆಯನ್ನು ನವ ಉದಾರವಾದವು ತಿರಸ್ಕರಿಸುತ್ತದೆ. ಈ ಪರಿಸ್ಥಿತಿಯಲ್ಲಿ, ಬಿಕ್ಕಟ್ಟಿನ ತೀವ್ರತೆಯನ್ನು ಸ್ವಲ್ಪಮಟ್ಟಿಗೆ ತಗ್ಗಿಸಬಹುದಾದ ಹೊಸ ಗುಳ್ಳೆಗಳನ್ನು ಎಬ್ಬಿಸುವ ಸಾಧ್ಯತೆಯನ್ನು ತಳ್ಳಿಹಾಕಬೇಕಾಗುತ್ತದೆ, ಏಕೆಂದರೆ, ಗುಳ್ಳೆಗಳ ಸಂಬಂಧವಾಗಿ ಹಿಂದೆ ಪಡೆದ ಅನುಭವವು ಜನರನ್ನು ಹೆಚ್ಚು ಜಾಗರೂಕರನ್ನಾಗಿಸಿದೆ. ಮಾತ್ರವಲ್ಲ, ಹೊಸ ಗುಳ್ಳೆಯನ್ನು ಎಬ್ಬಿಸುವ ಗುರಿ ಹೊಂದಿರುವ ಹಣಕಾಸು ನೀತಿಯು, ಬೇಡಿಕೆ ಸ್ಥಗಿತಗೊಂಡಿರುವ ಸನ್ನಿವೇಶದಲ್ಲೂ, ಲಾಭದ ಅಂತರವನ್ನು (profit-mark-ups) ಹೆಚ್ಚಿಸಿಕೊಳ್ಳುವ ಅವಕಾಶವನ್ನು ಕಲ್ಪಿಸಿಕೊಡುವಂತಾಯಿತು ಮತ್ತು ಅದರ ಪರಿಣಾಮವಾಗಿ ಹಣದುಬ್ಬರ ಉಲ್ಬಣಗೊಳ್ಳುವಂತಾಯಿತು. ಈ ಪರಿಸ್ಥಿತಿಯು ಬಿಕ್ಕಟ್ಟನ್ನು ಮತ್ತಷ್ಟು ಉಲ್ಬಣಗೊಳಿಸಿತು.

ಮರಳಿ ಸ್ಥಗಿತತೆ ಮತ್ತು ಬಿಕ್ಕಟ್ಟಿಗೆ

ಸಮಕಾಲೀನ ಉದಾರವಾದವು, ಸಂಕ್ಷಿಪ್ತವಾಗಿ ಹೇಳುವುದಾದರೆ, ನವ ಉದಾರವಾದಿ ವ್ಯವಸ್ಥೆಗೆ ಬದ್ಧವಾಗಿರುವುದರಿಂದಾಗಿ, ಜನರ ಸಂಕಷ್ಟಗಳನ್ನು ನಿವಾರಿಸಲು ಅದು ಏನನ್ನೂ ಮಾಡದು ಮತ್ತು ಅದು ಏನನ್ನೂ ನಿಜಕ್ಕೂ ಮಾಡಲಾರದು. ಹಾಗಾಗಿ, ಜನರು ನವ ಉದಾರವಾದವನ್ನು ತೊರೆದು ಬಲ ಪಂಥದತ್ತ ಅಥವಾ ಎಡ ಪಕ್ಷಗಳತ್ತ ಅಥವಾ ಬೇರೊಂದು ರೀತಿಯ ರಾಜಕೀಯ ಪಕ್ಷದತ್ತ ಹೊರಳುತ್ತಿದ್ದಾರೆ. ಅದರಲ್ಲಿ ಆಶ್ಚರ್ಯವೇನಿಲ್ಲ. ಬಲಪಂಥೀಯರೂ ಕೂಡ ಜನರ ಸಂಕಷ್ಟವನ್ನು ನಿವಾರಿಸಲು ಏನನ್ನೂ ಮಾಡಲಾರರು: ಚುನಾವಣೆಗಳ ಮೊದಲು ತಮ್ಮ ವಾಕ್ಚಾತುರ್ಯದ ಮೂಲಕ ತಮ್ಮ ನೀತಿಗಳು ನವ ಉದಾರವಾದಿ ನೀತಿಗಿಂತ ಭಿನ್ನ ಎಂದು ತೋರಿಸಿಕೊಳ್ಳುತ್ತಾರೆ; ಆದರೆ, ಚುನಾವಣೆಗಳ ನಂತರ ಅದೇ ನವ ಉದಾರವಾದಿ ನೀತಿಗಳನ್ನು ಅವರು ಸದ್ದಿಲ್ಲದೇ ಅಳವಡಿಸಿಕೊಳ್ಳುತ್ತಾರೆ. ಇಟಲಿಯಲ್ಲಿ ಮೆಲೋನಿ ಮಾಡಿದ್ದುದು ಇದನ್ನೇ. ಫ್ರಾನ್ಸಿನಲ್ಲಿ ಮರೀನ್ ಲೆ ಪೆನ್ ಅವರ ಪ್ರಧಾನ ಮಂತ್ರಿ ಅಭ್ಯರ್ಥಿ ಜೋರ್ಡಾನ್ ಬಾರ್ಡೆಲಾ ಅವರು ಅಂತಾರಾಷ್ಟ್ರೀಯ ಹಣಕಾಸು ಬಂಡವಾಳದ ಸಂಬಂಧವಾಗಿ ತಮ್ಮ ಪಕ್ಷವು ಹಿಂದೆ ಹೊಂದಿದ್ದ ವಿರೋಧ–ನೀತಿಯನ್ನು ಚುನಾವಣೆಗಳು ಸಮೀಪಿಸುತ್ತಿದ್ದಂತೆಯೇ ಕೈಬಿಟ್ಟು ಬೇರೊಂದು ರಾಗ ಹಾಡಲಾರಂಭಿಸಿದರು. ಆದರೆ, ಬಲಪಂಥೀಯರು ಸಾಮಾನ್ಯವಾಗಿ ಕೆಲವು ಧಾರ್ಮಿಕ ಅಥವಾ ಜನಾಂಗೀಯ ಅಥವಾ ವಲಸಿಗ ಅಲ್ಪಸಂಖ್ಯಾತ ಗುಂಪುಗಳನ್ನು"ಅನ್ಯ"ರೆಂದು ಗುರುತಿಸಿ ಅವರ ವಿರುದ್ಧ ನಡೆಸುವ ಸತತ ವಾಗ್ದಾಳಿಯ ಮೂಲಕ ತಾವು ಬಿಕ್ಕಟ್ಟನ್ನು ಪರಿಹರಿಸುವಲ್ಲಿ ಕ್ರಿಯಾಶೀಲರಾಗಿ ತೊಡಗಿರುವ ಸೋಗು ಹಾಕುತ್ತಾರೆ. ಆದರೆ, ನಡು–ಉದಾರವಾದವು ಬಿಕ್ಕಟ್ಟು ನಿಜಕ್ಕೂ ಇದೆ ಎಂಬ ವಾಸ್ತವಾಂಶವನ್ನೇ ಒಪ್ಪಿಕೊಳ್ಳುವುದಿಲ್ಲ. ಈ ಪರಿಸ್ಥಿತಿಯಲ್ಲಿ ಏಕಸ್ವಾಮ್ಯ ಬಂಡವಾಳವು ಬಿಕ್ಕಟ್ಟಿನ ಸಂದರ್ಭದಲ್ಲಿ ತನ್ನ ಪ್ರಾಬಲ್ಯವನ್ನು ಕಾಪಾಡಿಕೊಳ್ಳಲು ಬಲಪಂಥೀಯರನ್ನು ಅಥವಾ ನವ–ಫ್ಯಾಸಿಸ್ಟ್‌ರನ್ನು ಬೆಂಬಲಿಸುತ್ತದೆ. ಇದು ನಡುಪಂಥೀಯ ಉದಾರವಾದವು ದುರ್ಬಲಗೊಳ್ಳಲು ಮತ್ತು ಅದು ಬಿಕ್ಕಟ್ಟಿಗೆ ಒಳಗಾಗಲು ಮತ್ತೊಂದು ಕಾರಣವಾಗಿದೆ.

ಟ್ರಂಪ್, ಚೀನಾದ ಆಮದುಗಳ ವಿರುದ್ಧ ಮಾತ್ರವಲ್ಲದೇ ಯುರೋಪಿಯನ್ ಒಕ್ಕೂಟದ ಆಮದುಗಳ ವಿರುದ್ಧವೂ ಅಮೆರಿಕದ ಅರ್ಥವ್ಯವಸ್ಥೆಯನ್ನು ರಕ್ಷಿಸುವ ಒಂದು ಆರ್ಥಿಕ ಕಾರ್ಯಸೂಚಿಯನ್ನು ಹೊಂದಿದ್ದಾರೆ ಎಂದು ಹೇಳಬಹುದೇ ವಿನಃ, ಮೆಲೋನಿಯ ರೀತಿಯಲ್ಲಿ ಅದೇ ಹಳೆಯ ನವ ಉದಾರವಾದಿ ಕಥಾ–ಹಂದರಕ್ಕೆ ಟ್ರಂಪ್ ಅಂಟಿಕೊಂಡಿದ್ದಾರೆ ಎಂದು ಆರೋಪಿಸಲಾಗದು. ಇಲ್ಲಿ ಹಲವಾರು ಅಂಶಗಳನ್ನು ಗಮನಿಸಬೇಕಾಗುತ್ತದೆ: ಮೊದಲನೆಯದು, ಉದಾರ ವ್ಯಾಪಾರ ವ್ಯವಸ್ಥೆಯಿಂದ ದೂರಸರಿದು ರಕ್ಷಣಾತ್ಮಕ ವ್ಯಾಪಾರದತ್ತ ಚಲಿಸಿದರೂ ಸಹ, ಅಂತಾರಾಷ್ಟ್ರೀಯ ಹಣಕಾಸು ಬಂಡವಾಳದ ಗಡಿಯಾಚೆಗಿನ ಮುಕ್ತ ಹರಿವಿನ ಮೇಲೆ ನಿರ್ಬಂಧಗಳನ್ನು ಹೇರುವ ಅಂಶವನ್ನು ಟ್ರಂಪ್ ಪ್ರಸ್ತಾಪಿಸಲಿಲ್ಲ. ಅಂದರೆ, ಅವರು ತಮ್ಮ ಬಡಾಯಿ ಕೊಚ್ಚಿಕೊಳ್ಳುವ ಚುನಾವಣಾ ಪೂರ್ವದ ಭಾಷಣ–ಘೋಷಣೆಗಳಲ್ಲೂ ಸಹ ನವ ಉದಾರೀ ಏರ್ಪಾಟಿನ ತಿರುಳನ್ನು ಅಪ್ಪಿ–ತಪ್ಪಿಯೂ ಪ್ರಶ್ನಿಸಲಿಲ್ಲ. ಎರಡನೆಯದು, ರಕ್ಷಣಾತ್ಮಕ ವ್ಯಾಪಾರ ನೀತಿಯು ಟ್ರಂಪ್ ಅವರದೇ ಮೂಲ ಕಲ್ಪನೆಯಲ್ಲ. ಅದು ಒಬಾಮಾ ಆಳ್ವಿಕೆಯಡಿಯಲ್ಲೇ ಆರಂಭವಾಯಿತು. ಜೊತೆಗೆ, ರಕ್ಷಣಾತ್ಮಕ ವ್ಯಾಪಾರ ನೀತಿ ಮಾತ್ರವೇ ಅಮೆರಿಕದ ಅರ್ಥವ್ಯವಸ್ಥೆಯನ್ನು ಪುನಶ್ಚೇತನಗೊಳಿಸಲಾರದು; ಹೆಚ್ಚೆಂದರೆ ಅದು ಪೈಪೋಟಿಯ ಮೇಲೆ ರಫ್ತು ಮಾಡುವ ದೇಶಗಳಿಗೆ ನಷ್ಟವನ್ನುಂಟುಮಾಡುವ ರೀತಿಯ ಆಮದುಗಳ ಮೂಲಕ ಆಂತರಿಕ ಉತ್ಪಾದನೆಯನ್ನು ಉತ್ತೇಜಿಸಬಹುದೇ ವಿನಃ, ಆಂತರಿಕ ಮಾರುಕಟ್ಟೆಯ ಗಾತ್ರವನ್ನು ವಿಸ್ತರಿಸಲಾರದು. ಅದಕ್ಕಾಗಿ, ವಿತ್ತೀಯ ಕೊರತೆಯ ಮೂಲಕವಾಗಲಿ ಅಥವಾ ಶ್ರೀಮಂತರ ಮೇಲೆ ಹೇರುವ ತೆರಿಗೆಗಳ ಮೂಲಕವಾಗಲಿ ಒದಗಿಸಿಕೊಂಡ ಹಣದಿಂದ ಮಾತ್ರ ಕೈಗೊಳ್ಳುವ ಪ್ರಭುತ್ವದ ವೆಚ್ಚಗಳನ್ನು ಹೆಚ್ಚಿಸುವುದು ಅತ್ಯಗತ್ಯವಾಗುತ್ತದೆ. ಕಾರ್ಪೊರೇಟ್ ತೆರಿಗೆ ಕಡಿತದ ಬಗ್ಗೆ ಟ್ರಂಪ್ ಅವರಿಗೆ ಇರುವ ಒಲವು ಅವರ ಹಿಂದಿನ ಅಧ್ಯಕ್ಷೀಯ ಅವಧಿಯಲ್ಲೇ ಬಯಲಾಯಿತು. ಟ್ರಂಪ್, ಪ್ರಭುತ್ವದ ವೆಚ್ಚಗಳನ್ನು ಹೆಚ್ಚಿಸಲಾರರು. ಹಾಗಾಗಿ ಹೆಚ್ಚಿನ ರಕ್ಷಣೆಯಿಂದ ತಾತ್ಕಾಲಿಕವಾಗಿ ಉಂಟಾಗುವ ಗದ್ದಲದ ನಂತರ ಯುಎಸ್ ಅರ್ಥವ್ಯವಸ್ಥೆಯು ಸ್ಥಗಿತತೆಗೆ ಮತ್ತು ಬಿಕ್ಕಟ್ಟಿಗೆ ಮರಳುತ್ತದೆ.

ಜಾಗತಿಕವಾಗಿ–ಗಮನಿಸಿದ ನಡುಪಂಥೀಯ ಉದಾರವಾದದ ಕುಸಿತದ ವಿದ್ಯಮಾನದ ಅನುಗುಣವಾಗಿ ಟ್ರಂಪ್ ಅವರ ವಿಜಯವು ನಿರೀಕ್ಷಿತವೇ. ಅವರ ಆರ್ಥಿಕ ಕಾರ್ಯಸೂಚಿಯು ನವ ಉದಾರವಾದದ ಮೂಲ ತತ್ವಗಳಿಗೆ ಬದ್ಧವಾಗಿದೆ ಎಂಬುದನ್ನು ಜನರು ಗಮನಿಸಿಲ್ಲ ಎಂಬುದು ಕಂಡುಬರುತ್ತದೆ. ರಕ್ಷಣಾತ್ಮಕ ವ್ಯಾಪಾರ ಎಂಬುದು ಮಾತ್ರವೇ ಒಂದು ವ್ಯತ್ಯಾಸ. ಆದರೆ ಇದು ಕೂಡ ಹೆಚ್ಚೆಂದರೆ ತಾತ್ಕಾಲಿಕವಾಗಿ ಉದ್ಯೋಗಗಳನ್ನು ಹೆಚ್ಚಿಸಬಹುದು, ಆದರೆ ಅದೇ ವೇಳೆಗೆ ಅಗ್ಗದ ಆಮದುಗಳು ಇಲ್ಲದಿರುವುದರಿಂದಾಗಿ ಹಣದುಬ್ಬರದ ಪರಿಸ್ಥಿತಿ ಹದಗೆಡುತ್ತದೆ.

ಎಡ ಪಂಥವು ಮೇಲುಗೈ ಪಡೆಯಲು ಅಂತರರಾಷ್ಟ್ರೀಯ ಸನ್ನಿವೇಶವು ಅನುಕೂಲಕರವಾಗಿದೆ. ಎಡ ಪಂಥ ಮಾತ್ರವೇ ನವ ಉದಾರವಾದವನ್ನು ಕೊನೆಗೊಳಿಸುವ ಮೂಲಕ ಪ್ರಸಕ್ತ ಬಿಕ್ಕಟ್ಟನ್ನು ಕೊನೆಗೊಳಿಸಬಲ್ಲದು. ಮತ್ತು, ಎಡ ಪಂಥ ಮಾತ್ರವೇ ಪ್ರಸ್ತುತ ನಡೆಯುತ್ತಿರುವ ಯುದ್ಧಗಳಿಗೆ (ಈ ಯುದ್ಧಗಳಿಗೆ ನಡು–ಉದಾರವಾದವೇ ಹೊಣೆ ಹೊರಲೇ ಬೇಕಾಗುತ್ತದೆಯಾದರೂ ಈ ವಿಷಯವನ್ನು ನಂತರ ಚರ್ಚಿಸಬಹುದು) ಅಂತ್ಯವನ್ನು ತರಬಲ್ಲದು. ಈ ಕಾರ್ಯಸಾಧನೆಗಾಗಿ ಎಡ ಪಕ್ಷಗಳು ಸಿದ್ಧವಾಗಬೇಕಿದೆ. ❍

ಆರ್.ಬಿ.ಮೋರೆ...... ಪುಟ 16 ರಿಂದ

'ಅನುವಾದ ನನಗೆ ಸಂತೋಷ, ತೃಪ್ತಿ ತಂದ ಕೆಲವೇ ಪುಸ್ತಕಗಳಲ್ಲಿ ಇದು ಒಂದು) ಎಂದರು. ಅವರು ಮೋರೆ ಅವರ ಜೀವನ, ಪುಸ್ತಕ ಅನುವಾದದ ಪ್ರಕ್ರಿಯೆ (ಅಕ್ಷರ ಕಾಣದೆ, ಮಹಾಡ್ ಕೆರೆಗೆ ಇಳಿದು ನೀರು ಕುಡಿಯುವ ದೃಶ್ಯ ಕಾಣಬೇಕು, ಕೇಳಬೇಕು, ಮನುಸ್ಮೃತಿ ದಹನದ ಬಿಸಿ ತಟ್ಟಬೇಕು) ಕುರಿತು ಮನಮುಟ್ಟುವಂತೆ ಮಾತನಾಡಿದರು.

ಅನುವಾದಕ ಅಬ್ದುಲ್ ರೆಹಮಾನ್ ಪಾಷಾ, ಹೋರಾಟಗಾರರಾದ ಇಂದಿರಾ ಕೃಷ್ಣಪ್ಪ, ಗೋಪಾಲಕೃಷ್ಣ ಹರಳಹಳ್ಳಿ, ಆರ್.ಮೋಹನ್‌ರಾಜ್, ಸುಬ್ಬು ಹೊಲೆಯಾರ್, ಎನ್.ನಾಗರಾಜ್, ಕ್ರಿಯಾ ಮಾಧ್ಯಮದ ವಸಂತರಾಜ್ ಎನ್.ಕೆ., ಕೆ. ಎಸ್.ವಿಮಲಾ ಭಾಗವಹಿಸಿದ್ದರು.

'ಆರ್.ಬಿ. ಮೋರೆ: ಮೊದಲ ದಲಿತ ಕಮ್ಯುನಿಸ್ಟ್' ಪುಸ್ತಕದಿಂದ

ಎರಡು ರೀತಿಗಳಲ್ಲಿ ಇದು ಒಂದು ವಿಶಿಷ್ಟ ಕೃತಿ. ತಂದೆಯ ಅಪೂರ್ಣ ಸ್ವಚರಿತ್ರೆಯನ್ನು ಮಗ ಜೀವನಚರಿತ್ರೆಯಾಗಿ ಪೂರ್ಣಗೊಳಿಸಿರುವುದು ಒಂದು ವೈಶಿಷ್ಟ, ಪ್ರಸಕ್ತ ಸಂದರ್ಭದಲ್ಲಿ ಇನ್ನಷ್ಟು ಮಹತ್ವದ ಸಂಗತಿಯೆಂದರೆ, ಇದು ಬ್ರಿಟಿಷ್ ವಸಾಹತುಶಾಹೀ ಆಳ್ವಿಕೆಯ ಅಡಿಯಲ್ಲಿ ಭಾರತದಲ್ಲಿ ವರ್ಗ ದಮನ ಮತ್ತು ಜಾತಿದಮನದ ವಿರುದ್ಧ ಮೂಡಿಬಂದ ಎರಡು ಜನಾಂದೋಲನಗಳ ನಡುವಿನ ಸಂಬಂಧದ ಬಗ್ಗೆ ಸಾಮಾನ್ಯವಾಗಿ ಇರುವ ಕಲ್ಪನೆಗಳನ್ನು ಮರುವಿಮರ್ಶೆಗೆ ಒಳಪಡಿಸಲು ಪ್ರೇರೇಪಿಸುವ ಕೃತಿ.

ರಾಮಚಂದ್ರ ಬಾಬಾಜಿ ಮೋರೆ, ಡಾ.ಅಂಬೇಡ್ಕರರ ಆರಂಭದ ಮತ್ತು ಅತ್ಯಂತ ಪ್ರಖರ ಅನುಯಾಯಿಗಳಲ್ಲಿ ಒಬ್ಬರು. ಡಾ.ಅಂಬೇಡ್ಕರ್‌ರವರ ನೇತೃತ್ವದ 1927ರ ಐತಿಹಾಸಿಕ ಚವ್ದಾರ್ ಕೆರೆ ಸತ್ಯಾಗ್ರಹಕ್ಕೆ ದಾರಿ ಮಾಡಿಕೊಟ್ಟ ಅವರ ಮೊದಲ ಮಹಾಡ್ ಭೇಟಿಗೆ ಕಾರಣೀಭೂತರಾದವರು, ಅದನ್ನನುಸರಿಸಿ ನಡೆದ ಮನುಸ್ಮೃತಿ ದಹನದ ನಂತರ ಡಾ.ಅಂಬೇಡ್ಕರ್‌ರವರ ಅತ್ಯಂತ ವಿಶ್ವಾಸಾರ್ಹ ಸಹಯೋಗಿಯಾಗಿ ಹೊಮ್ಮಿದರು. ಅದಾದ ಮೂರು ವರ್ಷಗಳಲ್ಲೇ ಅವರು ಕಮುನಿಸ್ಟ್ ಪಕ್ಷ ಸೇರಿ ಅಚ್ಚರಿ ಮೂಡಿಸಿದರು? .. ..

(ಪ್ರಕಾಶಕರ ನುಡಿಯಿಂದ)

ಮೋರೆ ತಾನು ಕಮ್ಯುನಿಸ್ಟ್ ಪಾರ್ಟಿಯನ್ನು ಸೇರುವ ವಿಚಾರವನ್ನು ಇನ್ನೂ ಬಾಬಾಸಾಹೇಬರಿಗೆ ತಿಳಿಸಿರಲಿಲ್ಲ. ಅವರು ಏನೆಂದುಕೊಳ್ಳುವರೋ ಎಂದು ತುಸು ಸಂಕೋಚವಿತ್ತು. ಕೊನೆಗೂ ಒಮ್ಮೆ ತಿಳಿಸಿದಾಗ ಬಾಬಾಸಾಹೇಬರು ಇವರು ಅಂದುಕೊಂಡಂತೆ ಕೋಪಿಸಿಕೊಳ್ಳಲಿಲ್ಲ: ಅದರ ಬದಲಿಗೆ ಅವರು ಮೋರೆಯವರನ್ನು ಹೊಗಳಿದರು. ಮೋರೆಯವರ ಧೈರ್ಯ, ಪ್ರಾಮಾಣಿಕತೆಯನ್ನು ಮತ್ತು ಸಮರ್ಪಣೆಯನ್ನು ನೋಡಿ ನನ್ನಂತೆಯೇ ಇರುವ ಒಬ್ಬ ಶಿಷ್ಯ ನನಗಿದ್ದಾನೆ ಎಂದು ನನಗೆ ನಿಜವಾಗಿಯೂ ಹೆಮ್ಮೆಯಾಗುತ್ತದೆ; ದಲಿತರನ್ನು ಒಳಗೊಂಡ ಹಾಗೆ ಇಡೀ ಮಾನವ ಕುಲದ ವಿಮೋಚನೆಗಾಗಿ ಹೋರಾಡಲು ನಿರ್ಧರಿಸಿದ್ದಕ್ಕೆ ನನಗೆ ಸಂತೋಷವೇ ಆಗಿದೆ ಎಂದರು.

ಬಾಬಾಸಾಹೇಬರ ಭೇಟಿಯನ್ನು ಮುಗಿಸಿ ಹೊರಡುತ್ತಿರುವಾಗ ಮೋರೆಯವರು ಹೇಳಿದರು: "ಮಾನವ ಜನಾಂಗವನ್ನು ಎಲ್ಲಾ ಬಗೆಯ ಶೋಷಣೆಯಿಂದ ಮುಕ್ತಗೊಳಿಸುವ ಕಾರ್ಯದಲ್ಲಿ ತೊಡಗಲು ಹೊರಡುತರುವೆನಾದರೂ, ಬಂಡವಾಳಶಾಹಿ ಭೂಮಾಲಿಕತ್ವದ ಪ್ರಸ್ತುತ ವ್ಯವಸ್ಥೆಯಲ್ಲಿ ನೀವು ಆರಂಭಿಸಿರುವ, ದಲಿತರ ಸಾಮಾಜಿಕ ರಾಜಕೀಯ ಹಕ್ಕುಗಳ ಹೋರಾಟವೂ ಅಷ್ಟೇ ಮುಖ್ಯವಾದದು, ಕಮ್ಯುನಿಸ್ಟ್ ಚಿಂತನೆಯು ದಿಕ್ಕೂ ಅದೇ ಆಗಿದೆ...ದಲಿತರ ಸ್ವತಂತ್ರವಾದ ಹೋರಾಟ ಮತ್ತು ಆಮೂಲಾಗ್ರ ಕ್ರಾಂತಿಗಾಗಿ ಕಾರ್ಮಿಕರ ಹೋರಾಟವು ಜೊತೆಜೊತೆಗೇ ಸಾಗಬಹುದು ಎಂಬುದು ನನ್ನ ವಿಶ್ವಾಸವಾಗಿದೆ."

(ಸತ್ಯೇಂದ್ರ ಮೋರೆ ಬರೆದ ಜೀವನ ಚರಿತ್ರೆಯ ಆಯ್ದ ಭಾಗ)

ಪುಸ್ತಕದ ಬ್ಲರ್ಬಿನಿಂದ


ಈ ವಿಶಿಷ್ಟವಾದ ಕೃತಿಯಲ್ಲಿ ಮೋರೆ ಅವರೇ ಬರೆದ ಆತ್ಮಕಥೆಯು 1924ರ ಸುಮಾರಿಗೆ ಬಂದು ನಿಲ್ಲುತ್ತದೆ. ಅಪೂರ್ಣವಾಗಿ ಉಳಿಯುತ್ತದೆ. ಆದರೆ ಆರ್.ಬಿ.ಮೋರೆಯವರ ಮಗನಾದ ಸತ್ಯೇಂದ್ರ ಮೋರೆ ತಮ್ಮ ತಂದೆಯ ಜೀವನದ ಕತೆಯನ್ನು ಅಲ್ಲಿಂದ ಮುಂದುವರೆಸುತ್ತಾರೆ. ಆರ್.ಬಿ.ಮೋರೆಯವರ ಆತ್ಮಕಥನವು (ಇದು ಕಾಕತಾಳೀಯವಾದರೂ) ಮೋರೆಯವರು ಅಂಬೇಡ್ಕರ್ ಅವರನ್ನು ಮಹಾಡ್ ಸಮಾವೇಶಕ್ಕೆ ಕರೆಯಲು ಬಂದಿದ್ದರೊಂದಿಗೆ ಈ ಕೃತಿಯ ಮೊದಲ ಭಾಗ ಮುಗಿಯುವುದು ಸಾಂಕೇತಿಕವಾಗಿದೆ. ಇನ್ನೊಂದು ರೀತಿಯಲ್ಲಿ ಮೋರೆಯವರ ರಾಜಕೀಯ ಕ್ರಿಯಾಶೀಲತೆ ನಿಜವಾಗಿ ಆರಂಭವಾಗುವುದು ಇಲ್ಲಿಂದಲೇ. ಇದಕ್ಕೆ ಪೂರಕವಾಗಿ ನಿರೂಪಣೆ, ಶೈಲಿ ಇವುಗಳೂ ಕೂಡ ಬದಲಾಗುತ್ತವೆ. ಮೊದಲ ಭಾಗವು ದಲಿತ ಆತ್ಮಕಥೆಗಳ ಸಂಪ್ರದಾಯಕ್ಕೆ ಒಂದು ಉಜ್ವಲ ಸೇರ್ಪಡೆಯಾಗಿದೆ. ಎರಡನೇ ಭಾಗವು ಬಹುಮುಖ್ಯ ಕಾಲಮಾನವೊಂದರ ಚರಿತ್ರೆಯಾಗಿದೆ. ಸಹಜವಾಗಿಯೇ ಆತ್ಮಕಥೆಯ ಭಾಗವು ತನ್ನ ತೀವ್ರತೆ, ಅನಿರೀಕ್ಷಿತ ಘಟನೆಗಳು, ತಿರುವುಗಳು ಹಾಗೂ ಬರಹಗಾರನ ಅಪೂರ್ವವಾದ ಪ್ರಾಮಾಣಿಕತೆಯಿಂದ ಹೆಚ್ಚು ಪ್ರಭಾವಿಯಾಗಿದೆ. ದಲಿತ ಆತ್ಮಕಥೆಗಳಲ್ಲಿಯೇ ವಿಶಿಷ್ಟವಾಗಿದೆ. ನಮ್ಮ ಅನೇಕ ಪೂರ್ವಕಲ್ಪಿತ ನಿರೀಕ್ಷೆಗಳನ್ನು ಬುಡಮೇಲು ಮಾಡುವಷ್ಟು ಸಶಕ್ತವಾಗಿದೆ.

–ಪ್ರೊ. ರಾಜೇಂದ್ರ ಚೆನ್ನಿ

ದಲಿತರು ಮತ್ತು ಕಮ್ಯುನಿಸ್ಟರ ನಡುವೆ ಚಾರಿತ್ರಿಕವಾಗಿ ವಿಕಾಸಗೊಂಡಿರುವ ಸಕಾರಾತ್ಮಕ ಸಂಬಂಧಗಳನ್ನು ಭಾರತೀಯ ಎಡಪಂಥೀಯರು ನಿರ್ಲಕ್ಷಿಸಿದ್ದಾರೆ, ಮತ್ತು ಕೆಲವು ದಲಿತರು ಉದ್ದೇಶಪೂರ್ವಕವಾಗಿ ಬದಿಗೆ ತಳ್ಳಿದ್ದಾರೆ ಎಂಬ ಕಾರಣಕ್ಕೆ ಈ ಕೃತಿ ಅರ್ಥಪೂರ್ಣ ಮಹತ್ವವನ್ನು ಪಡೆಯುತ್ತದೆ. ಇಪ್ಪತ್ತನೇ ಶತಮಾನದ ಮಹಾರಾಷ್ಟ್ರದಲ್ಲಿ ದಲಿತರು ಮತ್ತು ಕಮ್ಯುನಿಸ್ಟರ ನಡುವಿನ ಸಂಬಂಧಗಳು ವಿಷಮಗೊಂಡಿರುವ ಪ್ರಶ್ನೆಯ ಮೇಲೆ ಖಂಡಿತವಾಗಿಯೂ ಪರಿಣಾಮ ಬೀರುವ ಸಾಮಾಜಿಕ–ಆರ್ಥಿಕ ಮತ್ತು ರಾಜಕೀಯ ಕ್ರಿಯೆಗಳನ್ನು ಕುರಿತಂತೆ ಬಹು ಅಗತ್ಯವಾದ ಒಳನೋಟಗಳನ್ನು ಈ ಕೃತಿ ಕೊಡುತ್ತದೆ.

–ಪ್ರೊ. ಗೋಪಾಲ ಗುರು

NEW No. MAG(3)/NPP/205/2021-2022
JANASHAKTHI KANNADA VARA PATRIKE November 25-December 1, 2024 Price: Rs. 10/- Date of Publication: 22 November 2024 RNI No. KARKAN /2006/17926 Posted on 26-11-2024
Posted at BG PSO, BG - 560026 **Posted at Periodical Rate -** Rs. 2





‘ಆರ್.ಬಿ.ಮೋರೆ ದಲಿತ ಮತ್ತು ಕಮ್ಯೂನಿಸ್ಟ್ ಚಳುವಳಿಗಳ ನಡುವಿನ ಸೇತುವೆಯಂತೆ ಇದ್ದರು’: ಡಾ.ಅಶೋಕ ಧವಳೆ

ವಸಂತರಾಜ್ ಎನ್.ಕೆ.

‘ಅಂಬೇಡ್ಕರ್, ಮೋರೆ ಮತ್ತು ಇಂದಿನ ಸಮರಶೀಲ ಚಳವಳಿ: ಸವಾಲುಗಳು, ಸಾಧ್ಯತೆಗಳು’ ಕುರಿತ ವಿಚಾರ ಸಂಕಿರಣದಲ್ಲಿ ಅಖಿಲ ಭಾರತ ಕಿಸಾನ್ ಸಭಾ ಅಧ್ಯಕ್ಷ ಡಾ. ಅಶೋಕ ಧವಳೆ ಅವರು ಹೀಗೆಂದರು ಅವರು ನವೆಂಬರ್ 16ರಂದು ಬೆಂಗಳೂರಿನ ‘ಸೌಹಾರ್ದ’ ಸಭಾಂಗಣದಲ್ಲಿ ನಡೆದ ವಿಚಾರ ಸಂಕಿರಣದ ಆಶಯ ಭಾಷಣ ಮಾಡುತ್ತಿದ್ದರು. ಅದೇ ಸಭೆಯಲ್ಲಿ ‘ಆರ್.ಬಿ. ಮೋರೆ: ಮೊದಲ ದಲಿತ ಕಮ್ಯುನಿಸ್ಟ್’ ಎಂಬ ಮೋರೆ ಅವರ ಸ್ವ-ಚರಿತ್ರೆ ಮತ್ತು ಜೀವನ ಚರಿತ್ರೆಯ ಪುಸ್ತಕ ಬಿಡುಗಡೆ ಸಹ ಮಾಡಲಾಯಿತು. ಅನುವಾದಕ ಅಬ್ದುಲ್ ರೆಹಮಾನ್ ಪಾಷಾ ತಮ್ಮ ಅನುಭವ ಹಂಚಿಕೊಂಡರು. ಪುಸ್ತಕ ಮತ್ತು ವಿಚಾರ ಸಂಕಿರಣದ ವಿಷಯಕ್ಕೆ ಇಂದಿರಾ ಕೃಷ್ಣಪ್ಪ, ಗೋಪಾಲಕೃಷ್ಣ ಹರಳಹಳ್ಳಿ, ಡಾ. ಆರ್. ಮೋಹನರಾಜ್, ಸುಬ್ಬು ಹೊಲೆಯಾರ್ ಸ್ಪಂದಿಸಿ ಮಾತನಾಡಿದರು.

ಮೋರೆ, ಬಾಲ್ಯದಿಂದಲೇ ತಾವು ಮತ್ತು ತಮ್ಮ ಸಮುದಾಯ ಅನುಭವಿಸುತ್ತಿದ್ದ ಅಸ್ಪೃಶ್ಯತೆಯ ಕ್ರೌರ್ಯದ ವಿರುದ್ಧ ಕಾರ್ಯಾಚರಣೆ ಆರಂಭಿಸಿದ್ದರು. ಅಂಬೇಡ್ಕರ್ ಅಭಿಮಾನಿಯಾಗಿದ್ದ ಮೋರೆ, ಪ್ರಸಿದ್ಧ ಮಹಾಡ್ ಕೆರೆಯ (ಮಾರ್ಚ್ 19–20, 1927) ಚಳವಳಿಯ ರೂವಾರಿ ಆಗಿದ್ದರು. ಅದು ಅಸ್ಪೃಶ್ಯತೆಯ ವಿರುದ್ಧ ಅಂಬೇಡ್ಕರ್ ನಾಯಕತ್ವದಲ್ಲಿ ನಡೆದ ಮೊದಲ ಸಾರ್ವಜನಿಕ ಹೋರಾಟವಾಗಿತ್ತು. ಚಾರಿತ್ರಿಕ ಮನುಸ್ಮೃತಿ ದಹನ ಕಂಡ (ಡಿಸೆಂಬರ್ 25, 1927) ಎರಡನೇ ಮಹಾಡ್ ಸಮ್ಮೇಳನದ ಸಂಘಟಕರೂ ಮೋರೆ ಅವರೇ ಆಗಿದ್ದರು. ಇವೆರಡೂ ಸಫಲ ಸಾರ್ವಜನಿಕ ಚಳುವಳಿಗಳಾಗಿದ್ದವು ಮತ್ತು ಇವೆರಡರಲ್ಲೂ ದಲಿತರು ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿದ್ದು ಮಾತ್ರವಲ್ಲದೆ, ಹಲವಾರು ಸವರ್ಣೀಯರು ಭಾಗವಹಿಸಿದ್ದರು ಎಂದು ಗಮನಿಸಬೇಕು ಎಂದು ಡಾ.ಧವಳೆ ಅವರು ಹೇಳಿದರು.

ನಾಸಿಕದ ಕಾಳಾರಾಂ ದೇವಸ್ಥಾನ ಪ್ರವೇಶ ಚಳುವಳಿ ಡಾ.ಅಂಬೇಡ್ಕರ್ ಹಮ್ಮಿಕೊಂಡ ಮೂರನೇ ಸಾರ್ವಜನಿಕ ಹೋರಾಟವಾಗಿತ್ತು. ಆದರೆ ಅದು ಐದು ವರ್ಷಗಳ ಕಾಲ (1930–35) ಸಮರಶೀಲವಾಗಿ ನಡೆದರೂ, ಬ್ರಾಹ್ಮಣರ ಹಠಮಾರಿ ಕಟುದೋರಣೆಯಿಂದಾಗಿ ಅದನ್ನು ಹಿಂತೆಗೆದುಕೊಳ್ಳಬೇಕಾಯಿತು. ಇದೇ ಅವರನ್ನು ‘ನಾನು ಹಿಂದೂವಾಗಿ ಹುಟ್ಟಿದ್ದರೂ, ಹಿಂದೂ ಧರ್ಮದಲ್ಲೇ ಸಾಯುವುದಿಲ್ಲ’ ಎಂದು ಘೋಷಿಸುವಂತೆ, ಮುಂದೆ ಬೌದ್ಧ ಧರ್ಮ ಸ್ವೀಕರಿಸುವಂತೆ ಮಾಡಿದ್ದು ಎಂಬುದರತ್ತ ಡಾ.ಧವಳೆ ಗಮನ ಸೆಳೆದರು.

1930ರ ಹೊತ್ತಿಗೆ ಮಾರ್ಕ್ಸ್‌ವಾದದತ್ತ ಆಕರ್ಷಿತರಾದ ಮೋರೆ ಕಮ್ಯುನಿಸ್ಟ್ ಪಕ್ಷ ಸೇರಿದರು. ದಲಿತರ ವಿಮೋಚನೆ, ಎಲ್ಲ ದುಡಿಯುವ ಜನರ ರೈತ–ಕಾರ್ಮಿಕರ ವಿಮೋಚನೆಯೊಂದಿಗೆ ತಳುಕು ಹಾಕಿಕೊಂಡಿದೆಯೆಂದು ಅರಿತುಕೊಂಡ ಅವರು, ರೈತ–ಕಾರ್ಮಿಕ ಚಳುವಳಿಗಳಲ್ಲಿ ಮಹತ್ವದ ಪಾತ್ರ ವಹಿಸಿದರು. ಈ ರೈತ–ಕಾರ್ಮಿಕ ಚಳುವಳಿಗಳಲ್ಲಿ ಮೋರೆ ಅವರ ದಲಿತ ಚಳುವಳಿಯ ಸಂಗಾತಿಗಳೂ ಭಾಗವಹಿಸಿದರು. ಅವರಲ್ಲಿ ಹಲವರು ಕಮ್ಯುನಿಸ್ಟ್ ಪಕ್ಷ ಸಹ ಸೇರಿದರು. ಹೀಗೆ ಮೋರೆ ದಲಿತ ಮತ್ತು ಕಮ್ಯುನಿಸ್ಟ್ ಚಳುವಳಿಗಳ ನಡುವಿನ ಸೇತುವೆಯಾಗಿದ್ದರು ಎಂದು ಡಾ.ಧವಳೆ ವಿವರಿಸಿದರು.

ಸಾಮಾನ್ಯವಾಗಿ ಹಲವರು ಟೀಕಿಸುವಂತೆ, ಕಮ್ಯುನಿಸ್ಟ್ ಪಕ್ಷ ಮತ್ತು ಚಳುವಳಿಗೆ ಭಾರತೀಯ ಸಮಾಜದ ಜಾತಿ–ಅಸ್ಪೃಶ್ಯತೆಯ ಕುರಿತು ಅರಿವೇ ಇರಲಿಲ್ಲ, ಈ ವಾಸ್ತವ ಅವರ ಧೋರಣೆ ಮತ್ತು ಕಾರ್ಯಾಚರಣೆಗಳನ್ನು ತಟ್ಟಲೇ ಇಲ್ಲವೆಂಬುದು ನಿಜವಲ್ಲ. 1930ರಲ್ಲೇ ಪ್ರಕಟಿಸಲಾದ ಪಕ್ಷದ ಪ್ರಣಾಳಿಕೆಯ ಮೊದಲ ಆವೃತ್ತಿ ಎನ್ನಬಹುದಾದ ‘ಕಾರ್ಯಾಚರಣೆಗೆ ವೇದಿಕೆ’(ಪ್ಲಾಟ್ ಫಾರ್ಮ್ ಫಾರ್ ಆಕ್ಶನ್)ಯಲ್ಲೇ ಜಾತಿ–ಅಸ್ಪೃಶ್ಯತೆಯ ಪ್ರಶ್ನೆಯನ್ನು ಎತ್ತಿಕೊಳ್ಳಲಾಗಿತ್ತು. ಮುಂದೆ 1940–50ರ ದಶಕದಲ್ಲಿ ಸ್ವತಂತ್ರ ದಲಿತ ಚಳುವಳಿ ಮತ್ತು ಡಾ.ಅಂಬೇಡ್ಕರ್ ಅವರ ಕುರಿತು ಪಕ್ಷದ ಧೋರಣೆಯಲ್ಲಿ ಕೆಲವು ತಪ್ಪುಗಳಾದವು. ಈ ತಪ್ಪುಗಳನ್ನು ಗುರುತಿಸಿ, ಅದರ ವಿರುದ್ಧ ಮೋರೆ ಪಕ್ಷದೊಳಗೆ ಹೋರಾಟ ನಡೆಸಿದರು. ಈ ಕುರಿತು ಪಕ್ಷದ ಕೇಂದ್ರೀಯ ನಾಯಕತ್ವಕ್ಕೆ ವಿವರವಾದ ಪತ್ರ (1953, 1957 ಮತ್ತು 1961ರಲ್ಲಿ) ಬರೆದು ಅವನ್ನು ಸರಿಪಡಿಸಲು ಅವಿರತ ಪ್ರಯತ್ನ ನಡೆಸಿದರು. (ಮೋರೆ ಅವರ 1953ರ ಪತ್ರ ಪುಸ್ತಕದಲ್ಲಿದೆ) ಅವರ ಪತ್ರವನ್ನು ಕೇಂದ್ರ ಮತ್ತು ರಾಜ್ಯ ಸಮಿತಿಗಳಲ್ಲಿ ಮಂಡಿಸಿ ಚರ್ಚಿಸಲಾಯಿತು. ಮೋರೆ ಅವರ ಹೆಚ್ಚಿನ ಅಂಶಗಳನ್ನು ಅಂಗೀಕರಿಸಿ, ಮುಂದೆ ಪಕ್ಷದ ಧೋರಣೆಗಳಲ್ಲಿ ಒಳಗೊಳ್ಳಲಾಯಿತು ಎಂದು ಡಾ.ಧವಳೆ ತಿಳಿಸಿದರು.

ಡಾ.ಅಂಬೇಡ್ಕರ್ ಅವರ States and Minorities ಪುಸ್ತಕದಲ್ಲಿ ಪ್ರಸ್ತಾವಿಸಿದ ಮತ್ತು ನಮ್ಮ ಸಂವಿಧಾನದ ಮೂಲತತ್ವಗಳ ಆಧಾರವಾದ ಮೂಲಭೂತವಾದ ಧೋರಣೆಗಳ ಕುರಿತು ಡಾ.ಧವಳೆ ಮಾತನಾಡಿದರು. ಪ್ರಮುಖ ಉದ್ಯಮಗಳು ಮತ್ತು ಭೂಮಿಯನ್ನು ರಾಷ್ಟ್ರೀಕರಿಸಬೇಕೆಂಬ ಪ್ರಸ್ತಾವ ಸೇರಿದಂತೆ, ಅಲ್ಲಿನ ಆರ್ಥಿಕ ಧೋರಣೆಗಳನ್ನು ಸಂವಿಧಾನದಲ್ಲಿ ಒಳಗೊಳ್ಳಲು ಸಾಧ್ಯವಾಗಲಿಲ್ಲ. ಡಾ.ಅಂಬೇಡ್ಕರ್ ನಂತರದ ಅಂಬೇಡ್ಕರ್ ವಾದಿಗಳು ಅದನ್ನು ಗಂಭೀರವಾಗಿ ಪರಿಗಣಿಸಲಿಲ್ಲ. ಎಡ ಚಳುವಳಿಯ ಅರಿವಿಗೂ ಅದು ಬರಲಿಲ್ಲ. ಎಂಬುದರತ್ತ ಡಾ.ಧವಳೆ ಗಮನ ಸೆಳೆದರು.

ಇವೆರಡು ಅಂಶಗಳು ಎಡ–ದಲಿತ ಚಳುವಳಿಗಳು ದೂರ ಸರಿಯುವುದಕ್ಕೆ ಕಾರಣವಾಯಿತೇನೋ ಎಂದು ಅವರು ಸೂಚ್ಯವಾಗಿ ಹೇಳಿದರು.

ಹೃದಯದಲ್ಲಿ ಅಂಬೇಡ್ಕರ್ ಸಿದ್ಧಾಂತ ಇರುವವರು ಬಿಜೆಪಿ, ಆರ್‌ಎಸ್‌ಎಸ್‌ಗೆ ಸೇರುವುದು ಬಿಡಿ, ಅವರ ಹತ್ತಿರವೂ ಕುಳಿತುಕೊಳ್ಳುವುದಿಲ್ಲ. ಆದರೆ, ಇಂದು ಬಾಯಲ್ಲಿ ಅಂಬೇಡ್ಕರ್ ಮಾತನಾಡುತ್ತಾ ಬಿಜೆಪಿಯೊಂದಿಗೆ ಕೈಜೋಡಿಸುವವರು ಹೆಚ್ಚಾಗಿದ್ದಾರೆ ಎಂದರು.

ಈ ಅಂಶವನ್ನು ಅವರು–2002 ಗುಜರಾತ್ ಮುಸ್ಲಿಮರ ಹತ್ಯಾಕಾಂಡದ ನಂತರ ಬಿಎಸ್‌ಪಿ ನಾಯಕಿ ಮಾಯಾವತಿ ಬಿಜೆಪಿ ಚುನಾವಣಾ ಪ್ರಚಾರಕ್ಕೆ ಹೋಗಿದ್ದು, ಅಥಾವಳೆ ಎನ್‌ಡಿಎ ಸೇರಿ ಸಚಿವರಾಗಿರುವುದು ಮತ್ತು ಇತ್ತೀಚಿನ ಮಹಾರಾಷ್ಟ್ರ ಚುನಾವಣೆಗಳಲ್ಲಿ ಕೆಲವು ಅಂಬೇಡ್ಕರ್‌ವಾದಿ ಪಕ್ಷಗಳು ಬಿಜೆಪಿಗೆ ಅನುಕೂಲವಾಗುವ ರೀತಿಯಲ್ಲಿ ಸ್ಪರ್ಧೆ ಮಾಡುತ್ತಿರುವುದು... ಈ ಉದಾಹರಣೆಗಳ ಮೂಲಕ ಸ್ಪಷ್ಟಪಡಿಸಿದರು. ಇದು ರ್‍ಯಾಡಿಕಲ್ ದಲಿತ ಚಳುವಳಿಗೆ ಸವಾಲು ಮತ್ತು ನಕಾರಾತ್ಮಕ ಅಂಶವೆಂದರು. ಆದರೆ ಅದೇ ಸಮಯದಲ್ಲಿ ಮಹಾರಾಷ್ಟ್ರದಲ್ಲೂ ಇತರ ರಾಜ್ಯಗಳಲ್ಲೂ ಯುವ ಅಂಬೇಡ್ಕರ್‌ವಾದಿ ಗುಂಪುಗಳು ಈ ನೀತಿಗಳ ನಕಾರಾತ್ಮಕತೆಯನ್ನು ಅರ್ಥಮಾಡಿಕೊಂಡಿದ್ದು ಹೊಸ ದಲಿತ ರ್‍ಯಾಡಿಕಲ್ ಚಳುವಳಿ ಕಟ್ಟುವತ್ತ ಹೋಗುತ್ತಿದ್ದಾರೆ ಎಂಬುದು ಸಕಾರಾತ್ಮಕ ಅಂಶವೆಂದರು.

ಬರಹಗಾರ ಬಂಜಗೆರೆ ಜಯಪ್ರಕಾಶ್ ಅವರು ಪುಸ್ತಕವನ್ನು ಪರಿಚಯಿಸುತ್ತಾ, ‘ಸಮಗ್ರ ಕ್ರಾಂತಿಯ ಹೊರತಾಗಿ ಜಾತಿ ರಹಿತ ಸಮಾಜ ಸೃಷ್ಟಿಸಲು ಸಾಧ್ಯವಿಲ್ಲ ಎಂದು ದಲಿತರಿಗೆ ಹೇಳುತ್ತಿದ್ದ ಮೋರೆಯವರು, ಜಾತಿಯನ್ನು ಅರ್ಥ ಮಾಡಿಕೊಂಡು ಕಾರ್ಯಕ್ರಮ ರೂಪಿಸದೇ ಇದ್ದರೆ ಪಕ್ಷ ಬೆಳೆಯಲು ಸಾಧ್ಯವಿಲ್ಲ ಎಂದು ಕಮ್ಯೂನಿಸ್ಟರಿಗೂ ಹೇಳುತ್ತಿದ್ದರು. ದಲಿತರಿಗೂ ಕಮ್ಯೂನಿಸ್ಟರಿಗೂ ಕನ್ನಡಿ ಹಿಡಿದಂತಿರುವ ಈ ಪುಸ್ತಕವನ್ನು ಎರಡೂ ಕಡೆಯವರು ಓದಬೇಕು’ ಎಂದರು.

‘ಒಟ್ಟಿಗೆ ಸಾಗಬೇಕಿದ್ದ ದಲಿತ ಮತ್ತು ಕಮ್ಯೂನಿಸ್ಟ್ ಚಳವಳಿಗಳು ಪರಸ್ಪರ ಅಪನಂಬಿಕೆಯಿಂದ ವಿರೋಧಿಸಿಕೊಂಡೇ ಬಹಳ ಸಮಯ ಬಂದಿದ್ದರಿಂದ, ಅತ್ತ ಜಾತಿ ವಿಮೋಚನೆಯೂ ಆಗಲಿಲ್ಲ, ಇತ್ತ ಸಮಗ್ರ ಕ್ರಾಂತಿಯೂ ಆಗಲಿಲ್ಲ’ ಎಂದು ಹೇಳಿದರು.

‘ಅನುವಾದಕರೇ ಕಾಣದ, ಮೋರೆಯವರೇ ನಮಗೆ ನೇರವಾಗಿ ಕಾಣುತ್ತಿದ್ದಾರೆ’, ‘ಪುಸ್ತಕ ಕನ್ನಡದಲ್ಲೆ ಬರೆಯಲಾಗಿದೆಯೇನೋ ಎಂಬಂತಿದೆ’ ಇತ್ಯಾದಿ ಈ ಸಭೆಯಲ್ಲಿ ಮಾತನಾಡಿದ ಎಲ್ಲರ ಮೆಚ್ಚುಗೆ, ಹೊಗಳಿಕೆಗೆ ಪಾತ್ರವಾದ ಪಾಷಾ ಅವರು

ಪುಟ 15 ಕ್ಕೆ



JANASHAKTHI KANNADA VARA PATRIKE: Printed, Published by **U. BASAVARAJA**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**